# ಪ್ರವಾದಿ ಮುಹಮ್ಮದ್(ಸ) (ಸಂಕ್ಷಿಪ್ತ ಪರಿಚಯ)

কিউ এস খান
**B.E (Mech)**

**Tanveer Publication**
Hydro Electric Machinari Primaises
A-13, Ram Rahim Udyog Nagar, Bus stop lane,
L.B.S Marg, Sonapur, Bhandup (West)
Mumbai- 400078
Phone - 022-25965930 Cell- 9320064026
E-mail- hydelect@vsnl.com, hydelect@mtnl.net.in
Website- **www.freeeducation.co.in**

**No Copyright**

The copyright of this book is with Q. S. Khan. But if nothing is reduced from or added to it, it is permitted for anyone to translate and print it without the permission of the copyright owner. If you find any mistake in this book, please inform us, so that we may correct it in the future editions of the book.

ಪ್ರವಾದಿ ಮುಹಮ್ಮದ್(ಸ)(ಸಂಕ್ಷಿಪ್ತ ಪರಿಚಯ)

**ISBN No-978-93-80778-21-1**

**First Edition : Feb 2015**

Price: ₹ **40/-**

Printed by

**Al Qalam PUBLICATION PVT. LTD.**

3, Gali Garhaiyya Bazar Matia Mahal, Jama Masjid, Delhi-6

Tel :- 011-23241481, 23261481. Fax :- 011-23241481.

E-mail :- alqalambooks@gmail.com

# ಮುನ್ನುಡಿ

ಸೃಷ್ಟಿಕರ್ತನು ಈ ವಿಶ್ವವನ್ನು 450 ಕೋಟಿ ವರ್ಷಗಳ ಹಿಂದೆ ಸೃಷ್ಟಿಸಿದನು. ವಿಶ್ವವನ್ನು ಮತ್ತು ಮನುಷ್ಯರನ್ನು ಸೃಷ್ಟಿಸುವ ಮೊದಲು ಆತನು ನಮ್ಮ ಆತ್ಮಗಳನ್ನು ಸೃಷ್ಟಿಸಿದನು. (ಪವಿತ್ರ ಕುರ್‌ಆನ್ 7:11) ಇದರ ಅರ್ಥ ನಾವು ಈ ವಿಶ್ವದಲ್ಲಿ ಬಹು ದೀರ್ಘ ಕಾಲದಿಂದ ಅಸ್ತಿತ್ವದಲ್ಲಿದ್ದೇವೆ. ಆತ್ಮಕ್ಕೆ ಸಾವಿಲ್ಲ. ಆದುದರಿಂದ ಭವಿಷ್ಯದಲ್ಲೂ ನಾವು ಶಾಶ್ವತವಾಗಿ ಇರುವೆವು.

ಮರಣದ ನಂತರದ ಜೀವನದಲ್ಲಿ ನಾವು ಸುಖದಿಂದ ಇರಬೇಕೋ ಅಥವಾ ದುಃಖದಲ್ಲಿ ಇರಬೇಕೋ ಎನ್ನುವುದು ಇಹಲೋಕದ ಜೀವನವನ್ನು ಅವಲಂಬಿಸಿದೆ. ಇಹಲೋಕದಲ್ಲಿ ನಾವು ಕೈಗೊಳ್ಳುವ ಜೀವನ ಶೈಲಿಯ ಮೇಲೆ ನಮ್ಮ ಮರಣೋತ್ತರ ಜೀವನ ನೆಲೆ ನಿಂತಿದೆ!

ಆದುದರಿಂದ ಇಹಲೋಕದಲ್ಲಿ ನಾವು ಆಯ್ಕೆ ಮಾಡುವ ಜೀವನ ವಿಧಾನವನ್ನು ನಾವು ಲಘುವಾಗಿ ಪರಿಗಣಿಸುವಂತಿಲ್ಲ. ಇದು ಬಹಳ ಗಂಭೀರವಾದ ವಿಷಯವಾಗಿದೆ.

ಈ ಪುಸ್ತಕದಲ್ಲಿ ನಾನು ಪ್ರವಾದಿ ಮುಹಮ್ಮದ್(ಸ)ರ ಪರಿಚಯವನ್ನು ಪ್ರಸ್ತುತ ಪಡಿಸುತ್ತಿದ್ದೇನೆ. ಪ್ರವಾದಿ ಮುಹಮ್ಮದ್(ಸ)ರ ಜೀವನವನ್ನು ಅಧ್ಯಯನ ಮಾಡಿದ ದಾರ್ಶನಿಕರು, ಚಿಂತಕರು, ವಿಚಾರವಾದಿಗಳೆಲ್ಲರೂ ಪ್ರವಾದಿವರ್ಯರನ್ನು ಶ್ಲಾಘಸಿದ್ದಾರೆ. ಮಹಾ ಪುರುಷ ಗ್ಯಾನಿ ವೇದ ವ್ಯಾಸರು, ಮಹಾಕವಿ, ತುಲಸಿದಾಸರು, ಸಂತ ತುಕಾರಾಮ ಮೊದಲಾದವರೂ ಪ್ರವಾದಿ ಮುಹಮ್ಮದ್(ಸ)ರನ್ನು ಹಾಡಿ ಹೊಗಳಿದ್ದಾರೆ.

ಮರಣದ ನಂತರದ ಜೀವನ ಸಫಲವಾಗಲು ಪ್ರವಾದಿ ಮುಹಮ್ಮದ್(ಸ)ರ ಜೀವನದ ಅಧ್ಯಯನ ಮತ್ತು ಅವರ ಬೋಧನೆಗಳ ಅನುಸರಣೆ ಅವಶ್ಯಕವಾಗಿದೆ. ಇದನ್ನು ಗಮನದಲ್ಲಿರಿಸಿ ಈ ಪುಸ್ತಕವನ್ನು ರಚಿಸಲಾಗಿದೆ.

ಈ ಪುಸ್ತಕವು ಮುಸ್ಲಿಮೇತರ ಬಂಧುಗಳಲ್ಲಿ ಇಸ್ಲಾಮಿನ ಬಗ್ಗೆ, ಮುಸ್ಲಿಮರ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು, ಅಪನಂಬಿಕೆಗಳನ್ನು ದೂರೀಕರಿಸಲು ಸಹಕಾರಿಯಾಗುದೆಂದು ಆಶಿಸಲಾಗಿದೆ.

ಅನೇಕ ಗ್ರಂಥಗಳ ಅಧ್ಯಯನದ ನಂತರ ಈ ಪುಸ್ತಕವನ್ನು ಬರೆಯಲಾಗಿದೆ. ಈ ಕೃತಿಯಲ್ಲಿ ಯಾವುದೇ ನ್ಯೂನತೆಗಳು, ತಪ್ಪುಗಳು ಕಂಡು ಬಂದಲ್ಲಿ ಅದನ್ನು ಗಮನಕ್ಕೆ ತರಲು ಕೋರಲಾಗಿದೆ. ಪುಸ್ತಕದ ಮುಂದಿನ ಆವೃತ್ತಿಗಳಲ್ಲಿ ಅವುಗಳನ್ನು ಸರಿಪಡಿಸಲಾಗುವುದು.

ನಿಮ್ಮ ಸಹೋದರ
ಕ್ಯೂ. ಎಸ್. ಖಾನ್.
hydelect@vsnl.com

# ಪರಿವಿಡಿ

ಅಧ್ಯಾಯವಿಷಯಪುಟ ಸಂಖ್ಯೆ


| | | |
|---|---|---|
| ೧. | ಹ. ಮುಹಮ್ಮದ್(ಸ)ರ ಪೂರ್ವಜರು | ೧ |
| ೨. | ಹ. ಮುಹಮ್ಮದ್(ಸ)ರ ಕುಟುಂಬ | ೧೫ |
| ೩. | ಪ್ರವಾದಿತ್ವದ ಮೊದಲು ಹ. ಮುಹಮ್ಮದ್(ಸ)ರ ಜೀವನ | ೧೮ |
| ೪. | ಹ. ಮುಹಮ್ಮದ್(ಸ) –ಪ್ರವಾದಿಯಾಗಿ 21–34 | ೨೧ |
| ೫. | ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಪ್ರಖ್ಯಾತ ವಿದ್ವಾಂಸರ ಅಭಿಪ್ರಾಯ | ೩೨ |
| ೬. | ಹ. ಮುಹಮ್ಮದ್(ಸ)ರ ಗುಣ ನಡತೆ | ೪೪ |
| ೭. | ಹ. ಮುಹಮ್ಮದ್(ಸ)ರ ಗುಣ ನಡತೆ | ೫೬ |
| ೮. | ಸೃಷ್ಟಿಕರ್ತನ ಅಸ್ತಿತ್ವದ ಬೋಧನೆಗಳು | ೬೧ |
| ೯. | ಪ್ರವಾದಿಗಳು ಯಾರು? | ೧೨ |
| ೧೦. | ಪ್ರವಾದಿಗಳ ಶತ್ರುಗಳು | ೧೮ |
| ೧೧. | ಮುಹಮ್ಮದ್(ಸ) ಹಿಂಸೆಯನ್ನು ಬೋಧಿಸಿದ್ದರೇ? | ೮೪ |
| ೧೨. | ಹ. ಮುಹಮ್ಮದ್(ಸ)ರ ಬಹು ವಿವಾಹಗಳು | ೯೯ |
| ೧೩. | "ಅಗ್ನಿ"ಯ ರಹಸ್ಯ | ೧೧೧ |
| | ಪ್ರವಾದಿ ಮುಹಮ್ಮದ್(ಸ)ರ ಕುರಿತು ಕೆಲವು ಸ್ಪಷ್ಟೀಕರಣ | ೧೧೧ |


**Glossary :-**

**B.C** = B.C mean before birth of Jesus chirst

**A.D** = AD mean (Anno Domini) after birth of Jesus Christ.

**(S)** = Sallalahu alehi wasallam means, Peace may be upon him and his family.

(This sentence is said or written after pronouncing or writing name of prophet mohammed. As this sentence is too long so we write only (s))

**R.** = Razi allah Anhu. (God may be pleased with him)

(This sentence is said or written after pronouncing or writing name of companion of prophet mohammed(s))

**A.S** = Alai his salam (This sentence is said or written after prononcing or writting names of prophets.)

# ಹ. ಮುಹಮ್ಮದ್(ಸ)ರ ಪೂರ್ವಜರು

ಹ. ಆದಮ್(ಅ):

ಭವಿಷ್ಯ ಪುರಾಣದಲ್ಲಿ ಶ್ರೀ. ವಿಷ್ಣು ಆದಮ್ ಮತ್ತು ಹವ್ವಾರನ್ನು ಪ್ರಧಾನ ನಗರದ (ಸ್ವರ್ಗ) ಉತ್ತರ ಭಾಗದಲ್ಲಿ ಕೆಸರಿನಿಂದ ಸೃಷ್ಟಿಸಿದನು ಎಂದು ಹೇಳಲಾಗಿದೆ. ಅದು 4 ಕೋಸು ವಿಸ್ತಾರವುಳ್ಳ ಅರಣ್ಯವಾಗಿತ್ತು. (ಒಂದು ಕೋಸು =4 ಚದರ ಮೈಲು). ತಮ್ಮ ಪತ್ನಿಯನ್ನು ನೋಡುವ ಆತುರದಲ್ಲಿ ಹ. ಆದಮ್(ಅ) ಪಾಪದ ಗಿಡದ ಬಳಿ ತೆರಳುತ್ತಾರೆ. ಈ ಸಂದರ್ಭದಲ್ಲಿ ಶೈತಾನನು ಹಾವಿನ ರೂಪದಲ್ಲಿ ಅವರ ಬಳಿಗೆ ಬರುತ್ತಾನೆ. ಆದಮ್ ಮತ್ತು ಹವ್ವಾ ಶೈತಾನನಿಂದ ಮೋಸಗೊಳಿಸಲ್ಪಡುತ್ತಾರೆ. ಹ. ಆದಮ್(ಅ) ನಿಷೇಧಿತ ಗಿಡದಿಂದ ಹಣ್ಣನ್ನು ತಿಂದು ವಿಷ್ಣುವಿನ ಆಜ್ಞೆಯ ಉಲ್ಲಂಘನೆ ಮಾಡುತ್ತಾರೆ. ಇದರ ಪರಿಣಾಮವಾಗಿ ಅವರನ್ನು ಭೂಮಿಯ ಮೇಲೆ ಇಳಿಸಲಾಗುತ್ತದೆ. ಅವರಿಗೆ ಅನೇಕ ಮಕ್ಕಳು ಹುಟ್ಟಿದ್ದರು: ಹ. ಆದಮ್(ಅ)930 ವರ್ಷಗಳ ಕಾಲ ಬಾಳಿದ್ದರು. (ಭವಿಷ್ಯ ಪುರಾಣ)

ಪವಿತ್ರ ಕುರ್‌ಆನ್ ಮತ್ತು ಪವಿತ್ರ ಬೈಬಲ್ ಸಹ ಇದೇ ವೃತ್ತಾಂತವನ್ನು ಹೇಳುತ್ತವೆ:

ಸನಾತನ ಧರ್ಮದಲ್ಲಿ (ಹಿಂದೂ ಧರ್ಮ) ಪ್ರವಾದಿಗಳನ್ನು 'ಮನು' ಎಂದು ಕರೆಯಲಾಗಿದೆ. ಹಿಂದೂ ಧರ್ಮ ಗ್ರಂಥಗಳಲ್ಲಿ 14 'ಮನು'ಗಳ ಹೆಸರನ್ನು ಉಲ್ಲೇಖಿಸಲಾಗಿದೆ. ಹ. ಆದಮ್(ಅ) ಪ್ರಥಮ ಮನು ಆಗಿರುವರು. ಒಂಬತ್ತನೇಯ ಮನುರವರ ಕಾಲದಲ್ಲಿ 'ಮಹಾ ಪ್ರವಾಹ' ಬಂದಿದ್ದು, ಈ ಒಂಬತ್ತನೇಯ ಮನು ಹ. ನೂಹ್(ಅ) ಆಗಿದ್ದರು. ಇವರೇ ಮನುಸ್ಮೃತಿಯು ಕರ್ತರಾಗಿರುವರು.

ಇಡಿ ಮಾನವ ಕುಲವು ಹ. ಆದಮ್(ಅ)ರ ಸಂತತಿಯಾಗಿದೆ. ಋಗ್ವೇದವು ಇದನ್ನೇ ಹೇಳುತ್ತದೆ.

जन मनुजात। (ऋग्वेद १:४५:१)

"ಎಲ್ಲರೂ ಮನುವಿನ ಸಂತತಿಯಾಗಿರುವರು" (ಋಗ್ವೇದ 1:45)

ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಹೇಳಲಾಗಿದೆ.

"ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಸ್ತ್ರೀಯಿಂದ ಉಂಟು ಮಾಡಿದೆವು. ಪರಿಣಾಮ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮನ್ನು ಜನಾಂಗಗಳನ್ನೂ,ಗೋತ್ರಗಳನ್ನು ಮಾಡಿದೆವು". (ಕುರ್‌ಆನ್ 49:13)

ಆದುದರಿಂದ ಹ. ಆದಮ್(ಅ) ಹ. ಮುಹಮ್ಮದ್(ಸ) ರನ್ನು ಒಳಗೊಂಡಂತೆ ನಮ್ಮೆಲ್ಲರ ಪೂರ್ವಜರಾಗಿರುವರು.

ಹ. ನೂಹ್ (ಅ):

ಮಾರ್ಕಂಡೇಯ ಪುರಾಣ, ಭವಿಷ್ಯ ಪುರಾಣ ಮತ್ತು ಮತ್ಸ ಪುರಾಣಗಳು ಮನುವಿನ ಕಾಲದ'ಲ್ಲಿ ವ'ಂಹಾ ಪ್'ರವಾಹ' ಉಂಟಾಯಿತೆಂದು, ಈ ಪ್ರವಾಹದಲ್ಲಿ ಮನು ಮತ್ತು ಏಕದೇವನಲ್ಲಿ ವಿಶ್ವಾಸವಿಟ್ಟವರನ್ನು ಹೊರತುಪಡಿಸಿ ಇತರೆಲ್ಲರೂ ಪ್ರವಾಹದಲ್ಲಿ ನಾಶ ಹೊಂದಿದರೆಂದು ಹೇಳುತ್ತದೆ.

ಹ. ನೂಹ್(ಅ) ಸ್ವತಃ ಹಡಗನ್ನು ನಿರ್ಮಿಸಿದ್ದರು. ಹ. ನೂಹ್(ಅ) ಹಡಗಿನಲ್ಲಿ ತಮ್ಮ ಜೊತೆ ಏಕದೇವನಲ್ಲಿ ವಿಶ್ವಾಸವಿರಿಸುವವರನ್ನು ಜೊತೆಗೆ ಒಯ್ದರು. ಇವರೊಂದಿಗೆ ಪ್ರತಿಯೊಂದು ಜೀವಿಗಳ ಒಂದೊಂದು ಜೊತಯನ್ನು ಒಯ್ದರು. ಇವರೆಲ್ಲರ ಹೊರತಾಗಿ ಇತರ ಎಲ್ಲರೂ ಪ್ರವಾಹದಲ್ಲಿ ನಾಶ ಹೊಂದಿದರು.

ಮೇಲಿನ ಘಟನೆಯನ್ನು ವಿವರಗಳನ್ನು ಹೋಲುವ ವಿವರಗಳನ್ನು ಕುರ್‌ಆನ್(11:25–48) ಮತ್ತು ಬೈಬಲ್(ಜಿನೆಸಸ್ 6–8) ನೀಡುತ್ತವೆ.

ಹ. ನೂಹ್(ಅ) (ಮನು), ಹ. ಆದಮ್(ಅ)ರ ಒಂಭತ್ತನೇಯ ಪೂರ್ವಜರಾಗಿದ್ದರು. ಹ. ನೂಹ್(ಅ)ರ ಹಿರಿಯ ಪೂರ್ವಜರಾಗಿದ್ದರು. ಹ. ನೂಹ್(ಅ)ರ ಹಿರಿಯ ಪೂರ್ವಜರ ಹೆಸರುಗಳು ಹೀಗಿವೆ:

ಆದಮ್(ಅ), ಚೆರ್ಚ್(ಅ), ಅನೂಷ್, ಮಹ್‌ಲೈಲ್, ಯಾರಿದ್, ಅಂಕುಶ್, ಮೆಥುಸೆಲಹ್, ಮತ್ತು ಲೂನಿಕ್. ಹ. ನೂಹ್(ಅ) (ಮನು) ಪ್ರವಾದಿ ಮುಹಮ್ಮದ್(ಸ)ರ ಎರಡನೆಯ ಹೆಸರಾಂತ ಪೂರ್ವಜರಾಗಿರುವರು.

ಹ. ಇಬ್ರಾಹೀಮ್(ಅ) (ಅಭಿರಾಮ್)

ಜನರು ಸೃಷ್ಟಿಕರ್ತನನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಉದಾಹರಣೆಗೆ ಅಲ್ಲಾಹ್, ಮಾಲಿಕ್, ರೆಹ್ಮಾನ್, ರಹೀಮ್ ಮೊದಲಾದವುಗಳು. ಗುಣಗಳಿಗೆ ಅನುಗುಣವಾಗಿ ಸೃಷ್ಟಿಕರ್ತನ 99 ಹೆಸರುಗಳಿವೆ ಕೆಲ ಹೆಸರುಗಳು ಹೀಗಿವೆ:

ಖಾಲಿಖ್(ಸೃಷ್ಟಿಕರ್ತ), ಮಾಲಿಕ್(ಒಡೆಯ), ರಹೀಮ್(ಕರುಣಾಮಯಿ), ಗಫೂರ್(ಕ್ಷಮಿಸುವವನು) ಮೊದಲಾದವುಗಳು.

ಪವಿತ್ರ ಕುರ್‌ಆನ್ನಲ್ಲಿ ಕೆಲವು ಹೆಸರುಗಳು ಉಲೇಖಿಸುತ್ತದೆ. ಉದಾಹರಣೆಗೆ ಹ. ಮುಹಮ್ಮದ್(ಸ)ರನ್ನು ಕುರ್‌ಆನಿನಲ್ಲಿ ಈ ರೀತಿ ಅಭಿಸಂಭೋದಿಸಲಾಗಿದೆ.

"ನೋಡಿರಿ, ನಿಮ್ಮ ಬಳಿಗೆ ಓರ್ವ ಸಂದೇಶವಾಹಕರು ಬಂದಿರುತ್ತಾರೆ. ಅವರು ನಿಮ್ಮವರಿಂದಲೇ ಆಗಿರುತ್ತಾರೆ. ನೀವು ನಷ್ಟ ಹೊಂದುವುದು ಅವರಿಗೆ ಅಸಹನೀಯವಾಗಿದೆ. ಅವರು ನಿಮ್ಮ ಯಶಸ್ಸಿಗೆ ಹಂಬಲಿಸುವವರಾಗಿದ್ದಾರೆ. ಅವರು ಸತ್ಯವಿಶ್ವಾಸಿಗಳಿಗೆ ವತ್ಸಲರು ಕರುಣಾಳುವೂ ಆಗಿರುತ್ತಾರೆ." (ಪವಿತ್ರ ಕುರ್‌ಆನ್ 9:128)

ಇದೇ ರೀತಿಯಲ್ಲಿ ಹಿಂದೂ ಧಾರ್ಮಿಕ ಗ್ರಂಥಗಳಲ್ಲಿಯೂ ಸಹ ಕೆಲ ಪ್ರವಾದಿಗಳನ್ನು ಅವರ ಗುಣ ವೈಶಿಷ್ಟ್ಯಗಳಿಂದ ಉಲ್ಲೇಖಿಸಲಾಗಿದೆ. ಉದಾಹರಣೆಗೆ ಹರೀಶ ವಂಶ ಪುರಾಣದಲ್ಲಿ ಬ್ರಹ್ಮನು ತನ್ನ ದೇಹವನ್ನು ಎರಡು ವಿಭಾಗಗಳಾಗಿ ವಿಭಜಿಸಿದನೆಂದು ಹೇಳಲಾಗಿದೆ. ಒಂದು ಭಾಗವು ಪುರುಷನಾಗಿಯೂ, ಮತ್ತೊಂದು ಭಾಗವು ಸ್ತ್ರೀಯಾಗಿಯೂ ಮಾರ್ಪಟ್ಟಿತು.

ಇದನ್ನು ಹೋಲುವ ಘಟನೆಯು ಬೈಬಲ್‌ನಲ್ಲಿ ಮತ್ತು ಮುಸ್ಲಿಮರ ಪರಂಪರೆಗಳಲ್ಲಿ ಉಲ್ಲೇಖಿತವಾಗಿದೆ. ಇವುಗಳಲ್ಲಿ ಹ. ಆದಮ್(ಅ)ರ ಎಡ ಪಕ್ಕೆಲುಬಿನಿಂದ ಹವ್ವಾರನ್ನು ಸೃಷ್ಟಿಸಲಾಗಿದೆ ಎಂದು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಹರೀಶವಂಶ ಪುರಾಣದಲ್ಲಿ ಉಲ್ಲೇಖವಾಗಿರುವ 'ಬ್ರಹ್ಮನು' ಸೃಷ್ಟಿಕರ್ತನಾಗಿರದೇ ಹ. ಆದಮ್(ಅ)

ಆಗಿರುವರು.

ಇದೇ ರೀತಿ, ಅಥರ್ವ ವೇದದಲ್ಲಿ ಹ. ಇಬ್ರಾಹೀಮ್(ಅ)ರನ್ನು ಬ್ರಹ್ಮನೆಂದು ಉಲ್ಲೇಖಿಸಲಾಗಿದೆ. ಅಥರ್ವವೇದದಲ್ಲಿ ಬ್ರಹ್ಮನು ತನ್ನ ಮಗ ಅಥರ್ವನ ಬಲಿಯನ್ನು ನೀಡಿದನೆಂದು ಹೇಳಲಾಗಿದೆ. ಈ ಘಟನೆಯನ್ನು ಹೋಲುವ ಪ್ರಸಂಗ ಈ ರೀತಿ ವಿವರಿಸಲ್ಪಟ್ಟಿದೆ.

"ಹ. ಇಬ್ರಾಹೀಮ್(ಅ) ತಮ್ಮ ಪುತ್ರ ಹ. ಇಸ್ಮಾಈಲ್(ಅ)ರ ಬಲಿಯನ್ನು ನೀಡಿದರು". (ಪವಿತ್ರ ಕುರ್‌ಆನ್ 27:105)

ಹ. ಇಬ್ರಾಹೀಮರು ತಮ್ಮ ಪುತ್ರನ ಬಲಿಯನ್ನು ನೀಡಿದ ಘಟನೆಯ ಪ್ರಸ್ತಾಪವು ಬೈಬಲ್‌ನಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ.

(ಜಿನೆಸಿಸ್ 22)

ಆದುದರಿಂದ, ಅಥರ್ವವೇದದಲ್ಲಿ ಉಲ್ಲೇಖಿಸಿರುವ ಬ್ರಹ್ಮನು ಸೃಷ್ಟಿಕರ್ತನಾಗಿರದೇ, ಹ. ಇಬ್ರಾಹೀಮ್(ಅ) ಆಗಿರುವರು. ಯಹೂದಿಯರು, ಕ್ರೈಸ್ತರು ಮತ್ತು ಮುಸ್ಲಿಮರು ಹ. ಇಬ್ರಾಹೀಮ್(ಅ)ರನ್ನು ಮಹಾನ್ ಪ್ರವಾದಿ ಎಂದು ನಂಬುತ್ತಾರೆ. ಹ. ಇಬ್ರಾಹೀಮ್(ಅ) ಅನೇಕ ಪ್ರವಾದಿಗಳ ಪಿತಾಮಹರಾಗಿರುವರು. ಅಂತೆಯೇ ಹ. ಮುಹಮ್ಮದ್(ಸ)ರ ಪೂರ್ವಿಕರಾಗಿರುವರು.

ಹ. ಇಬ್ರಾಹೀಮ್ ಮನುವಿನ 10ನೇಯ ಸಂತತಿಯಾಗಿರುವರು. ನಡುವಿನ ತಲೆಮಾರುಗಳ ಹೆಸರು ಇಂತಿವೆ.

ನೂಹ್(ಮನು)-ಸಾಮ್-ಅರಫ್‌ಕಷದ್-ಶಲೇಖ್-ಅಬೀರ್,ಫಾಲಿಖ್-ಅಬ್ರಗು-ಶಹ್ರೂ-ತಾಹ್ರ್-ತಾರಿಹ್(ಅರ್ಝ್‌ಹೂರ್)_ಇಬ್ರಾಹೀಮ್. (ತಿತಿತಿ.ತಿಞುಠಿಜಜುಚಿ.ಠಡಿರ)

ಹ. ಇಸ್ಮಾಈಲ್(ಅ)

ಅಥರ್ವವೇದದಲ್ಲಿ ಬ್ರಹ್ಮನು(ಹ. ಇಬ್ರಾಹೀಮ್(ಅ)) ತಮ್ಮ ಪುತ್ರ ಅಥರ್ವ(ಹ.ಇಸ್ಮಾಈಲ್(ಅ))ರನ್ನು ಬಲಿ ನೀಡುವ ಘಟನೆಗೆ 'ಪುರುಷ ಮೇಧ' ಎಂದು ಹೆಸರಿಸಲಾಗಿದೆ. 'ಪುರುಷ ಮೇಧ'ವನ್ನು ವರ್ಣಿಸುವ ಎರಡು ಶ್ಲೋಕಗಳು ಹೀಗಿವೆ.

मूर्धानमस्य संसीव्याथर्वा हृदयं च यत् ।

मस्तिश्कादूर्ध्व पैरयत् पवमानोधि शीर्शत:
तद् वा अथर्वरा: शिरो देवकोश: समुब्जित:
तत् प्रारो अभि रक्षति शिरो अन्नमथो मन:
(अथर्ववेद १०:२:२६)

ಕೊನೆಯ ಶ್ಲೋಕದ ಅರ್ಥ ಇಂತಿದೆ:

"ಬ್ರಹ್ಮನು ತನ್ನ ಮಗನನ್ನು ಬಲಿ ನೀಡಲು ಸಿದ್ಧನಾದ ಸ್ಥಳದಲ್ಲಿ ದೇವಚರರು ವಾಸಿಸುತ್ತಾರೆ. ಸೃಷ್ಟಿಕರ್ತನು ಈ ಸ್ಥಳವನ್ನು ರಕ್ಷಿಸುತ್ತಾನೆ".(ಮಕ್ಕಃ)

ಮೇಲಿನ ಶ್ಲೋಕದಲ್ಲಿ ಅಥರ್ವವೆಂದು ಕರೆಯಲ್ಪಡುವ ವ್ಯಕ್ತಿಯನ್ನು ಅರಬಿ ಭಾಷೆಯಲ್ಲಿ ಇಸ್ಮಾಈಲ್ ಎಂದು ಕರೆಯುತ್ತಾರೆ. ಹ.ಇಸ್ಮಾಈಲ್ ಪ್ರವಾದಿ ಮುಹಮ್ಮದ್(ಸ)ರ 61ನೇ ಪೂರ್ವಜರಾಗಿದ್ದರು.

ಹ. ಇಸ್ಮಾಈಲ್(ಅ) ಮತ್ತು ಹ. ಮುಹಮ್ಮದ್(ಸ)ರ ನಡುವಿನ ಹೆಸರಾಂತ ಪೂರ್ವಜರ ಹೆಸರು ಹೀಗಿದೆ:

ಅಥರ್ವ(ಹ. ಇಸ್ಮಾಈಲ್)-ಪಬಾಫ್-ಯಾಸಾಬ್-ನಾಕರ್-ಅದ್‌ನಾನ್-ಮಾದ್-

ನಾರ್ಝರ್-ನಾಸರ್-ಇಲ್ಯಾಸ್-ಕನಾನ್-ನಫ್ರ-ಮಾಲಿಕ್-ಫಿಕ್ರ-ಗಾಲಿಬ್-ಲೊಹ್-ಕಅಬ್-ಮುರ್ರ-ಕಿಲಾಬ್-ಕುಸ್ಸೆ-ಅಬ್ದೆಮನಾಫ್-ಹಾಷಿಮ್-ಅಬ್ದುಲ್ ಮುತ್ತಲಿಬ್-ಅಬ್ದುಲ್ಲಾ-ಹ. ಮುಹಮ್ಮದ್(ಸ). (ತಿ ತಿ ತಿ . ತು ಥಿ ಣ ಠ ಡಿ ಥಿ ಟಿ ಜ ತಿ ಟಚಿರಚಿದುಟಿಜ.ಥಿಠಟಜ ಂಟಿಥಿಜ ಣಡಿಣಾಜ ಠಜಿ ಠಿಡಿಠಠಿಜಣ ಟಣುಚಿಟಟಜಝ.ಣಟ)

ಮಕ್ಕಃ ವಾಸಿಗಳ ವೈಶಿಷ್ಟ್ಯ:

ಇಂದು ಭಾರತದಲ್ಲಿ ಮಾರ್ವಾಡಿ ಸಮುದಾಯವು ವ್ಯಾಪಾರದಲ್ಲಿ ತನ್ನ ಹಿಡಿತ ಸಾಧಿಸಿವೆ. ರಾಜಸ್ಥಾನದಲ್ಲಿ ಮಳೆ ಬಹಳ ಕಡಿಮೆ. ಆದುದರಿಂದ ರಾಜಸ್ಥಾನದಲ್ಲಿ ವ್ಯವಸಾಯವು ಅಷ್ಟಕಷ್ಟೇ ಇದೆ. ಮಳೆಯ ಅಭಾವದಿಂದ ಇಲ್ಲಿಯ ಜನರು ಹಸಿವೆಯಿಂದ ಕಂಗೆಡಬೇಕಾಗಿತ್ತು. ಆದರೆ ಈ ರೀತಿ ಆಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ರಾಜಸ್ಥಾನದ ಜನರು ಆರ್ಥಿಕವಾಗಿ ಸುಧೃಢವಾಗಿದ್ದಾರೆ. ಇದು ಹೇಗೆ ಸಾಧ್ಯವಾಯಿತು.

ಸಾಮಾನ್ಯವಾಗಿ ರೈತರು ಕೃಷಿಕಾರ್ಯಗಳಿಗೆ ಮಳೆಯ ಮೇಲೆ ಅವಲಂಬಿತರಾಗಿರುತ್ತಾರೆ. ಮಳೆ ಬಂದರೆ ಅನ್ನದ ಚಿಂತೆ ಇರುವುದಿಲ್ಲ. ಆದರೆ ಮಳೆ ಕೈ ಕೊಟ್ಟರೆ ಅವರಿಗೆ ಉಪವಾಸವೇ ಗತಿಯಾಗುತ್ತದೆ.

ಆದರೆ ರಾಜಸ್ಥಾನಿಯರು ಎಂದೂ ಮಳೆಯ ಮೇಲೆ ಆಶ್ರಿತರಾಗಿಲ್ಲ. ಅವರು ಚತುರರೂ, ಶ್ರಮಜೀವಿಗಳೂ ಆಗಿರುವರು. ಅವರು ವ್ಯಾಪಾರದಲ್ಲಿ ತೊಡಗಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವರು. ಇದಲ್ಲದೆ ಸೇನೆಯಲ್ಲಿಯೂ ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಸೃಷ್ಟಿಕರ್ತನು ಕಅಬಃವನ್ನು ಭೂಮಿಯ ಮಧ್ಯದದಲ್ಲಿ ಮಾಡಿರುವನು. ಮಕ್ಕಃ ಪಟ್ಟಣದ ವಾತಾವರಣವು ಮರುಭೂಮಿಯ ವಾತಾವರಣಕ್ಕಿಂತಲೂ ಕಠಿಣವಾಗಿರುವುದು. ಮಕ್ಕಃ ಪ್ರದೇಶದಲ್ಲಿ ವ್ಯವಸಾಯವನ್ನು ಊಹಿಸಲೂ ಸಾಧ್ಯವಿಲ್ಲ. ಈ ಕಾರಣದಿಂದ ಯಾವನೇ ವ್ಯವಸಾಯಗಾರ ಇಲ್ಲಿ ಬಂದು ನೆಲೆಸುವುದಿಲ್ಲ.

ಮಕ್ಕದಲ್ಲಿ ಬಂದು ನೆಲೆಸಿದ ಪ್ರತಿಯೊಬ್ಬ ವ್ಯಕ್ತಿ ವ್ಯಾಪಾರದಲ್ಲಿ ರಾಜಸ್ಥಾನಿಗಳಿಗಿಂತಲೂ ಚತುರರಾದರು. ರಾಜಪುತರಿಗಿಂತಲೂ ಧೈರ್ಯಶಾಲಿಗಳಾದರು. ಏಕೆಂದರೆ ಮಕ್ಕಃ ಪ್ರದೇಶದಲ್ಲಿ ಜೀವಿಸುವುದು ರಾಜಸ್ಥಾನದಲ್ಲಿ ಜೀವಿಸುವುದಕ್ಕಿಂತಲೂ ಕಷ್ಟಕರವಾಗಿದೆ.

ಮಕ್ಕಃ ಪಟ್ಟಣ ಹೇಗೆ ಜನನಿಬಿಡವಾಯಿತು?

ಹ. ಇಸ್ಮಾಈಲರ ಜನನವಾದಾಗ, ಹ. ಇಬ್ರಾಹೀಮ್(ಅ) ಪುಟ್ಟ ಮಗು ಇಸ್ಮಾಈಲ್ ಮತ್ತು ಪತ್ನಿ ಹ. ಹಾಜಿರಾರನ್ನು ಕಅಬಃದ ಬಳಿ ಏಕಾಂಗಿಯಾಗಿ ಬಿಟ್ಟು ದೂರದ ಪ್ರದೇಶಕ್ಕೆ ತೆರಳಿದರು. ಆ ಸಮಯದಲ್ಲಿ ಕಅಬಃದ ಸುತ್ತಮುತ್ತಲು ಹಾಗೂ ದೂರ ದೂರದವರೆಗೂ ಎಲ್ಲಿಯೂ ನೀರು ಲಭ್ಯವಿರಲಿಲ್ಲ. ಆದರೆ ಸೃಷ್ಟಿಕರ್ತನು ಪವಾಡ ಸದೃಶವಾಗಿ ಝಮ್ ಝಮ್ ನೀರಿನ ಝರಿಯನ್ನು ಜಾರಿಗೊಳಿಸಿದನು.

ಝಮ್ ಝಮ್ ನೀರು ಅದ್ಭುತವಾಗಿದೆ. ಯಾವ ಆಶಯದೊಂದಿಗೆ ನಾವು ಝಮ್ ಝಮ್ ಕುಡಿಯುತ್ತೇವೆಯೋ, ಆ ಆಶಯ



ಪೂರೈಸುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಹಸಿವೆಯನ್ನು ನೀಗಿಸುವ ಇರಾದೆಯೊಂದಿಗೆ ಇದನ್ನು ಕುಡಿದರೆ ಆತನ ಹಸಿವೆ ನೀಗುತ್ತದೆ. ಯಾರಾದರೂ ಶ್ರೀಮಂತನಾಗುವ ಇರಾದೆಯಿಂದ ಝಮ್ ಝಮ್ ಕುಡಿದರೆ, ಆತನು ಶ್ರೀಮಂತನಾಗುತ್ತಾನೆ. ರೋಗ ಶಮನವಾಗ ಬೇಕೆಂಬ ಅಭಿಲಾಷೆಯಿಂದ ಕುಡಿದರೆ ರೋಗ ಶಮನವಾಗುತ್ತದೆ. ಹಜ್ಜ್‌ಗೆ ಬರುವ ಯಾತ್ರಾರ್ಥಿಗಳು ಹಜ್ಜ್ ವಿಧಿ ಮುಗಿಸಿ ಹಿಂತೆರೆಳುವಾಗ ಝಮ್ ಝಮ್ ನೀರನ್ನು ತಮ್ಮ ಜೊತೆ ಕಡ್ಡಾಯವಾಗಿ ಒಯ್ಯುತ್ತಾರೆ. ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ಅದನ್ನು ನೆಂಟರಿಷ್ಟರಿಗೆ, ಆಪ್ತರಿಗೆ ಹಂಚುತ್ತಾರೆ. ಝಮ್ ಝಮ್‌ನ ವಿಶಿಷ್ಟ ಗುಣಗಳಿಂದ ಆಕರ್ಷಿತರಾಗಿ ದೂರ ದೂರ ಪ್ರದೇಶಗಳಿಂದ ಮಕ್ಕಃ ಒಂದು ಇಲ್ಲಿಯೇ ನೆಲೆಸಿದರು, ಹೀಗೆ ಕಾಲಕ್ರಮೇಣ ಮಕ್ಕಃ ಜನಭರಿತವಾಯಿತು. ಪ್ರವಾದಿ ಮುಹಮ್ಮದ್(ಸ)ರ ಕಾಲದಲ್ಲಿ ಮಕ್ಕಃ ಪಟ್ಟಣದಲ್ಲಿ ಸುಮಾರು 60,000 ಜನರಿದ್ದರು.

ಬಹು ದೀರ್ಘ ಕಾಲದ ಹಿಂದೆ ದೇವಚರರು ಪವಿತ್ರ ಕಅಬ ಭವನವನ್ನು ನಿರ್ಮಿಸಿದ್ದರು. ಆದರೆ ಮನುರವರ (ಹ. ನೂಹ್(ಅ)) ಕಾಲದಲ್ಲಿಯ ಪ್ರವಾಹದಲ್ಲಿ ಈ ಭವನವು ಶಿಥಿಲಗೊಂಡಿತ್ತು.

ಹ. ಇಸ್ಮಾಈಲ್ ಮತ್ತು ಹ. ಇಬ್ರಾಹೀಮ್(ಅ) ಕಅಬ ಭವನದ ಪುನರ್ ನಿರ್ಮಾಣ ಮಾಡಿದರು. ಆನಂತರ ಹ. ಇಸ್ಮಾಈಲರ ಪೀಳಿಗೆಯವರು ಕಅಬ ಭವನದ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು.

ಅಥರ್ವ ವೇದದಲ್ಲಿ ಪವಿತ್ರ ಕಅಬವನ್ನು ವರ್ಣಿಸುವ ಐದು ಶ್ಲೋಕವು ಹೀಗಿದೆ.



*Inside view*

ಅನುವಾದ: ಸೃಷ್ಟಿಕರ್ತನ ಭವನದಲ್ಲಿ ಮೂರು ಕಂಬಗಳು ಮತ್ತು ಮೂರು ತೊಲೆಗಳಿವೆ. ಈ ಭವನವು ಶಾಶ್ವತ ಜೀವನದ ಕೇಂದ್ರ ಬಿಂದುವಾಗಿದೆ. ಸೃಷ್ಟಿಕರ್ತನ ಆರಾಧಕರು ಇದನ್ನು ಅರಿತಿರುವರು.

तस्मिन हिररायये कोशे त्र यरे त्रिप्रतिष्ठते
तस्मिन यद यक्षमात्मन्वत तद वै ब्रह्मविदो विदुः
(अथर्ववेद १०:२:३२)

ಮೇಲಿನ ಚಿತ್ರದಲ್ಲಿ ಕಅಬ ಭವನದ ಒಳ ಭಾಗವನ್ನು ತೋರಿಸಲಾಗಿದೆ. ಈ ಚಿತ್ರದಲ್ಲಿ ಮೂರು ಕಂಬಗಳನ್ನು ಮತ್ತು ಮೂರು ತೊಲೆಗಳನ್ನು ಕಾಣಬಹುದು.

(ತಿತಿತಿ. ಥಿಠಣಣಾಥಜ. ಥಿಠಟ ಟುಟಿಞ ೪ಣಣಠಿ: //ಥಿಠಣಣಾಥಜ/ಜ್ಣ2ಥಚಿ 302 ನಲ್ಲಿ ಈ ಚಿತ್ರವನ್ನು ನೋಡಬಹುದು).

ಪದ್ಮ ಪುರಾಣದಲ್ಲಿ ಪವಿತ್ರ ಕಅಬವನ್ನು 'ಆದಿ ಪುಷ್ಕರ್ ತೀರ್ಥ' ಎಂದು ಕರೆಯಲಾಗಿದೆ. ಎಲ್ಲಾ ತೀರ್ಥ ಯಾತ್ರಾ ಸ್ಥಳಗಳಲ್ಲಿ'ಕಅಬಾ ಬವನವು ಅತ್ಯಂತ ಪ್ರಾಚೀನವಾದುದೆಂದೂ ತಿಳಿಸಲಾಗಿದೆ. (ಪದ್ಮ ಪುರಾಣ ಕಲ್ಯಾಣ್ ಅಕ್ಟೋಬರ್ 1144 ಪುಟ 96, ಹೊರಪುರ)

ಹ. ಇಸ್ಮಾಈಲರ ನಿಧನದ ನಂತರ ಕಾಲಕ್ರಮೇಣ ಜನರು ಏಕ ದೇವನ ಆರಾಧನೆಯನ್ನು ತ್ಯಜಿಸಿ ಬಹು ದೇವಿ–ದೇವತೆಗಳ ಆರಾಧನೆಯನ್ನು ಮಾಡತೊಡಗಿದರು. ಕಅಬ ಭವನದ ಒಳಗಡೆ

360 ಮೂರ್ತಿಗಳನ್ನು ಇಡಲಾಗಿತ್ತು. ಜನರ ಈ ಕುಕೃತ್ಯಗಳ ಕಾರಣ, ಸೃಷ್ಟಿಕರ್ತನು ತನ್ನ ಕರುಣೆಯನ್ನು ಹಿಂಪಡೆದು, ಝಮ್ ಝಮ್ ಒಣಗುವಂತೆ ಮಾಡಿದನು.

ಹ. ಮುಹಮ್ಮದ್(ಸ)ರ ಅಜ್ಜರ ಹೆಸರು ಆಮಿರ್ ಆಗಿತ್ತು. ಆದರೆ ಅವರು ಅಬ್ದುಲ್ ಮುತ್ತಲಿಬ್ ಹೆಸರಿನಿಂದ ಪ್ರಖ್ಯಾತರಾಗಿರುವರು. ಅವರು ಸುಂದರ ಧೃಡಕಾಯವನ್ನು ಹೊಂದಿದ್ದರು. ಅಬ್ದುಲ್ ಮುತ್ತಲಿಬ್ ಬುದ್ಧಿವಂತರೂ, ವಿಶಾಲ ಹೃದಯಿಯೂ ಆಗಿದ್ದರು. ಅಬ್ದುಲ್ ಮುತ್ತಲಿಬ್ ತಮ್ಮ ಜನಾಂಗದ ನಾಯಕರಾಗಿದ್ದರು. ಹಜ್ಜ್‌ಗೆ ಬರುವ ಯಾತ್ರಾರ್ಥಿಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡುತ್ತಿದ್ದರು. ಅವರು ಏಕದೇವನ ಉಪಾಸನೆಯಲ್ಲಿ ವಿಶ್ವಾಸವಿರಿಸಿದ್ದರು. ರಮ್‌ಝಾನ್ ತಿಂಗಳಿನಲ್ಲಿ ಹಿರಾ ಗುಹೆಯಿಂದ ತೆರಳಿ ಸೃಷ್ಟಿಕರ್ತನ ಆರಾಧನೆಯಲ್ಲಿ ತಲ್ಲೀನರಾಗುತ್ತಿದ್ದರು. ಹಿರಾ ಗುಹೆ ಯಿಂದ ಹಿಂತೆರಳಿದಾಗ ಬಡ ಬಗ್ಗರಿಗೆ ಉಣಬಡಿಸುತ್ತಿದ್ದರು.

ಸೃಷ್ಟಿಕರ್ತನ ಕೋಪದಿಂದ ಒಣಗಿ ಹೋದ ಝಮ್ ಝಮ್ ಝರಿಯು ಕಾಲಕ್ರಮೇಣ ಉಸುಕಿನಿಂದ ಮುಚ್ಚಿ ಹೋಗಿ ಅದರ ಜಾಡು ಸಿಗದಂತಾಯಿತು. ಹ. ಅಬ್ದುಲ್ ಮುತ್ತಲಿಬ್‌ರಿಗೆ ಅವರ ಪೂರ್ವಜರಿಂದ ಝಮ್ ಝಮ್‌ನ ವೃತ್ತಾಂತ ತಿಳಿದಿತ್ತು. ಅವರು ಸೃಷ್ಟಿಕರ್ತನ ಮೊರೆ ಹೋಗಿ ಝಮ್ ಝಮ್ ಝರಿ ಪುನಃ ಜಾರಿಗೊಳ್ಳುವಂತೆ ಬೇಡಿಕೊಳ್ಳ ಬಯಸಿದರು.

ಒಂದು ರಾತ್ರಿ ಕನಸಿನಲ್ಲಿ ದೇವಚರರು ಅವರಿಗೆ ಝಮ್ ಝಮ್ ಬಾವಿಯ ಸ್ಥಳದ ಗುರುತನ್ನು ನೀಡಿದರು. ಈ ಸ್ಥಳವು ಇಸ್‌ನಾಫ್ ಮತ್ತು ನಾಯಿಲ ಎಂಬ ಎರಡು ವಿಗ್ರಹಗಳ ನಡುವೆ ಇದ್ದಿತು. ಈ ಸ್ಥಳದಲ್ಲಿ ಬಲಿಯನ್ನು ನೀಡಲಾಗುತಿತ್ತು. ಆದುದರಿಂದ ಈ ಸ್ಥಳದಲ್ಲಿ ಬಾವಿಯನ್ನು ಅಗೆಯಲು ಜನರು ಹಿಂದೇಟು ಹಾಕಿದರು.

ಆದರೆ ಹ. ಅಬ್ದುಲ್ ಮುತ್ತಲಿಬ್ ಜನರ ಅಸಹಾಕಾರದಿಂದ ಹಿಂಜರಿಯಲಿಲ್ಲ. ತಮ್ಮ ಏಕೈಕ ಪುತ್ರ ಹಾರಿಸ್‌ನ ಸಹಾಯದಿಂದ ಝಮ್ ಝಮ್ ಝರಿ ಇರುವ ಬಾವಿಯನ್ನು ಪುನಃ ಅಗೆದರು. ಝಮ್ ಝಮ್ ನೀರು ರಭಸದಿಂದ ಚಿಮ್ಮಿ ಪುನಃ ಹರಿಯಲಾರಂಭಿಸಿತು. ಈ ಘಟನೆಯಿಂದ ಅಬ್ದುಲ್ ಮುತ್ತಲಿಬ್ ಜನರ ಗೌರವಾದರಗಳಿಗೆ ಪಾತ್ರರಾದರು.

ಹ. ಮುಹಮ್ಮದ್(ಸ)ರ ತಂದೆ:

ಹ. ಅಬ್ದುಲ್ ಮುತ್ತಲಿಬ್‌ರಿಗೆ ಝಮ್ ಝಮ್ ಬಾವಿಯನ್ನು ಪುನಃ ತೋಡಲು ನೆರವು ನೀಡಲು ಜನರು ನಿರಾಕರಿಸಿದಾಗ ಅಬ್ದುಲ್ ಮುತ್ತಲಿಬ್ ತಮಗೆ ಹತ್ತು ಮಕ್ಕಳನ್ನು ನೀಡುವಂತೆ ಸೃಷ್ಟಿಕರ್ತನಲ್ಲಿ ಬೇಡಿಕೊಂಡರು. ಈ ಪುತ್ರರು ಬೆಳೆದು ಯುವಕರಾದಾಗ ಅವರಲ್ಲಿ ಒಬ್ಬನನ್ನು ಬಲಿ ನೀಡುವುದಾಗಿಯೂ ಪ್ರತಿಜ್ಞೆ ಮಾಡಿದರು.

ಅಲ್ಲಾಹನು ಅಬ್ದುಲ್ ಮುತ್ತಲಿಬ್‌ರಿಗೆ ಹತ್ತು ಮಕ್ಕಳನ್ನು ನೀಡಿದನು. ಮಕ್ಕಳು ಬೆಳೆದು ಯುವಕರಾದಾಗ ಯಾರನ್ನು ಬಲಿ ನೀಡಬೇಕೆಂಬುದನ್ನು ನಿರ್ಧರಿಸಲು ಚೀಟಿ ಎತ್ತಲಾಯಿತು. ಚೀಟಿಯಲ್ಲಿ ಹ. ಅಬ್ದುಲ್ಲಾರ ಹೆಸರು ಬಂತು. ಅಬ್ದುಲ್ಲಾ. ಅಬ್ದುಲ್ ಮುತ್ತಲಿಬ್‌ರ ಪುತ್ರರಲ್ಲಿ ಅತ್ಯಂತ ಕಿರಿಯರಾಗಿದ್ದರು. ಗುಣ ನಡತೆಯಲ್ಲಿ ಎಲ್ಲಾ ಪುತ್ರರಲ್ಲಿ ಶ್ರೇಷ್ಠರಾಗಿದ್ದರು. ಬಲಿ ನೀಡಲು ಅವರ ಹೆಸರು ಬಂದಾಗ ಎಲ್ಲರಿಗೂ ತೀವ್ರ

ವೇದನೆಯಾಯಿತು.

ಹ. ಅಬ್ದುಲ್ಲಾರನ್ನು ಉಳಿಸಲು ಸಮಾಲೋಚನೆ ನಡೆಯಿತು. ಕೊನೆಗೆ ಅಬ್ದುಲ್ಲಾರ ಬದಲಿಗೆ ಒಂಟೆಗಳನ್ನು ಬಲಿ ನೀಡಬೇಕೆಂದು ಒಂಟೆಗಳ ಸಂಖ್ಯೆ ನಿರ್ಧರಿಸಲಾಯಿತು. ಹತ್ತು ಹತ್ತು ಒಂಟೆಗಳಿಗೆ ಚೀಟಿ ಎತ್ತಲಾಯಿತು. ಹ. ಅಬ್ದುಲ್ಲಾರ ಹೆಸರು ಬರುತ್ತಿತ್ತು. ಕೊನೆಗೆ 100 ಒಂಟೆಗಳ ಸಂಖ್ಯೆಗೆ ಹ. ಅಬ್ದುಲ್ಲಾರ ಹೆಸರು ಬರಲಿಲ್ಲ. ಎಲ್ಲರೂ ಸಂತೋಷದಿಂದ ನಲಿದಾಡಿದರು. ಈ ರೀತಿ ಅಬ್ದುಲ್ಲಾ ರಕ್ಷಿಸಲ್ಪಟ್ಟರು.

ಇದೇ ಹ. ಅಬ್ದುಲ್ಲಾ ಹ. ಮುಹಮ್ಮದ್(ಸ)ರ ತಂದೆಯಾಗಿದ್ದರು. ಹ. ಅಬ್ದುಲ್ಲಾ ಉತ್ಕೃಷ್ಟ ತಂದೆಯ ಉತ್ಕೃಷ್ಟ ಪುತ್ರರಾಗಿದ್ದರು. ಅವರು ಆಕರ್ಷಕ ವ್ಯಕ್ತಿಯಾಗಿದ್ದರು. ದೈವ ಭಕ್ತಿ ಅವರಲ್ಲಿ ತುಂಬಿ ತುಳುಕುತ್ತಿತ್ತು. ಹ. ಅಬ್ದುಲ್ಲಾರವರಿಂದ ಆಕರ್ಷಿತಳಾಗಿ ಓರ್ವ ಜ್ಯೋತಿಷಿಣಿ (ಉಮ್ಮೆ ಖತಾಲ್ ಬಿನ್ ಸೌಫಿ) ಅವರನ್ನು ವಿವಾಹವಾಗ ಬಯಸಿದ್ದರು. ಆದರೆ ಹ. ಅಬ್ದುಲ್ ಮುತ್ತಲಿಬ್ ಅಬ್ದುಲ್ಲಾರನ್ನು ಹ. ಆಮಿನಾರೊಂದಿಗೆ ವಿವಾಹ ಮಾಡಿದರು. ಹ. ಆಮಿನಾ ಮದೀನಾದ ಗೌರವಾನ್ವಿತ ಗೋತ್ರ ಬನು ಝೊಹ್ರಾದ ನಾಯಕ ವಹಾಬ್ ಬಿನ್ ಅಬ್‌ದೆ ಮನಾಫ್‌ರವರ ಪುತ್ರಿಯಾಗಿದ್ದರು.

ವಿವಾಹವಾದಾಗ ಹ. ಅಬ್ದುಲ್ಲಾ 25 ವರ್ಷ ವಯಸ್ಸಿನವರಾಗಿದ್ದರು ಮತ್ತು ಹ. ಆಮಿನಾರ ವಯಸ್ಸು 20 ವರ್ಷವಾಗಿತ್ತು. ವಿವಾಹದ ನಂತರ ಹ. ಅಬ್ದುಲ್ಲಾ ಮದೀನಾದಲ್ಲಿ ಮೂರು ದಿನ ತಂಗಿದ್ದರು. ಇದರ ನಂತರ ಮಕ್ಕಾದಲ್ಲಿ ಪತ್ನಿ ಆಮಿನಾರೊಂದಿಗೆ ಕೆಲ ತಿಂಗಳು ವೈವಾಹಿಕ ಜೀವನ ನಡೆಸಿದರು. ಈ ಸಮಯದಲ್ಲಿ ಸಿರಿಯಾ ದೇಶಕ್ಕೆ ಕಾರವಾನ ಹೊರಟಿತು. ಹ. ಅಬ್ದುಲ್ಲಾ ಈ ಕಾರವಾನದ ಜತೆಗೂಡಿದರು. ಪ್ರಯಾಣದಿಂದ ಹಿಂತೆರಳುವಾಗ ಮದೀನಾದ ಹತ್ತಿರದ ಸ್ಥಳದಲ್ಲಿ ಅಸ್ವಸ್ಥರಾದರು. ಮದೀನಾದಲ್ಲಿ ಸಂಬಂಧಿಕರೊಂದಿಗೆ ವಾಸ್ತವ್ಯ ಮಾಡಿದರು. ಒಂದು ತಿಂಗಳ ಅನಾರೋಗ್ಯದ ಬಳಿಕ ಮದೀನಾದಲ್ಲಿ ನಿಧನ ಹೊಂದಿದರು.

ಹ. ಅಬ್ದುಲ್ಲಾರ ನಿಧನದ ಏಳು ತಿಂಗಳ ನಂತರ 20/22 ಎಪ್ರಿಲ್ ಕ್ರಿ.ಶ. 570ರಂದು ಹ. ಮುಹಮ್ಮದ್(ಸ) ಜನಿಸಿದರು. ಚಂದ್ರಮಾನ ಕ್ಯಾಲೆಂಡರ್‌ನಂತೆ ರಬೀವುಲ್ ಅವ್ವಲ್ ತಿಂಗಳ 12ನೆಯ ತಾರೀಖು ಆತತ್ತು.

************

# ಹ. ಮುಹಮ್ಮದ್(ಸ)ರ ಕುಟುಂಬ

ಹ. ಮುಹಮ್ಮದ್(ಸ)ರಿಗೆ ಒಂಭತ್ತು ಪಿತೃ ಸಹೋದರರಿದ್ದರು.

1. ಹಾರಿಸ್, 2. ಕಸಮ್, 3. ಅಬೂಲಹಬ್, 4. ಅಬೂ ತಾಲಿಬ್, 5. ಹ.ಅಬ್ಬಾಸ್, 6. ಹ. ಹಂಝ,7. ಝುಬೈರ್, 8. ಮಕೂಮ್, 9. ಜಾಫರ್/ಗಿಡಾಕ್.

ಹ. ಅಬೂತಾಲಿಬ್: ಇವರು ಹ. ಮುಹಮ್ಮದ್(ಸ)ರನ್ನು ತನ್ನ ಪುತ್ರನಂತೆಯೇ ಸಾಕಿ ಬೆಳೆಸಿದರು. ತಮ್ಮ ಕೊನೆಯ ಉಸಿರಿನವರೆಗೂ ಅವರು ಮುಹಮ್ಮದ್(ಸ)ರ ಬೆಂಗಾವಲಿಗೆ ನಿಂತರು. ಹ. ಮುಹಮ್ಮದ್(ಸ)ರ 50 ವರ್ಷದಲ್ಲಿ ನಿಧನ ಹೊಂದಿದರು.

ಹ. ಅಬ್ಬಾಸ್: ಹ. ಮುಹಮ್ಮದ್(ಸ)ರನ್ನು ಬಹಳ ಪ್ರೀತಿಸುತ್ತಿದ್ದರು. ದೀರ್ಘಾವದಿಯ ನಂತರ ಇಸ್ಲಾಮ್ ಸ್ವೀಕರಿಸಿದರು. ಅತೀ ಶ್ರೀಮಂತರಾಗಿದ್ದರು. ವ್ಯಾಪಾರದಲ್ಲಿ ಬಂಡವಾಳ ಹೂಡುತ್ತಿದ್ದರು. ಹ. ಮುಹಮ್ಮದ್(ಸ)ರ ನಿಧನದ ನಂತರ ಆಡಳಿತ ನಡೆಸಿದ ಅಬ್ಬಾಸಿ ರಾಜರು ಹ. ಅಬ್ಬಾಸ್(ರ)ರ ವಂಶಸ್ಥರಾಗಿದ್ದರು.

ಹ. ಹಂಝ: ಅವರು ಹ. ಮುಹಮ್ಮದ್(ಸ)ರ ಪಿತೃಸಹೋದರರಾಗಿದ್ದರೂ, ಅವರ ವಯಸ್ಸಿನವರೇ ಆಗಿದ್ದರು. ಬಹಳ ಧೈರ್ಯಶಾಲಿಯಾಗಿದ್ದರು. ಉಹುದ್ ಯುದ್ಧದಲ್ಲಿ ಹುತಾತ್ಮರಾದರು.

ಅಬೂಲಹಬ್: ಆಕರ್ಷಕ ಮೈಕಟ್ಟನ್ನು ಹೊಂದಿದ್ದರು. ಹ. ಮುಹಮ್ಮದ್(ಸ)ರ ಜನನದ ವಾರ್ತೆಯನ್ನು ತಂದಿದ್ದ ದಾಸಿಯನ್ನು ಸ್ವತಂತ್ರಗೊಳಿಸಿದ್ದರು. ಆದರೆ ಹ. ಮುಹಮ್ಮದ್(ಸ) ಪ್ರವಾದಿತ್ವ ಘೋಷಿಸಿದಾಗ ಅವರನ್ನು ತೀವ್ರವಾಗಿ ವಿರೋಧಿಸಿದರು.

ಹ. ಮುಹಮ್ಮದ್(ಸ)ರ ಇತರ ಪಿತೃಸಹೋದರರೂ ಇಸ್ಲಾಮ್ ಸ್ವೀಕರಿಸಲಿಲ್ಲ.

ಹ. ಮುಹಮ್ಮದ್(ಸ)ರ ಅತ್ತೆಯಂದಿರು: ಹ. ಮುಹಮ್ಮದ್(ಸ)ರಿಗೆ ಆರು ಅತ್ತೆಯಂದಿರಿದ್ದರು.

1. ಉಮ್ಮೈಮಃ, 2.ಉಮ್ಮೆ ಹಕೀಮ್, 3. ಬರಃ, 4.ಹ. ಅಕೀಕಃ, 5. ಹ. ಸಫಿಯ್ಯಃ, 6. ಹ. ಅರ್ವ,

ಹ. ಮುಹಮ್ಮದ್(ಸ)ರ ಮೊದಲನೇ ವಿವಾಹವು ಕ್ರಿ.ಶ.595ರಲ್ಲಿ, 25ವರ್ಷ ಪ್ರಾಯದಲ್ಲಿ ಹ. ಖದೀಜಾ(ರ)ರೊಂದಿಗೆ ನೆರವೇರಿಸಲ್ಪಟ್ಟಿತ್ತು. ಹ. ಖದೀಜಾ(ರ)ರವರು 619ರಲ್ಲಿ ನಿಧನರಾದರು. ಅವರ ನಿಧನದ ನಂತರ ಹ. ಮುಹಮ್ಮದ್(ಸ) ತಮ್ಮ ಮಕ್ಕಳ ಪೋಷಣೆಗಾಗಿ ಹ. ಸೌದಃ(ರ)ರನ್ನು ವಿವಾಹವಾದರು. ವಿವಾಹದ ಸಮಯದಲ್ಲಿ ಹ. ಸೌದಃರಿಗೆ ವಯಸ್ಸಾಗಿತ್ತು. ಎತ್ತರವಾಗಿದ್ದರು ಮತ್ತು ದೇಹ ದಪ್ಪನೆಯದಾಗಿತ್ತು. ಹ. ಖದೀಜಾ(ರ)ರ ನಿಧನದ ನಂತರ, ಹ. ಮುಹಮ್ಮದ್(ಸ), ಹ. ಸೌದಃರೊಂದಿಗೆ 4 ವರ್ಷ ಬಾಳುವೆ ನಡೆಸಿದ್ದರು.

ಹ. ಸೌಧಃ(ರ)ರ ನಿಧನದ ನಂತರ ಹ. ಮುಹಮ್ಮದ್(ಸ) ವಿವಿಧ ಕಾರಣಗಳ ಮೇರೆಗೆ

ವಿವಾಹವಾಗಿದ್ದು, ಅವರ ಪತ್ನಿಯರ ಹೆಸರು ಈ ಕೆಳಗೆ ನೀಡಲಾಗಿದೆ.

1. ಹ. ಆಯಿಷಾ(ರ), 2. ಹಫ್ಸಾ(ರ), 3. ಹ. ಝೈನಬ್ ಬಿಂತ್ ಖುಝೈಮ(ರ), 4. ಉಮ್ಮು ಸಲ್ಮಾ(ರ), 5. ಉಮ್ಮು ಹಬೀಬಃ(ರ), 6. ಹ. ಝೈನಬ್ ಬಿಂತ್ ಜಹಶ್(ರ), 7. ಹ. ಝುವೈರಿಯಾ(ರ), 8. ಹ. ಸಫಿಯ್ಯಾ(ರ), 9. ಹ. ರೈಹಾನ(ರ), 10 . ಹ. ಮೈಮೂನ(ರ).

ಹ. ಮುಹಮ್ಮದ್(ಸ)ರಿಗೆ ಮೂವರು ಪುತ್ರರು ಹಾಗೂ ನಾಲ್ವರು ಪುತ್ರಿಯರಿದ್ದರು. ಮೂವರು ಪುತ್ರರು ಬಾಲ್ಯದಲ್ಲಿಯೇ ನಿಧನ ಹೊಂದಿದರು. 7 ಮಕ್ಕಳಲ್ಲಿ , ಆರು ಮಕ್ಕಳು ಹ. ಖತೀಜ(ರ)ರಿಂದ ಜನಿಸಿದ್ದರು. ಅತ್ಯಂತ ಕಿರಿಯ ಪುತ್ರ ಹ. ಇಬ್ರಾಹೀಮ್(ರ), ಮಾರಿಯ(ರ)ರಿಗೆ ಜನಿಸಿದ್ದರು. ಹ. ಮುಹಮ್ಮದ್(ಸ)ರ ಮೂವರು ಪುತ್ರರ ಹೆಸರು ಹ. ಕಾಸಿಮ್, ಹ.ಅಬ್ದುಲ್ಲಾ(ತಾಹಿರ್/ತಯ್ಯಬ್) ಮತ್ತು ಹ. ಇಬ್ರಾಹೀಮ್ ಆಗಿತ್ತು.

ಹ. ಮುಹಮ್ಮದ್(ಸ)ರ ಪುತ್ರಿಯರ ಹೆಸರು ಇಂತಿವೆ:

1. ಹ.ಝೈನಬ್(ರ), 2. ಹ. ರುಕಿಯ್ಯಃ(ರ), 3. ಉಮ್ಮು ಕುಲ್ಸುಮ್(ರ), 4. ಹ. ಫಾತಿಮಾ(ರ).

1. ಹ.ಝೈನಬ್(ರ): ಹ. ಝೈನಬ್(ರ) ಅತ್ಯಂತ ಹಿರಿಯ ಪುತ್ರಿಯಾಗಿದ್ದರು. ಅವರು ತಮ್ಮ ತಾಯಿಯ ಸಹೋದರಿಯ ಪುತ್ರ ಹ.ಅಬೂ ಆಸ್‌ರನ್ನು ವಿವಾಹವಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದರು. ಪುತ್ರ ಹ. ಅಲಿ ಬಿನ್ ಅಬುಲ್ ಆಸ್(ರ) ಮತ್ತು ಪುತ್ರಿ ಹ. ಉಮಾಮ ಬಿಂತ್ ಅಬುಲ್ ಆಸ್(ರ). ಮಕ್ಕಃದಿಂದ ಮದೀನ ಕಡೆಗೆ ಪ್ರಯಾಣಿಸುತ್ತಿದ್ದಾಗ ಇಕ್ರಿಮ ಬಿನ್ ಅಬುಜಹಲ್ ಅವರ ಒಂಟೆಯ ಮೇಲೆ ಆಕ್ರಮಣ ನಡೆಸಿದನು. ಹ. ಝೈನಬ್(ರ) ಒಂದು ಬಂಡೆಯ ಮೇಲೆ ಬಿದ್ದು ಗಾಯಗೊಂಡರು. ಆ ಸಮಯದಲ್ಲಿ ಅವರು ಗರ್ಭಿಣಿಯಾಗಿದ್ದರು. ಈ ಘಟನೆಯ ನಂತರ ಹ. ಝೈನಬ್(ರ) ಅಸ್ವಸ್ಥರಾಗಿ ಕೆಲ ಕಾಲದ ಬಳಿಕ ನಿಧನ ಹೊಂದಿದ್ದರು.

2. ರುಕಿಯ್ಯ: ಹ. ರುಕಿಯ್ಯ, ಹ. ಝೈನಬ್(ರ)ಕ್ಕಿಂತ ಕಿರಿಯರಾಗಿದ್ದರು. ಅವರು ಉತ್ಬ ಬಿನ್ ಅಬೂ ಲಹಬ್‌ರೊಂದಿಗೆ ವಿವಾಹವಾಗಿದ್ದರು. ಆದರೆ ಅಬೂ ಲಹಬ್, ಹ. ಮುಹಮ್ಮದ್(ಸ)ರೊಂದಿಗಿನ ದ್ವೇಷದ ಕಾರಣ, ವಿವಾಹ ಸಂಬಂಧವನ್ನು ಮುರಿದರು. ನಂತರ ಹ. ಮುಹಮ್ಮದ್(ಸ) ರುಕಿಯ್ಯ(ರ)ರ ವಿವಾಹವನ್ನು ಹ. ಉಸ್ಮಾನ್(ರ)ರೊಂದಿಗೆ ಮಾಡಿದರು.

ಹ. ರುಕಿಯ್ಯ(ರ) ಹ. ಉಸ್ಮಾನ್(ರ)ರೊಂದಿಗೆ ಅಬಿಸಿನಿಯಾಕ್ಕೆ ವಲಸೆ ಹೋಗಿದ್ದರು. ನಂತರ ಮದೀನಾಕ್ಕೆ ಹಿಂತೆರಳಿದರು. ಅವರಿಗೆ ಅಬ್ದುಲ್ಲ ಹೆಸರಿನ ಏಕಮಾತ್ರ ಪುತ್ರರಿದ್ದರು. ಆರು ವರ್ಷ ಪ್ರಾಯದಲ್ಲಿ ಅಬ್ದುಲ್ಲಾ ನಿಧನ ಹೊಂದಿದರು.

ಕ್ರಿ.ಶ.624ರಲ್ಲಿ ಹ. ರುಕಿಯ್ಯ ಮಾರಿಬೇನೆಯಿಂದ ಮರಣ ಹೊಂದಿದರು.

3. ಹ. ಉಮ್ಮು ಕುಲ್ಸುಮ್: ಇವರು ಹ. ರುಕಿಯ್ಯ(ರ)ರಿಗಿಂತ ಕಿರಿಯರಾಗಿದ್ದರು. ಅಬೂ ಲಹಬ್‌ನ ಎರಡನೆಯ ಪುತ್ರ ಅತಿಬರೊಂದಿಗೆ ಅವರ ವಿವಾಹವಾಗಿತ್ತು. ಇಸ್ಲಾಮ್ ದ್ವೇಷದ ಕಾರಣ ಅಬೂ ಲಹಬ್ ಈ ವಿವಾಹ ಅಂತ್ಯಗೊಳಿಸಿದರು.

ಹ. ರುಕಿಯ್ಯ(ರ)ರ ನಿಧನದಿಂದ ಹ. ಮುಹಮ್ಮದ್(ಸ)ರೊಂದಿಗೆ ನೆಂಟಸ್ತಿಕೆ ಅಂತ್ಯಗೊಂಡಿತೆಂದು. ಹ. ಉಸ್ಮಾನ್(ರ) ದುಃಖತಪ್ತರಾಗಿದ್ದರು. ಹ. ಉಸ್ಮಾನ್(ರ) ಮೃದು ಸ್ವಭಾವದವರೂ, ಉದಾರಿಯೂ

ಆಗಿದ್ದರು. ಹ. ರುಕಿಯ್ಯ(ರ)ರ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದರು. ಆದುದರಿಂದ ಹ. ರುಕಿಯ್ಯ(ರ)ರ ನಿಧನದ ನಂತರ ಹ.ಮುಹಮ್ಮದ್(ಸ) ಹ. ಉಮ್ಮು ಕುಲ್ಸುಮ್(ರ)ರೊಂದಿಗೆ ಹ. ಉಸ್ಮಾನ್(ರ)ರ ವಿವಾಹ ಮಾಡಿದರು. ಮದುವೆಯ ಆರು ವರ್ಷಗಳ ನಂತರ ಒಂದು ರೋಗದ ಕಾರಣ ಹ. ಉಮ್ಮು ಕುಲ್ಸುಮ್(ರ) ಮರಣ ಹೊಂದಿದರು. ಅವರಿಗೆ ಮಕ್ಕಳಿರಲಿಲ್ಲ.

4. ಫಾತಿಮ(ರ): ಹ. ಫಾತಿಮ(ರ) ಹ. ಮುಹಮ್ಮದ್(ಸ)ರ ಅತ್ಯಂತ ಕಿರಿಯ ಪುತ್ರಿಯಾಗಿದ್ದರು. ಕ್ರಿ.ಶ. 624ರಲ್ಲಿ ಹ. ಅಲೀ(ರ)ನ್ನು ವಿವಾಹವಾದರು. ಆವರಿಗೆ ಆರು ಮಕ್ಕಳಿದ್ದರು. ಎರಡು ಮಕ್ಕಳು ಶಿಶು ಅವಸ್ಥೆಯಲ್ಲಿಯೇ ಮರಣ ಹೊಂದಿದವು. ನಾಲ್ಕು ಮಕ್ಕಳು ಬೆಳೆದು ಬಹಳ ಪ್ರಖ್ಯಾತರಾದರು. ಅವರ ಹೆಸರು ಹೀಗಿದೆ.

1. ಹ. ಹಸನ್ ಬಿನ್ ಅಲೀ(ರ)

2. ಹ. ಹುಸೇನ್ ಬಿನ್ ಅಲೀ(ರ)

3. ಹ. ಝೈನಬ್ ಬಿಂತ್ ಅಲೀ(ರ)

4. ಹ. ಉಮ್ಮು ಕುಲ್ಸುಮ್ ಬಿಂತ್ ಅಲೀ(ರ)

ಹ. ಫಾತಿಮ(ರ) ಒಂದು ರೋಗದ ಕಾರಣ ಕ್ರಿ. ಶ. 633 ರಲ್ಲಿ ನಿಧನ ಹೊಂದಿದರು.

ಹ. ಮುಹಮ್ಮದ್(ಸ)ರ ಮೂವರು ಮಕ್ಕಳು ಬಾಲ್ಯಾವಸ್ಥೆಯಲ್ಲಿ ನಿಧನ ಹೊಂದಿದರು. ಹ. ಝೈನಬ್(ರ) ಮತ್ತು ಹ. ರುಕಿಯ್ಯ(ರ)ರ ಪುತ್ರರೂ ಸಹ ಚಿಕ್ಕ ಪ್ರಾಯದಲ್ಲಿಯೇ ಮರಣ ಹೊಂದಿದರು. ಹ. ಉಮ್ಮು ಕುಲ್ಸುಮ್(ರ)ರಿಗೆ ಮಕ್ಕಳಿರಲಿಲ್ಲ. ಹ. ಫಾತಿಮ(ರ)ರ ಎಲ್ಲಾ ಪುತ್ರರು ಮತ್ತು ಓರ್ವ ಮೊಮ್ಮಗ ಕರ್ಬಲಾದಲ್ಲಿ ಹುತಾತ್ಮರಾದರು. ಕೇವಲ ಹ. ಝೈನುಲ್ ಆಬಿದೀನ್ ಕರ್ಬಲಾದಲ್ಲಿ ಬದುಕುಳಿದರು. ಹ. ಫಾತಿಮ(ರ)ರ ಪುತ್ರರ ಮತ್ತು ಮೊಮ್ಮಕ್ಕಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಹ. ಹಸನ್(ರ)ರಿಗೆ ಐದು ಪುತ್ರರು ಮತ್ತು ಓರ್ವ ಪುತ್ರಿ ಇದ್ದರು.

1. ಹ. ಕಾಸಿಮ್ ಇಬ್ನ್ ಹಸನ್, 2. ಅಬ್ದುಲ್ಲಾ ಇಬ್ನ್ ಹಸನ್, 3. ಫಾತಿಮಾ ಬಿಂತ್ ಹಸನ್, 4. ಉಮರ್ ಇಬ್ನ್ ಹಸನ್, 5. ಮುಹಮ್ಮದ್ ಇಬ್ನ್ ಹಸನ್, 6. ಝೈದ್ ಇಬ್ನ್ ಹಸನ್.

ಹ. ಹುಸೈನ್(ರ)ರಿಗೆ ಮೂವರು ಪುತ್ರರು ಮತ್ತು ಮೂವರು ಪುತ್ರಿಯರಿದ್ದರು.

1. ಅಲೀ ಅಲ್ ಬಕರ್ ಇಬ್ನ್ ಹುಸೇನ್, 2. ಅಲೀ ಅಲ್ ಅಸ್ಗರ್ ಇಬ್ನ್ ಹುಸೇನ್, 3. ಅಲೀ ಇಬ್ನ್ ಹುಸೇನ್(ಝೈನುಲ್ ಆಬಿದೀನ್), 4. ಸಕೀನಃ(ಫಾತಿಮಾ ಅಲ್ ಕುಬ್ರ ಬಿಂತ್ ಹುಸೇನ್), 5.ಸುಕೈನ ಬಿಂತ್ ಹುಸೇನ್, 6. ಫಾತಿಮಾ ಅಲ್ ಸುಹ್ರಾ ಬಿಂತ್ ಹುಸೇನ್.

ಅಲೀ ಇಬ್ನ್ ಹುಸೇನ್(ಝೈನುಲ್ ಆಬಿದೀನ್) ಮಾತ್ರ ಕರ್ಬಲಾದಲ್ಲಿ ಬದುಕುಳಿದರು. ಅವರು ಹ. ಹಸನ್(ರ)ರ ಪುತ್ರಿ ಹ. ಫಾತಿಮ ಬಿಂತ್ ಹಸನ್‌ರನ್ನು ವಿವಾಹವಾದರು.

ಅಲಿ ಇಬ್ನ್ ಹುಸೇನ್‌ರಿಗೆ ಬಹಳ ಮಕ್ಕಳು ಇದ್ದರು. ಪ್ರವಾದಿ ಮುಹಮ್ಮದ್(ಸ)ರ ಕುಟುಂಬದವರು ಎನ್ನಲಾಗುವ ಬಹುತೇಕ ಜನರು ವಾಸ್ತವಾಗಿ ಹ. ಝೈನ್ ಅಲ್ ಅಬಿದೀನ್‌ರ ವಂಶಸ್ಥರಾಗಿರುವರು.

ಪ್ರವಾದಿ ಮುಹಮ್ಮದ್(ಸ)ರ ಕುಟುಂಬದವರು ಝಕಾತ್ ಅಥವಾ

ದಾನವನ್ನು ಪಡೆಯುವಂತಿಲ್ಲ. ಸಾಮಾನ್ಯವಾಗಿ ಹ. ಮುಹಮ್ಮದ್(ಸ)ರ ಕುಟುಂಬದವರು ದೇವಭಕ್ತಿ ಉಳ್ಳವರಾಗಿರುತ್ತಾರೆ.

ಹ. ಝೈದ್ ಬಿನ್ ಹಾರಿಸ್(ರ) ಹ. ಮುಹಮ್ಮದ್(ಸ)ರ ಗುಲಾಮರಾಗಿದ್ದರು. ಅವರನ್ನು ಸ್ವತಂತ್ರ್ಯಗೊಳಿಸಿದ ಬಳಿಕ ಹ. ಮುಹಮ್ಮದ್(ಸ) ಅವರನ್ನು ದತ್ತು ಪುತ್ರರನ್ನಾಗಿಸಿದ್ದರು. ಅವರನ್ನು ಝೈದ್ ಬಿನ್ ಮುಹಮ್ಮದ್(ರ) ಎಂದು ಜನರು ಕರೆಯಲಾರಂಭಿಸಿದರು. ಆದರೆ ಜನರನ್ನು ಅವರ ನೈಜ ತಂದೆಯೊಂದಿಗೆ ಮಾತ್ರ ಸಂಬಂಧ ಕಲ್ಪಿಸಬೇಕೆಂದು ಅಲ್ಲಾಹನು ಆದೇಶಿಸಿದ ಬಳಿಕ, ಅವರನ್ನು ಝೈದ್ ಬಿನ್ ಹಾರಿಸ್ ಎಂದು ಪುನಃ ಕರೆಯಲಾರಂಭಿಸಿದರು.

ಹ. ಉಸಾಮಃ(ರ) ಹ. ಝೈದ್ ಬಿನ್ ಹಾರಿಸ್(ರ)ರ ಏಕ ಮಾತ್ರ ಪುತ್ರರಾಗಿದ್ದರು. ಹ. ಮುಹಮ್ಮದ್(ಸ), ಹ. ಝೈದ್ ಬಿನ್ ಹಾರಿಸ್(ರ) ಹಾಗೂ ಹ. ಉಸಾಮಃ(ರ)ರನ್ನು ಬಹಳ ಪ್ರೀತಿಸುತ್ತಿದ್ದರು.

************

# ಪ್ರವಾದಿತ್ವದ ಮೊದಲು ಹ. ಮುಹಮ್ಮದ್(ಸ)ರ ಜೀವನ

ಅರೇಬಿಯಾದಲ್ಲಿ ಮಕ್ಕಳು ಸ್ವಚ್ಛ ವಾತಾವರಣದಲ್ಲಿ ಬೆಳೆಯಬೇಕೆಂದು, ಹುಟ್ಟಿದ ಮಕ್ಕಳನ್ನು ಗ್ರಾಮಗಳಿಗೆ ಕಳುಹಿಸುವ ಪದ್ಧತಿ ರೂಢಿಯಲ್ಲಿತ್ತು. ಇದಕ್ಕೆ ಅನುಗುಣವಾಗಿ ಹ. ಮುಹಮ್ಮದ್(ಸ) 4 ತಿಂಗಳ ಮಗುವಾಗಿರುವಾಗ ದಾಯಿ ಹಲೀಮಾರಿಗೆ ಅವರ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ವಹಿಸಲಾಗಿತ್ತು. ಹ. ಮುಹಮ್ಮದ್(ಸ) 5 ವರ್ಷ ಪ್ರಾಯದವರೆಗೆ ದಾಯಿ ಹಲೀಮಾರೊಂದಿಗೇ ಇದ್ದರು.

6ನೇ ವರ್ಷದ ಪ್ರಾಯದವರಾದಾಗ, ತಾಯಿ ಹ. ಆಮಿನಾ, ಹ. ಮುಹಮ್ಮದ್(ಸ)ರನ್ನು ಮದೀನಾದಲ್ಲಿ ತಮ್ಮ ತವರೂರಿಗೆ ಕರೆದೊಯ್ದರು. ಒಂದು ತಿಂಗಳು ಮದೀನಾದಲ್ಲಿ ತಂಗಿದ ಬಳಿಕ ಮಕ್ಕಾಕ್ಕೆ ಪ್ರಯಾಣ ಬೆಳೆಸಿದರು. ಆದರೆ ದಾರಿಯಲ್ಲಿ ಅಸ್ವಸ್ಥರಾಗಿ ಅಬ್ವಾ ಎಂಬ ಸ್ಥಳದಲ್ಲಿ ನಿಧನ ಹೊಂದಿದರು. (ಕ್ರಿ.ಶ. 576) ಅವರ ಜೊತೆಗಿದ್ದ ಸೇವಕಿ ಒಮ್ಮೆ ಐಮನ್(ರ), ಹ. ಮುಹಮ್ಮದ್(ಸ)ರನ್ನು ಮಕ್ಕಃ ಕರೆತಂದು ಹ. ಅಬ್ದುಲ್ಲ್ ಮುತ್ತಲಿಬ್, (ಹ. ಮುಹಮ್ಮದ್‌ರವರ ಅಜ್ಜ)ರಿಗೆ ವಹಿಸಿದರು.

ಹ, ಅಬ್ದುಲ್ ಮುತ್ತಲಿಬ್ ತಮ್ಮ ಮೊಮ್ಮಗನನ್ನು ಬಹಳ ಪ್ರೀತಿಸುತ್ತಿದ್ದರು. ಹ. ಮುಹಮ್ಮದ್(ಸ)ರ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದರು. ಆದರೆ ಹ. ಮುಹಮ್ಮದ್(ಸ) 8 ವರ್ಷ ಪ್ರಾಯದವರಾದಾಗ ಪ್ರೀತಿಯ ಅಜ್ಜ ಸಹ ತೀರಿಕೊಂಡರು. (ಕ್ರಿ.ಶ. 578)

ನಿಧನದ ಸ್ವಲ್ಪ ಕಾಲದ ಮೊದಲು ಹ. ಅಬ್ದುಲ್ ಮುತ್ತಲಿಬ್, ಹ. ಮುಹಮ್ಮದ್(ಸ)ರ ಪೋಷಣೆಯನ್ನು ಅಬೂ ತಾಲಿಬ್, ಹ. ಮುಹಮ್ಮದ್(ಸ)ರ ಚಿಕ್ಕಪ್ಪರಿಗೆ ವಹಿಸಿದ್ದರು. ಅಬೂ ತಾಲಿಬ್ ತಮ್ಮ ಸಹೋದರನ ಪುತ್ರನನ್ನು ಅಕ್ಕರೆಯಿಂದ ಬೆಳೆಸಿದರು. ಮುಂದೆ 40 ವರ್ಷಗಳ ವರೆಗೆ ಹ. ಮುಹಮ್ಮದ್(ಸ)ರಿಗೆ ರಕ್ಷಣೆ ನೀಡಿದರು.

ಹ. ಮುಹಮ್ಮದ್(ಸ) ವಿದ್ಯೆ ಕಲಿಯಲು ಯಾವುದೇ ಶಾಲೆಗೆ ಅಥವಾ ವಿದ್ಯಾ ಕೇಂದ್ರಕ್ಕೆ ಹೋಗಲಿಲ್ಲ. ಯಾವ ವ್ಯಕ್ತಿಯೂ ಅವರಿಗೆ ಶಿಕ್ಷಣವನ್ನು ನೀಡಲಿಲ್ಲ. ಪ್ರವಾದಿಯಾದಾಗ ಸೃಷ್ಟಿಕರ್ತನಾದ ಅಲ್ಲಾಹನೇ ಅವರ ಶಿಕ್ಷಕ, ಮಾರ್ಗದರ್ಶಕನಾಗಿದ್ದನು!

ಹ. ಅಬೂ ತಾಲಿಬ್ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಗೋಧಿ ಮತ್ತು ಸುಗಂಧ ದ್ರವ್ಯ ವ್ಯಾಪಾರವನ್ನು ಮಕ್ಕಃ ಮತ್ತು ಸಿರಿಯಾ ನಡುವೆ ಮಾಡುತ್ತಿದ್ದರು. ಹ. ಮುಹಮ್ಮದ್(ಸ) ತಮ್ಮ ಚಿಕ್ಕಪ್ಪರ ಬಳಿ ವ್ಯಾಪಾರ ನಡೆಸುವುದನ್ನು ಕಲಿತರು. 25ನೇ ಪ್ರಾಯದಲ್ಲಿ ಸ್ವತಂತ್ರವಾಗಿ ವ್ಯಾಪಾರವನ್ನು ಆರಂಭಿಸಿದರು.

ಹ. ಅಬೂ ತಾಲಿಬ್‌ರವರ ದೊಡ್ಡ ಸಂಸಾರವಾಗಿತ್ತು. ಹಾಗಾಗಿ ಬಹಳಷ್ಟು ಖರ್ಚು ವೆಚ್ಚಗಳನ್ನು ನಿಭಾಯಿಸಬೇಕಾಗಿತ್ತು. ಈ ಕಾರಣದಿಂದ ಅವರಿಗೆ ಹ. ಮುಹಮ್ಮದ್(ಸ)ರಿಗೆ ವ್ಯಾಪಾರ ಮಾಡಲು ದೊಡ್ಡ ಮೊತ್ತವನ್ನು ನೀಡಲು ಸಾಧ್ಯವಾಗಿರಲಿಲ್ಲ. ಹ. ಮುಹಮ್ಮದ್(ಸ) ಇತರರ ಬಂಡವಾಳದಿಂದ ವ್ಯಾಪಾರವನ್ನು ಮಾಡುತ್ತಿದ್ದರು. ವ್ಯಾಪಾರದಲ್ಲಿ ಬಂದ ಲಾಭವನ್ನು ಹಂಚಿಕೊಳ್ಳುತ್ತಿದ್ದರು.

ಹ. ಮುಹಮ್ಮದ್(ಸ) ಸತ್ಯವಂತರೂ, ಪ್ರಾಮಾಣಿಕರೂ ಆಗಿದ್ದರು. ಅವರ ಸತ್ಯತೆ ದೂರ ದೂರದ ಪ್ರದೇಶಗಳಲ್ಲಿ ಹರಡಿತ್ತು. ಜನರು ಹ. ಮುಹಮ್ಮದ್(ಸ)ರಲ್ಲಿ ಬಂಡವಾಳ ಹೂಡಲು ಉತ್ಸುಕರಾಗಿರುತ್ತಿದ್ದರು. ಅವರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಕಾರಣ ಅಮೀನ್ ಮತ್ತು ಸಾದಿಕ್ ಎಂದು ಅವರನ್ನು ಕರೆಯುತ್ತಿದ್ದರು.

ಹ. ಖದೀಜ(ರ) ಮಕ್ಕಃದ ಕುಲೀನ ಕುಟುಂಬಕ್ಕೆ ಸೇರಿದ್ದರು. ಅವರು ಶ್ರೀಮಂತರಾಗಿದ್ದರು. ಬಂಡವಾಳವನ್ನು ಹೂಡಿ ವ್ಯಾಪಾರವನ್ನು ನಡೆಸುತ್ತಿದ್ದರು. ಅವರಿಗೆ ಸುಮಾರು 40 ವರ್ಷ ಪ್ರಾಯವಾಗಿತ್ತು. ಅವರೋರ್ವ ವಿಧವೆಯಾಗಿದ್ದರು.

ಹ. ಮುಹಮ್ಮದ್(ಸ)ರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ವಿಷಯ ಹ. ಖದೀಜಾ(ರ)ರ ಗಮನಕ್ಕೂ ಬಂತು. ಅವರು ಹ. ಮುಹಮ್ಮದ್(ಸ)ರೊಂದಿಗೆ ಮಾತುಕತೆ ನಡೆಸಿ ಅವರಿಗೆ ಹಣವನ್ನು ನೀಡಿ ಸಿರಿಯಾಕ್ಕೆ ತೆರಳುತ್ತಿದ್ದ ಕಾರಾವಾನದೊಂದಿಗೆ ಅವರನ್ನು ಕಳುಹಿಸಿದರು. ಈ ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಹ. ಖದೀಜಾ(ರ)ರಿಗೆ ಲಾಭ ಉಂಟಾಯಿತು.

ಸಿರಿಯಾದ ಕಾರವಾನದಲ್ಲಿ ಹ. ಮುಹಮ್ಮದ್(ಸ)ರ ಜೊತೆಯಲ್ಲಿ ಹ. ಖದೀಜ(ರ)ರ ಸೇವಕ ಮೈಸರ ಸಹ ಇದ್ದರು. ಅವರು ಪ್ರಯಾಣದಲ್ಲಿ ಅನೇಕ ವಿಚಿತ್ರ ಘಟನೆಗಳನ್ನು ಕಂಡರು. ದಣಿವಾರಿಸಲು ಹ. ಮುಹಮ್ಮದ್(ಸ) ಮರದ ಕೆಳಗೆ ಕುಳಿತುಕೊಂಡಾಗ ಮರದ ಕೊಂಬೆಯು ಅವರತ್ತ ಬಾಗಿ ಅವರಿಗೆ ನೆರಳನ್ನು ನೀಡುತ್ತಿತ್ತು. ಬಿಸಿಲಿನಲ್ಲಿ ದಾರಿಯಲ್ಲಿ ಸಾಗುವಾಗ ಮೋಡವು ಒಂದು ಸೂರ್ಯನಿಂದ ಅವರನ್ನು ರಕ್ಷಿಸುತ್ತಿತ್ತು. ಅವರ ಬೆವರಿನಲ್ಲಿ ಸುಗಂಧದ ವಾಸನೆ ಇರುತ್ತಿತ್ತು.

ಮೈಸರ ಈ ವೃತ್ತಾಂತವನ್ನೆಲ್ಲಾ ಹ. ಖದೀಜ(ರ)ರಿಗೆ ತಿಳಿಸಿದರು.

ಹ. ಖದೀಜ(ರ) 40 ವರ್ಷದ ಕಿರು ಪ್ರಾಯದಲ್ಲಿ ಎಡು ಸಲ ವಿಧವೆಯಾಗಿದ್ದರು. ಶ್ರೀಮಂತರಾಗಿದ್ದರೂ ಏಕಾಂತದ ನೋವು ಅವರನ್ನು ಕಾಡುತ್ತಿತ್ತು. ಹ. ಮುಹಮ್ಮದ್(ಸ)ರ ಗುಣಗಳಿಂದ ಅವರು ಅವರ ಕಡೆಗೆ ಆಕರ್ಷಿತರಾಗಿದ್ದರು. ಅವರೊಂದಿಗೆ ತಮ್ಮ ಬಾಳನ್ನು ಮತ್ತೊಮ್ಮೆ ಹಸನಾಗ ಬಯಸಿದರು. ಹ. ಖದೀಜ(ರ) ತಮ್ಮ ಆಪ್ತ ಗೆಳತಿ ನಫೀಸ ಬಿಂತೆ ಮುನ್ಬರ ಮೂಲಕ ಹ. ಮುಹಮ್ಮದ್(ಸ)ರಿಗೆ ವಿವಾಹದ ಸಂದೇಶವನ್ನು ಕಳುಹಿಸಿದರು. ಹ. ಖದೀಜ(ರ)ರ ಪರವಾಗಿ ಅವರ ಸಂಬಂಧಿ ಅಮ್ರ್ ಬಿನ್ ಅಸದ್ ಮತ್ತು ಹ. ಮುಹಮ್ಮದ್(ಸ)ರ ಪರವಾಗಿ ಅಬೂ ತಾಲಿಬ್ ಮತ್ತು ಹ. ಹಂಝ(ರ) ಮಾತುಕತೆ ನಡೆಸಿ ವಿವಾಹವನ್ನು ನೆರವೇರಿಸಿದರು. (ಕ್ರಿ.ಶ. 595)

ವಿವಾಹದ ನಂತರ 15 ವರ್ಷಗಳ ಕಾಲ ಹ. ಮುಹಮ್ಮದ್(ಸ) ಮಕ್ಕಃದ ಸಮಾಜದಲ್ಲಿ ಓರ್ವ ಆದರ್ಶ ಪತಿಯಾಗಿ, ಆದರ್ಶ ತಂದೆಯಾಗಿ, ಓರ್ವ ಸತ್ಪ್ರಜೆಯಾಗಿ ಕಾಣಿಸಿಕೊಂಡರು. ಬಡವರಿಗೆ, ನಿರ್ಗತಿಕರಿಗೆ ಸಹಾಯದ ಹಸ್ತ ಚಾಚುತ್ತಿದ್ದರು. ಕಷ್ಟದಲ್ಲಿರುವವರಿಗೆ ಅನುಕಂಪ ತೋರುತ್ತಿದ್ದರು. ಅನಾಥರಿಗೆ ಆಸರೆಯನ್ನು ನೀಡುತ್ತಿದ್ದರು. ವ್ಯವಹಾರಗಳಲ್ಲಿ ಪ್ರಾಮಾಣಿಕತೆ ತೋರುತ್ತಿದ್ದರು. ಜೀವನದಲ್ಲಿ ಒಮ್ಮೆಯೂ ಸುಳ್ಳನ್ನು ನುಡಿದಿರಲಿಲ್ಲ. ಸಮಾಜದ ಪ್ರತಿಯೊಬ್ಬ ವ್ಯಕ್ತಿ ಅವರ ಪ್ರತಿ

ಚಲನವಲನವನ್ನು ಅರಿತಿದ್ದನು.

ಈ ಕಾರಣಗಳಿಂದಲೇ ಹ. ಮುಹಮ್ಮದ್(ಸ) 40ನೆಯ ವಯಸ್ಸಿನಲ್ಲಿ ಅಲ್ಲಾಹ್ ತಮ್ಮನ್ನು ಪ್ರವಾದಿಯಾಗಿ ನೇಮಿಸಿರುವನು ಎಂದು ಸಾರ್ವಜನಿಕವಾಗಿ ಘೋಷಿಸಿದಾಗ ಯಾರೂ ಅವರು ಸುಳ್ಳುಗಾರ ಎಂದು ಹೇಳಲಿಲ್ಲ. ಜನರು ಅಹಂಕಾರ, ಒಣ ಪ್ರತಿಷ್ಠೆ, ಸಮಾಜದಲ್ಲಿ ತಮ್ಮ ಘನತೆಗೆ ಎಲ್ಲಿ ಕುಂದು ಬರುತ್ತದೋ ಎಂಬ ಕಾರಣಗಳಿಂದ ಅವರ ಪ್ರವಾದಿತ್ವವನ್ನು ವಿರೋಧಿಸಿದರೆ ವಿನಃ ಯಾರೂ ಅವರ ಚಾರಿತ್ರ್ಯದ ಕಾರಣ ಅವರನ್ನು ನಿರಾಕರಿಸಲಿಲ್ಲ!

# ಹ. ಮುಹಮ್ಮದ್(ಸ) ಪ್ರವಾದಿಯಾಗಿ

ಅರಬರು ಏಕದೇವನಲ್ಲಿ ವಿಶ್ವಾಸವಿಡುತ್ತಿದ್ದರು. ಆದರೆ ಏಕದೇವನ ಆರಾಧನೆಯ ಜೊತೆಗೆ ಅನೇಕ ದೇವಿ-ದೇವತೆಗಳನ್ನು ಪೂಜಿಸುತ್ತಿದ್ದರು. ಹ. ಮುಹಮ್ಮದ್(ಸ) ಬಾಲ್ಯದಿಂದಲೂ ಎಂದೂ ಬಹುದೇವನ ಆರಾಧನೆಯನ್ನು ಮಾಡಿರಲಿಲ್ಲ. ಹ. ಮುಹಮ್ಮದ್(ಸ) 37 ವರ್ಷ ಪ್ರಾಯ ತಲುಪಿದಾಗ ಹಿರಾ ಗುಹೆ ತೆರಳಿ ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ಏಕದೇವನನ್ನು ಆರಾಧಿಸುವ, ಆತನನ್ನು ಸಂತುಷ್ಟಗೊಳಿಸುವ ಕ್ರಮದ ಬಗ್ಗೆ ಆಲೋಚಿಸುತ್ತಿದ್ದರು.

40ನೇ ವರ್ಷದಲ್ಲಿ ಹ. ಮುಹಮ್ಮದ್(ಸ) ಮಾಮೂಲಿನಂತೆ ಹಿರಾ ಗುಹೆಯಲ್ಲಿ ಏಕಾಂತದಲ್ಲಿ ಧ್ಯಾನಾಸಕ್ತರಾಗಿದ್ದಾಗ ದೇವಚರ ಹ. ಜಿಬ್ರೀಲ್(ಅ) ಆಗಮಿಸಿ ಅಲ್ಲಾಹ್ ಅವರನ್ನು ಪ್ರವಾದಿಯಾಗಿ ನೇಮಿಸಿರುವನು ಎಂದು ತಿಳಿಸಿದರು. ನಂತರ 23 ವರ್ಷಗಳಲ್ಲಿ ಹ. ಮುಹಮ್ಮದ್(ಸ) ತಮ್ಮ ಪ್ರವಾದಿತ್ವದ ಹೊಣೆಗಾರಿಕೆಯನ್ನು ಪೂರ್ಣಗೊಳಿಸಿದರು.

ಪ್ರವಾದಿತ್ವದ ಆರಂಭದ ಮೂರು ವರ್ಷಗಳಲ್ಲಿ ಹ. ಮುಹಮ್ಮದ್(ಸ) ಅಲ್ಲಾಹನ ಸಂದೇಶವನ್ನು ಸಂಬಂಧಿಕರಿಗೆ ಮತ್ತು ಆಪ್ತ ಸಂಗಾತಿಗಳಿಗೆ ಮಾತ್ರ ನೀಡಿದರು. ಈ ಅವಧಿಯಲ್ಲಿ ಕೇವಲ 40 ಜನರು ಮಾತ್ರ ಇಸ್ಲಾಮ್ ಸ್ವೀಕರಿಸಿದರು.

ಪ್ರವಾದಿತ್ವದ 4ನೇ ವರ್ಷದಲ್ಲಿ ಅಲ್ಲಾಹನ ಸಂದೇಶವನ್ನು ಸಾರ್ವಜನಿಕವಾಗಿ ನೀಡಲು ಅವರಿಗೆ ಅಲ್ಲಾಹನು ಆದೇಶಿಸಿದನು. ಆದರೆ ಜನರು ಸೃಷ್ಟಿಕರ್ತನ ಸಂದೇಶವನ್ನು ಸ್ವೀಕರಿಸಲು ನಿರಾಕರಿಸಿದರು. ಮೂರ್ತಿಗಳ ಪೂಜೆಯನ್ನು ತ್ಯಜಿಸಲು ಅವರ ತಯಾರಿರಲಿಲ್ಲ. ಸಂಪೂರ್ಣ ಮಕ್ಕಃ ಹ. ಮುಹಮ್ಮದ್(ಸ)ರ ಶತ್ರುವಾಯಿತು.

ಪ್ರವಾದಿತ್ವದ 5ನೇ ವರ್ಷದಿಂದ 13ನೇ ವರ್ಷದವರೆಗೆ ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸಂದೇಶವನ್ನು ಮಕ್ಕಃ ಪಟ್ಟಣ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ನೀಡಿದರು. ಈ ಅವಧಿಯಲ್ಲಿ ಅವರ ಅನುಯಾಯಿಗಳು ಸತ್ಯನಿಷೇಧಿಗಳಿಂದ ಬಹಳ ಹಿಂಸೆ ಮತ್ತು ಸಂಕಷ್ಟಗಳಿಗೆ ಗುರಿಯಾದರು. 80 ಅನುಯಾಯಿಗಳು ಮಕ್ಕಃ ಪಟ್ಟಣ ತ್ಯಜಿಸಿ ಅಬಿಸಿನಿಯಾಕ್ಕೆ ವಲಸೆ ಹೋದರು.

ಪ್ರವಾದಿ ಮುಹಮ್ಮದ್(ಸ) ಬನೂಹಾಷಿಮ್ ಗೋತ್ರಕ್ಕೆ ಸೇರಿದ್ದರು. ಬನೂಹಾಷಿಮ್ ಗೋತ್ರವು ಬಹಳ ಗೌರವಾನ್ವಿತ ಮತ್ತು ಪ್ರಬಲವಾಗಿತ್ತು. ಅದರ ಅನೇಕ ಸದಸ್ಯರು ಇಸ್ಲಾಮ್ ಸ್ವೀಕರಿಸಿರಲಿಲ್ಲ. ಆದರೂ ಅವರು ಹ. ಮುಹಮ್ಮದ್(ಸ)ರ ಬೆಂಗಾವಲಿಗಿದ್ದರು. ಮಕ್ಕಃದ ಸತ್ಯನಿಷೇಧಿಗಳಿಗೆ ಪ್ರವಾದಿ ಮುಹಮ್ಮದ್(ಸ)ರಿಗೆ ಯಾವ ಹಾನಿಯನ್ನೂ ಮಾಡಲಿಕ್ಕಾಗಿದ್ದಾಗ, ಸಂಪೂರ್ಣ ಬನೂಹಾಷಿಮ್ ಗೋತ್ರವನ್ನು ಬಹಿಷ್ಕರಿಸಲು ನಿರ್ಧರಿಸಿದರು. ಕ್ರಿ.ಶ. 616ರಿಂದ ಕ್ರಿ.ಶ. 619ರ ವರೆಗೆ ಮೂರು ವರ್ಷ ಬನೂಹಾಷಿಮ್ ಗೋತ್ರವನ್ನು ಬಹಿಷ್ಕರಿಸಲಾಯಿತು. ಅವರಿಗೆ ತಿನ್ನಲು ಆಹಾರವೂ ದೊರಕದಂತೆ ಮಾಡಲಾಯಿತು. ಬನೂಹಾಷಿಮ್ ಗೋತ್ರದ ಸದಸ್ಯರು ಬಹಳ ಸಂಕಷ್ಟಗಳನ್ನು

ಎದುರಿಸಬೇಕಾಯಿತು. ಮೂರು ವರ್ಷಗಳ ನಂತರ ಬಹಿಷ್ಕಾರ ಕೊನೆಗೊಂಡಿತು. ಆದರೆ ಇದೇ ಸಮಯದಲ್ಲಿ ಹ. ಮುಹಮ್ಮದ್(ಸ)ರ ಆದರ್ಶ ಪತ್ನಿ ಹ. ಖದೀಜ(ರ) ಹಾಗೂ ಅವರ ಚಿಕ್ಕಪ್ಪ ಅಬೂತಾಲಿಬ್‌ರ ನಿಧನವಾಯಿತು.

ಅಬೂತಾಲಿಬ್‌ರ ನಿಧನದ ನಂತರ ಅಬೂಲಹಬ್ ಬನೂಹಾಷಿನ್ ಗೋತ್ರದ ನಾಯಕನಾದನು. ಈತನು ಹ. ಮುಹಮ್ಮದ್(ಸ)ರನ್ನು ಬಹಳ ದ್ವೇಷಿಸುತ್ತಿದ್ದನು. ಈ ಮೊದಲು ಬನೂ ಹಾಷಿಮ್ ಗೋತ್ರವು ಹ. ಮುಹಮ್ಮದ್(ಸ)ರಿಗೆ ನೀಡುತ್ತಿದ್ದ ರಕ್ಷಣೆಯನ್ನು ಅಬೂಲಹಬ್ ಹಿಂಪಡೆದನು. ಇದರಿಂದಾಗಿ ಪ್ರವಾದಿ ಮುಹಮ್ಮದ್(ಸ) ಮತ್ತಷ್ಟು ಕಷ್ಟಗಳಿಗೆ ಗುರಿಯಾದರು.

ಮಕ್ಕಃದ ನಿವಾಸಿಗಳು ಇಸ್ಲಾಮಿನ ಸಂದೇಶವನ್ನು ವಿರೋಧಿಸುತ್ತಿರುವುದನ್ನು ನೋಡಿ ಪ್ರವಾದಿ ಮುಹಮ್ಮದ್(ಸ) ಮಕ್ಕಃದ ಹತ್ತಿರ ತಾಯಿಫ್ ಪಟ್ಟಣಕ್ಕೆ ತೆರಳಿ ಅಲ್ಲಿಯ ಜನರಿಗೆ ಇಸ್ಲಾಮಿನ ಸಂದೇಶವನ್ನು ನೀಡಿದರು. (ಕ್ರಿ.ಶ. 619) ಆದರೆ ತಾಯಿಫ್‌ನ ಜನರು ಪ್ರವಾದಿ ಮುಹಮ್ಮದ್(ಸ)ರೊಂದಿಗೆ ದುರ್ವರ್ತನೆ ತೋರಿದರು. ಹ. ಮುಹಮ್ಮದ್(ಸ)ರನ್ನು ಅಪಮಾನಿಸಿ, ಅವರ ಮೇಲೆ ಕಲ್ಲುಗಳನ್ನು ಎಸೆದು ಘಾಸಿಗೊಳಿಸಿದರು. ಪ್ರವಾದಿ ಮುಹಮ್ಮದ್(ಸ)ರ ದೇಹವು ರಕ್ತಸಿಕ್ತಗೊಂಡಿತು.

ಹ. ಖದೀಜ(ರ) ಮತ್ತು ಅಬೂತಾಲಿಬ್‌ರ ನಿಧನದೊಂದಿಗೆ ಸಂಪೂರ್ಣ ಮಕ್ಕಃ ಪಟ್ಟಣ ಹ. ಮುಹಮ್ಮದ್(ಸ)ರ ಶತ್ರುವಾಯಿತು. ತಾಯಿಫ್ ಪಟ್ಟಣದ ಘಟನೆಯಿಂದ ಪ್ರವಾದಿ ಮುಹಮ್ಮದ್(ಸ) ಬಹಳ ಮನನೊಂದಿದ್ದರು. ಹ. ಮುಹಮ್ಮದ್(ಸ)ರ ಮನೋಬಲ ಹೆಚ್ಚಿಸಲು ಮತ್ತು ಅವರಿಗೆ ಅವರ ಕಾರ್ಯದಲ್ಲಿ ಸಫಲತೆಯ ಸುವಾರ್ತೆ ನೀಡಲು ಕ್ರಿ.ಶ. 620ರಲ್ಲಿ ಅಲ್ಲಾಹ್ ಅವರನ್ನು ಮೇಅರಾಜ್ ಮಾಡಿಸಿದನು. ಪ್ರವಾದಿ ಮುಹಮ್ಮದ್(ಸ) ಮೊದಲು ಮಕ್ಕಃದಿಂದ ಜೆರೋಸಲೇಮ್ ತೆರಳಿದರು. ಜೆರೋಸಲೇಮ್‌ನಲ್ಲಿ ಪ್ರವಾದಿ ಮುಹಮ್ಮದ್(ಸ) ಎಲ್ಲಾ ಪ್ರವಾದಿಗಳು ಒಟ್ಟುಗೂಡಿದ್ದ ಜಮಾಅತ್‌ನ ನಮಾಝಿನ ನೇತೃತ್ವ ವಹಿಸಿದರು. ನಂತರ ಬುರಾಕ್ ಏರಿ ಆಕಾಶದತ್ತ ಪ್ರಯಾಣ ಬೆಳೆಸಿದರು. ಅಲ್ಲಾಹನು ಅವರಿಗೆ ಸ್ವರ್ಗ ಮತ್ತು ನರಕದ ದರ್ಶನ ಮಾಡಿಸಿದನು. ಮರಣದ ನಂತರ ಸಂಭವಿಸಲಿದ್ದ ಘಟನೆಗಳನ್ನು ಹ. ಮುಹಮ್ಮದ್(ಸ)ರಿಗೆ ಪ್ರತ್ಯಕ್ಷ ತೋರಿಸಲಾಯಿತು. ಇದರಿಂದಾಗಿ ಪ್ರವಾದಿ ಮುಹಮ್ಮದ್(ಸ)ರ ಆತ್ಮಸ್ಥೈರ್ಯವು ಬಲಗೊಂಡಿತು.

ಅರಬರು ಮೂರ್ತಿಗಳ ಆರಾಧಕರಾಗಿದ್ದರೂ, ಅಲ್ಲಾಹನು ವಿಶ್ವದ ಸೃಷ್ಟಿಕರ್ತನಾಗಿರುವನೆಂದು ನಂಬಿದ್ದರು. ಅವರು ಹ. ಇಬ್ರಾಹೀಮ್(ಅ)ರ ಧರ್ಮವನ್ನು ಅನುಸರಿಸುತ್ತಿದ್ದರು.

ಪ್ರವಾದಿ ಮುಹಮ್ಮದ್(ಸ) ಧರ್ಮ ಪ್ರಚಾರಕ್ಕಾಗಿ ಎಲ್ಲಾ ಅವಕಾಶಗಳನ್ನು ಬಳಸುತ್ತಿದ್ದರು. ಹಜ್ಜ್‌ನ ಸಂದರ್ಭದಲ್ಲಿ ಜಗತ್ತಿನ ಎಲ್ಲೆಡೆಯಿಂದ ಜನರು ಮಕ್ಕಃ ಪಟ್ಟಣಕ್ಕೆ ಆಗಮಿಸುತ್ತಿದ್ದರು. ಪ್ರವಾದಿ ಮುಹಮ್ಮದ್(ಸ) ಪ್ರತಿಯೊಂದು ಡೇರೆಯ ಬಳಿ ತಲುಪಿ ಅಲ್ಲಾಹನ ಸಂದೇಶವನ್ನು ತಲುಪಿಸುತ್ತಿದ್ದರು.

ಯಹೂದಿಯರ ಮತ್ತು ಕ್ರೈಸ್ತರ

ಧರ್ಮಗ್ರಂಥಗಳಲ್ಲಿ ಪ್ರವಾದಿಯ ಆಗಮನದ ಸುವಾರ್ತೆ ಇದೆ. ಯಹೂದಿಯರು ಮತ್ತು ಕ್ರೈಸ್ತರು ಪ್ರವಾದಿಯನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು. ಅವರು ಅರಬರನ್ನು, "ಸ್ವಲ್ಪ ಕಾಲದಲ್ಲಿ ಪ್ರವಾದಿಯು ಆಗಮಿಸಲಿರುವನು. ಪ್ರವಾದಿಯ ಆಗಮನದ ನಂತರ ನಾವು ನಿಮ್ಮನ್ನು ವಿಚಾರಿಸಿಕೊಳ್ಳುತ್ತೇವೆ" ಎಂದು ಬೆದರಿಸುತ್ತಿದ್ದರು. ಈ ರೀತಿ ಪ್ರವಾದಿಯು ಬರಲಿರುವ ವಿಷಯವು ಅರಬರಲ್ಲಿಯೂ ಪ್ರಚಲಿತವಾಗಿತ್ತು.

ಕ್ರಿ.ಶ. 620ರ ಹಜ್ಜ್ ವೇಳೆ ಮದೀನಾದಿಂದ ಬಂದಿದ್ದ ಕೆಲ ಹಜ್ಜ್ ಯಾತ್ರಾರ್ಥಿಗಳಿಗೆ ಹ. ಮುಹಮ್ಮದ್(ಸ)ರ ಬಗ್ಗೆ ವಿಷಯ ತಿಳಿಯಿತು. ಅವರು ಕೂಡಲೇ ಯಹೂದಿಯರು ಮತ್ತು ಕ್ರೈಸ್ತರು ಪ್ರಸ್ತಾಪಿಸುತ್ತಿದ್ದ ಪ್ರವಾದಿ ಇವರೇ ಆಗಿರಬೇಕೆಂದು ಊಹಿಸಿದರು. ಅವರಿಗಿಂತ ಮೊದಲು ತಾವೇ ಈ ಪ್ರವಾದಿಯ ಮೇಲೆ ವಿಶ್ವಾಸ ತರಬೇಕೆಂದು ಹ. ಮುಹಮ್ಮದ್(ಸ)ರನ್ನು ಭೇಟಿ ಮಾಡಿ ವಿಶ್ವಾಸ ತಂದರು. ಅವರು ಆರು ಜನರಿದ್ದರು. ಮಾರನೆಯ ವರ್ಷ ಹಜ್ಜ್‌ನಲ್ಲಿ ಅವರು ತಮ್ಮೊಂದಿಗೆ ಇನ್ನೂ ಕೆಲವು ವ್ಯಕ್ತಿಗಳನ್ನು ಕರೆತಂದರು. ಈ ವ್ಯಕ್ತಿಗಳೂ ಪ್ರವಾದಿ ಮುಹಮ್ಮದ್(ಸ)ರ ಮೇಲೆ ವಿಶ್ವಾಸವನ್ನು ತಂದರು. ಇವರು 75 ಜನರಿದ್ದರು. ತಮಗೆ ಇಸ್ಲಾಮಿನ ಬಗ್ಗೆ ತಿಳುವಳಿಕೆಯನ್ನು ನೀಡಲು ಇಸ್ಲಾಮಿನ ಬೋಧನೆಗಳನ್ನು ಕಲಿಸಲು ಓರ್ವ ಶಿಕ್ಷಕನನ್ನು ಮದೀನಾಕ್ಕೆ ಕಳುಹಿಸಿಕೊಡುವಂತೆ ಪ್ರವಾದಿಯವರಿಗೆ ವಿನಂತಿಸಿದರು. ಪ್ರವಾದಿವರ್ಯರು(ಸ) ಹ. ಮುಸಅಬ್ ಬಿನ್ ಉಮೈರ್(ರ)ರನ್ನು ಅವರ ಜೊತೆಯಲ್ಲಿ ಕಳುಹಿಸಿದರು. ಹ. ಮುಸಅಬ್ ಬಿನ್ ಉಮೈರ್(ರ)ರ ಶ್ರಮದಿಂದಾಗಿ ಮದೀನಾದ ಅನೇಕರು ಇಸ್ಲಾಮ್ ಸ್ವೀಕರಿಸಿದರು.

ದಿನೇ ದಿನೇ ಮದೀನಾದಲ್ಲಿ ಇಸ್ಲಾಮ್ ಹರಡಲಾರಂಭಿಸಿತು. ಮುಸ್ಲಿಮರ ಸಂಖ್ಯೆ ಮದೀನಾದಲ್ಲಿ ಬೆಳೆಯ ತೊಡಗಿ, ಮುಸ್ಲಿಮರು ಪ್ರಬಲರಾಗಲಾರಂಭಿಸಿದರು. ಮಕ್ಕಃದ ವ್ಯಾಪಾರಿಗಳು ಸಿರಿಯಾ ಕಡೆಗೆ ವ್ಯಾಪಾರಕ್ಕಾಗಿ ತೆರಳುವ ಮಾರ್ಗಗಳು ಮದೀನಾದ ಸಮೀಪದಿಂದಲೇ ಹಾದು ಹೋಗುತ್ತಿದ್ದವು. ಮದೀನಾದಲ್ಲಿ ಮುಸ್ಲಿಮರ ಬೆಳೆಯುತ್ತಿದ್ದ ಶಕ್ತಿ ಮಕ್ಕಃದ ವ್ಯಾಪಾರಿಗಳಿಗೆ ಅಪಾಯದ ಸೂಚಕವಾಗಿತ್ತು. ಈ ಅಪಾಯವನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲು ಮಕ್ಕಃದ ಮುಶ್ರಿಕರು ಹ. ಮುಹಮ್ಮದ್(ಸ)ರ ಹತ್ಯೆ ಮಾಡಲು ನಿಶ್ಚಯಿಸಿದರು.

ಹ. ಮುಹಮ್ಮದ್(ಸ)ರಿಗೆ ಮುಶ್ರಿಕರ ಸಂಚಿನ ಸುಳಿವು ದೊರೆಯಿತು. ಅಲ್ಲಾಹನ ಅಪ್ಪಣೆಯ ಮೇರೆಗೆ ಕ್ರಿ.ಶ. 622 ಸೆಪ್ಟೆಂಬರ್ 12, 13ರ ರಾತ್ರಿ ಪ್ರವಾದಿ ಮುಹಮ್ಮದ್(ಸ) ಮಕ್ಕಃ ತೊರೆದು ಮದೀನಾಕ್ಕೆ ಹಿಜ್ರತ್ ಮಾಡಿದರು. ಇದು ಪ್ರವಾದಿತ್ವದ 13ನೇ ವರ್ಷದಲ್ಲಿ ನಡೆಯಿತು.

ಮಕ್ಕಃದಲ್ಲಿ ಬಹುದೇವ ಆರಾಧಕರಿದ್ದರು. ಆದುದರಿಂದ ಇವರಿಗೆ ಏಕ ದೇವನ ಆರಾಧನೆಯ ಬಗ್ಗೆ ಮನವರಿಕೆ, ದೇವನ ನಿರಾಕರಣೆಯ ಪರಿಣಾಮಗಳು, ಸ್ವರ್ಗ, ನರಕ ಮೊದಲಾದ ಧರ್ಮದ ಬುನಾದಿ ವಿಷಯಗಳ ಬಗ್ಗೆ ಮನವರಿಕೆ ಮಾಡಬೇಕಿತ್ತು. ಮಕ್ಕಃದಲ್ಲಿ ಅವತೀರ್ಣವಾದ ಕುರ್‌ಆನಿನ ಹೆಚ್ಚಿನ ಸೂಕ್ತಗಳು ಇದಕ್ಕೆ ಮೀಸಲಾಗಿದ್ದವು. ಆದರೆ ಮದೀನಾದಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು. ಮದೀನಾದ ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರಿದ್ದರು. ಮದೀನಾದಲ್ಲಿ ಇಸ್ಲಾಮೀ ಸರಕಾರದ ಸ್ಥಾಪನೆಯಾಗಿತ್ತು. ಇಸ್ಲಾಮೀ ವ್ಯವಸ್ಥೆಯನ್ನು ಅಳವಡಿಸುವ ಅಗತ್ಯತೆ ಇತ್ತು. ಇದಕ್ಕೆ ಪೂರಕವಾಗಿ

ಕುರ್‌ಆನಿನ ಸೂಕ್ತಗಳು ಅವತೀರ್ಣಗೊಂಡವು. ಇದಲ್ಲದೇ ಮದೀನಾದಲ್ಲಿ ಯಹೂದಿಯರು ಮತ್ತು ಕ್ರೈಸ್ತರು ಗಣನೀಯ ಸಂಖ್ಯೆಯಲ್ಲಿದ್ದರು. ಇವರು ಅಲ್ಲಾಹನು ತೋರಿದ ಮಾರ್ಗದಿಂದ ಪಥಭ್ರಷ್ಟರಾಗಿದ್ದರು. ಇವರಿಗೆ ಪುನಃ ಸರಿದಾರಿ ತೋರಿಸಬೇಕಾಗಿತ್ತು. ಈ ಕಾರಣ ಯಹೂದಿಯರು ಮತ್ತು ಕ್ರೈಸ್ತರನ್ನು ಅಭಿಸಂಬೋಧಿಸುವ ಕುರ್‌ಆನ್ ಸೂಕ್ತಗಳು ಅವತೀರ್ಣಗೊಂಡವು.

ಒಮ್ಮೆ ಕುರೈಶರ ಒಂದು ಕಾರವಾನವು ಸಿರಿಯಾದಿಂದ ಮರಳುತ್ತಿತ್ತು. ಕಾರವಾನವು ಮದೀನಾದ ಪಕ್ಕದಿಂದ ಹಾದು ಹೋಗುತ್ತಿತ್ತು. ಕಾರವಾನದ ಮೇಲೆ ಮುಸ್ಲಿಮರು ಆಕ್ರಮಣ ಮಾಡಲಿದ್ದಾರೆ ಎಂಬ ವಾರ್ತೆ ಬಂದಿತು. ಕೂಡಲೇ ಕುರೈಶರು ಓರ್ವ ವ್ಯಕ್ತಿಯನ್ನು ಸಹಾಯಕ್ಕಾಗಿ ಮಕ್ಕಃ ದೌಡಾಯಿಸಿದರು. ಮಕ್ಕಃದಿಂದ ಕಾರವಾನದ ಬೆಂಬಲಕ್ಕೆ ಒಂದು ಸೇನೆ ರವಾನೆಗೊಂಡಿತು. ಆದರೆ ಅಷ್ಟರಲ್ಲಿ ಮುಸ್ಲಿಮರು ಆಕ್ರಮಣ ಮಾಡಲಿದ್ದಾರೆ ಎಂಬ ವಾರ್ತೆ ಸುಳ್ಳು ಎಂದು ತಿಳಿದು ಬಂತು. ಕಾರವಾನವು ಸುರಕ್ಷಿತವಾಗಿ ಮಕ್ಕಃ ತಲುಪಿತು.

ಕುರೈಶರು ಮದೀನಾದ ಗಂಡಾಂತರವನ್ನು ಶಾಶ್ವತವಾಗಿ ಅಳಿಸಲು ನಿರ್ಧರಿಸಿದರು. ಇದಕ್ಕಾಗಿ ತಯ್ಯಾರಿಯನ್ನು ಆರಂಭಿಸಲಾಯಿತು. ವ್ಯಾಪಾರದಲ್ಲಿ ಬಂದ ಲಾಭದಲ್ಲಿ ಒಂದಂಶವನ್ನು ಸೇನೆಗೆ ನೀಡಬೇಕೆಂದು ಫರ್ಮಾನು ಜಾರಿಗೊಳಿಸಲಾಯಿತು.

ಪ್ರವಾದಿತ್ವದ 14ನೇ ವರ್ಷದಲ್ಲಿ ಒಂದು ಸಾವಿರ ಸುಸಜ್ಜಿತ ಕುರೈಶರ ಸೇನೆ ಮದೀನಾದ ಮೇಲೆ ಆಕ್ರಮಣ ಮಾಡಲು ಹೊರಟಿತು. ಬದ್ರ್ ಎಂಬ ಸ್ಥಳದಲ್ಲಿ ಕುರೈಶರ ಸೇನೆಯು ಠಿಕಾಣಿಯನ್ನು ಹೂಡಿತು. ಮುಸ್ಲಿಮ್ ಸೇನೆಯಲ್ಲಿ ಕೇವಲ 313 ಯೋಧರಿದ್ದರು. ಶಸ್ತ್ರಾಸ್ತ್ರಗಳ ತೀವ್ರ ಕೊರತೆ ಇತ್ತು. ಆದರೆ ಮುಸ್ಲಿಮರು ವೀರಾ ವೇಶದಿಂದ ಹೋರಾಡಿ ಕುರೈಶ್ ಸೇನೆಯನ್ನು ಸೋಲಿಸಿದರು.

ಪ್ರವಾದಿತ್ವದ 16ನೇ ವರ್ಷ:

ಪ್ರವಾದಿತ್ವದ 16ನೇ ವರ್ಷದಲ್ಲಿ ಕುರೈಶರು ಬದ್ರ್ ಯುದ್ಧದ ಸೇಡನ್ನು ತೀರಿಸಲು ಸಂಪೂರ್ಣ ತಯ್ಯಾರಿಯೊಂದಿಗೆ 3000 ಸೈನಿಕರೊಂದಿಗೆ ಹೊರಟು ಉಹುದ್ ಸ್ಥಳವನ್ನು ತಲುಪಿದರು. ಆರಂಭದಲ್ಲಿ ಮುಸ್ಲಿಮ್ ಸೈನಿಕರು ಕುರೈಶರ ವಿರುದ್ಧ ಮೇಲುಗೈ ಸಾಧಿಸಿದರು. ಆದರೆ ಯುದ್ಧದ ನಡುವೆ ಒಂದು ಅಚಾತುರ್ಯದ ಕಾರಣ ಅವರಿಗೆ ಹಿನ್ನಡೆಯಾಯಿತು. ಮುಸ್ಲಿಮ್ ಸೇನೆ ಬಹಳ ನಷ್ಟವನ್ನು ಅನುಭವಿಸಬೇಕಾಯಿತು.

ಪ್ರವಾದಿತ್ವದ 18ನೇ ವರ್ಷ:

ಮುಸ್ಲಿಮ್ ಸೇನೆ ಉಹುದ್ ಯುದ್ಧದಲ್ಲಿ ಸೋಲನ್ನು ಅನುಭವಿಸಿದ್ದರು. ಮುಸ್ಲಿಮರ ನಾಮವೇಶವನ್ನು ಅಳಿಸಬೇಕೆಂಬ ದೃಢ ಸಂಕಲ್ಪದೊಂದಿಗೆ 10,000 ಸುಸಜ್ಜಿತ ಕುರೈಶ್ ಸೇನೆ ಮದೀನಾದ ಮುತ್ತಿಗೆ ಹಾಕಿತು. ಇಂತಹ ಬೃಹತ್ ಸೇನೆಯನ್ನು ರಣರಂಗದಲ್ಲಿ ಎದುರಿಸುವುದು ಕಷ್ಟಕರವೆಂದು ಮುಸ್ಲಿಮರು ಒಂದು ರಣತಂತ್ರವನ್ನು ಹೂಡಿದರು. ಮದೀನಾದ ಸುತ್ತ ಒಂದು ಕಂದಕವನ್ನು ತೋಡಿ ಮದೀನಾದೊಳಗೆ ಇದ್ದು ಮದೀನಾದ ರಕ್ಷಣೆಗೆ ಕಂಕಣ ಬದ್ಧರಾದರು. ಮದೀನಾದ ಮುತ್ತಿಗೆ ಸುಮರು ಒಂದು ತಿಂಗಳು ಮುಂದುವರೆಯಿತು. ಆದರೆ ಶತ್ರು ಸೇನೆಗೆ ಕಂದಕವನ್ನು ದಾಟಿ ಮದೀನಾ ಪ್ರವೇಶಿಸಲು ಸಾಧ್ಯವಾಗಲಿಲ್ಲ.

ಕೊನೆಗೆ ಅಲ್ಲಾಹನು ಬಿರುಗಾಳಿಯನ್ನು ಮತ್ತು ಭಾರಿ ಮಳೆಯನ್ನು ಕಳುಹಿಸಿದನು. ಶತ್ರು

ಸೇನೆಯ ಡೇರೆಗಳನ್ನು ಬಿರುಗಾಳಿಯ ರಭಸಕ್ಕೆ ಕಿತ್ತು ಹೋದವು. ಶತ್ರು ಸೇನೆ ಚಲ್ಲಾಪಿಲ್ಲಿಯಾಯಿತು.

ಶತ್ರು ಸೇನೆ ತಮ್ಮ ಉದ್ದೇಶದಲ್ಲಿ ಸಫಲವಾಗಿರುತ್ತಿದ್ದರೆ ಓರ್ವ ಮುಸ್ಲಿಮನೂ ಬದುಕುಳಿಯುವುದು ದುಃಸಾಧ್ಯವಾಗುತ್ತಿತ್ತು ಮತ್ತು ಅಲ್ಲಾಹನ ಅಂತಿಮ ದೀವಟಿಗೆ ತನ್ನ ಪ್ರಕಾಶವನ್ನು ಹರಡಲು ಸಾಧ್ಯವಾಗುತ್ತಿರಲಿಲ್ಲ.

ಈ ಘಟನೆ ಕ್ರಿ.ಶ. 627 ಮಾರ್ಚ್ ತಿಂಗಳಿನಲ್ಲಿ, ಪ್ರವಾದಿತ್ವದ 18ನೇ ವರ್ಷದಲ್ಲಿ ಜರುಗಿತ್ತು. ಈ ಕಂದಕ ಯುದ್ಧದ ವರ್ಣನೆ ಅಥರ್ವ ವೇದ(20: 26, 6)ರಲ್ಲಿ ನೀಡಲಾಗಿದೆ.

**से त्रा अमदन तानि वृषाया ते सोमासो वृत्रहत्येषु स्त्पतें**
**यत कारवे दश वृत्राायपति वर्हिष्मते नि सहस्रानि वर्हयः ॥६॥**

(ಅನುವಾದ: ಸತ್ಯದ ಅನುಯಾಯಿಗಳು 10,000 ಸೈನಿಕರುಳ್ಳ ಬಲಿಷ್ಟ ಶತ್ರು ಸೇನೆಯನ್ನು ಯಾವುದೇ ಹೋರಾಟವಿಲ್ಲದೇ ಸೋಲಿಸಿದರು.)

(ಒಣ್ಞಚಿಟಟಚಿಜ ುಟಿ ತಿಠಡಿಟಜ ಖಿಥಿಡಿುಠಿಣಣಡಿಙ – ಂ.ಊ. ಗುಜಥಿಚಿಡಿಣಿಖ ಪುಟ 118)

ಅರಬ್ ಪ್ರದೇಶವು ಸಂಪೂರ್ಣವಾಗಿ ಒಂದಾಗಿ ಇಸ್ಲಾಮ್ ಮತ್ತು ಮುಸ್ಲಿಮರ ಅಸ್ತಿತ್ವವನ್ನು ಭೂಮಿಯ ಮೇಲಿನಿಂದ ಅಳಿಸಲು ಯತ್ನಿಸುತ್ತಿತ್ತು. ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳು ಇದನ್ನು ಅರಿತ್ತಿದ್ದರು. ಆದರೆ ಅರಬ್ ಪ್ರದೇಶದ ಮೂಲೆ ಮೂಲೆಗೆ ಹೋಗಿ ಶತ್ರುಗಳನ್ನು ತಡೆಯುವುದು ಸಾಧ್ಯವಿರಲಿಲ್ಲ. ಕಂದಕ ಯುದ್ಧದ ಸಮಯದಲ್ಲಿ ಕಂದಕವನ್ನು ತೋಡಿ ಮದೀನ ರಕ್ಷಿಸುವಲ್ಲಿ ಪ್ರವಾದಿ ಮುಹಮ್ಮದ್(ಸ) ಸಫಲರಾಗಿದ್ದರು. ಆದರೆ ಮುಂದೆಯೂ ಇದೇ ರೀತಿ ಯಶಸ್ವಿಯಾಗುವರೆಂದು ಹೇಳಲು ಕಷ್ಟ ಸಾಧ್ಯವಾಗಿತ್ತು. ಆದುದರಿಂದ ಪ್ರವಾದಿ ಮುಹಮ್ಮದ್(ಸ) ಇಂತಹ ಸನ್ನಿವೇಶ ಮರುಕಳಿಸದಂತೆ, ಯಾವುದೇ ಸ್ಥಳದಲ್ಲಿ ಶತ್ರು ಸೈನ್ಯ ಜಮಾವಣೆಯಾಗುತ್ತಿರುವುದನ್ನು ಅರಿತ ಕೂಡಲೇ ಯೋಧರ ತಂಡವನ್ನು ಕಳುಹಿಸಿ ಅವರನ್ನು ಚದುರಿಸುತ್ತಿದ್ದರು.

ಪ್ರವಾದಿತ್ವದ 19ನೇ ವರ್ಷ:

ಒಂದು ರಾತ್ರಿ ಹ. ಮುಹಮ್ಮದ್(ಸ) ಉಮ್ರಾ ನಿರ್ವಹಿಸಿರುತ್ತಿರುವಂತೆ ಕನಸು ಕಾಣುತ್ತಾರೆ. ಉಮ್ರಾ ನಿರ್ವಹಿಸುವಾಗ ಪವಿತ್ರ ಕಅಬಾದ ತವಾಫ್ ಮಾಡಲಾಗುತ್ತದೆ. ನಂತರ ಸಫಾ ಮತ್ತು ಮರ್ವಗಳ ನಡುವೆ ನಡೆಯಬೇಕಿರುತ್ತದೆ. ಕೊನೆಗೆ ತಲೆಯ ಕೂದಲನ್ನು ತೆಗೆಸ ಬೇಕಿರುತ್ತದೆ.

ಪ್ರವಾದಿ ಮುಹಮ್ಮದ್(ಸ) ತಾವು ಕಂಡ ಕನಸನ್ನು ಅನುಯಾಯಿಗಳಿಗೆ ತಿಳಿಸಿದಾಗ, ಅವರಿಗೂ ಪವಿತ್ರ ಕಅಬಾ ಭವನವನ್ನು ಮತ್ತು ತಮ್ಮ ನಾಡನ್ನು ನೋಡುವ ಅಭಿಲಾಷೆ ಉಂಟಾಯಿತು.

ಪ್ರವಾದಿ ಮುಹಮ್ಮದ್(ಸ) 1400 ಅನುಯಾಯಿಗಳೊಂದಿಗೆ ಉಮ್ರಾ ನಿರ್ವಹಿಸುವ ಇರಾದೆಯಿಂದ ಮದೀನಾದಿಂದ ಮಕ್ಕಃ ಪ್ರಯಾಣ ಬೆಳೆಸಿದರು. ಆದರೆ ಕುರೈಶರು ಪ್ರವಾದಿ ಮುಹಮ್ಮದ್(ಸ)ರಿಗೆ ಉಮ್ರಾ ನಿರ್ವಹಿಸಲು ಅವಕಾಶ ನೀಡಲಿಲ್ಲ. ಮುಸ್ಲಿಮ್ ತಂಡದ ಮೇಲೆ ಆಕ್ರಮಣಕ್ಕೂ ಅವರು ಸಿದ್ಧರಾದರು. ಕೊನೆಗೆ ಎರಡೂ ಪಕ್ಷಗಳ ನಡುವೆ ಮಾತುಕತೆ ನಡೆದು ಒಂದು ಒಪ್ಪಂದಕ್ಕೆ ಬರಲಾಯಿತು. ಒಪ್ಪಂದವನ್ನು "ಸುಲೇಹ್ ಹುದೈಬಿಯಾ" ಎನ್ನುತ್ತಾರೆ.

ಹುದೈಬಿಯಾ: ಒಪ್ಪಂದದ ಪ್ರಕಾರ ಮುಸ್ಲಿಮರು ಉಮ್ರಾ ನಿರ್ವಹಿಸದೇ ಮದೀನಾ ಹಿಂತೆರಳಬೇಕು ಮತ್ತು ಮುಂದಿನ ವರ್ಷ ಉಮ್ರಾ ನಿರ್ವಹಿಸಬಹುದಾಗಿತ್ತು. ಎರಡೂ ಕಡೆಯವರು ಪರಸ್ಪರರ ಮಿತ್ರ ಪಕ್ಷಗಳ ಮೇಲೆ ಆಕ್ರಮಣ ಮಾಡುವಂತಿರಲಿಲ್ಲ. ಈ ಘಟನೆಯು ಪ್ರವಾದಿತ್ವದ 19ನೇ ವರ್ಷದಲ್ಲಿ ನಡೆಯಿತು.

ಪ್ರವಾದಿತ್ವದ 20ನೇ ವರ್ಷ:

ಮದೀನಾ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಹೂದಿಯರು ಬಹಳ ಪ್ರಬಲರಾಗಿದ್ದರು. ಅವರು ಬಡ್ಡಿ ವ್ಯಾಪಾರವನ್ನು ನಡೆಸುತ್ತಿದ್ದರು. ಅರಬರನ್ನು ನಿಕೃಷ್ಟತೆಯಿಂದ ಕಾಣುತ್ತಿದ್ದರು. ತಾವೇ ಶ್ರೇಷ್ಠರೆಂಬ ಅಹಂಕಾರ ಅವರಲ್ಲಿ ಇತ್ತು. ಯಹೂದಿಯರು ಮುಸ್ಲಿಮರ ಮೇಲೆ ಆಕ್ರಮಣ ನಡೆಸುವಂತೆ ಕುರೈಶರಿಗೆ ಪ್ರಚೋದಿಸುತ್ತಿದ್ದರು ಮತ್ತು ಮುಸ್ಲಿಮರ ವಿರುದ್ಧ ಪಿತೂರಿ ನಡೆಸುತ್ತಿದ್ದರು.

ಯಹೂದಿಯರ ಉಪಟಳವನ್ನು ಕೊನೆಗೊಳಿಸಲು ಪ್ರವಾದಿ ಮುಹಮ್ಮದ್(ಸ), ಯಹೂದಿಯರ ಭದ್ರಕೋಟೆ ಖೈಬರ್‌ಗೆ ಮುತ್ತಿಗೆ ಹಾಕಿದರು. ಯಹೂದಿಯರು 20,000 ಸಂಖ್ಯೆಯಲ್ಲಿದ್ದರೂ ಮುಸ್ಲಿಮ್ ಸೇನೆಯೊಂದಿಗೆ ಹೋರಾಡಲಾಗಲಿಲ್ಲ. ಕೊನೆಗೆ ಯಹೂದಿಯರು ಮುಸ್ಲಿಮ್ ಸೇನೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡರು.

ಒಪ್ಪಂದದ ನಂತರ ಯಹೂದಿಯರು ಮುಸ್ಲಿಮ್ ಸೇನೆಯ ಮುಖಂಡರನ್ನು ಔತಣಕೂಟಕ್ಕೆ ಆಹ್ವಾನಿಸಿದರು. ಯಹೂದಿಯರು ಕುತಂತ್ರದಿಂದ ಆಹಾರದಲ್ಲಿ ವಿಷವನ್ನು ಬೆರೆಸಿದರು. ಪ್ರವಾದಿಯವರ(ಸ) ಅನುಯಾಯಿಯೋರ್ವರು ಒಂದು ತುತ್ತು ಅನ್ನ ತಿಂದ ಕೂಡಲೇ ವಿಷದ ಕಾರಣ ಅಸುನೀಗಿದರು. ಪ್ರವಾದಿ ಮುಹಮ್ಮದ್(ಸ) ಒಂದು ತುತ್ತು ಆಹಾರವನ್ನು ಬಾಯಿಗೆ ಇಟ್ಟ ಕೂಡಲೇ ಅದನ್ನು ಉಗಿದರು. ಆದರೆ ವಿಷವು ತನ್ನ ಪರಿಣಾಮವನ್ನು ಬೀರಿತು. ಈ ಘಟನೆಯ ನಂತರ ಪ್ರವಾದಿ ಮುಹಮ್ಮದ್(ಸ) ಐದು ವರ್ಷಗಳವರೆಗೆ ಜೀವಿಸಿದ್ದರು. ಆದರೆ ವಿಷದ ಪ್ರಭಾವದ ಕಾರಣ ಆಗಾಗ್ಗೆ ಅಸ್ವಸ್ಥರಾಗುತ್ತಿದ್ದರು. ಈ ವಿಷದ ಕಾರಣದಿಂದಲೇ ಪ್ರವಾದಿ ಮುಹಮ್ಮದ್(ಸ) ನಿಧನ ಹೊಂದಿದರು. (ಸಹಿಬುಖಾರಿ ಭಾಗ– 2, ಪುಟ– 695, ಸಂಖ್ಯೆ 1554) ಘಟನೆ ಪ್ರವಾದಿತ್ವದ 20ನೇ ವರ್ಷದಲ್ಲಿ ಜರುಗಿತು.

ಹುದೈಬಿಯಾ ಒಪ್ಪಂದದ ನಂತರ ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸಂದೇಶವನ್ನು ಸ್ವೀಕರಿಸುವ ಆಹ್ವಾನ ಪತ್ರಗಳನ್ನು ಅನೇಕ ರಾಜರಿಗೆ ರವಾನಿಸಿದರು. ಉದಾಹರಣೆಗೆ ರೋಮ್, ಇರಾನ್, ಈಜಿಪ್ಟ್, ಇಥಿಯೋಪಿಯ ಮತ್ತು ಯಮನ್ ದೇಶಗಳ ರಾಜರಿಗೆ ರವಾನಿಸಿದರು.

ಪ್ರವಾದಿ ಮುಹಮ್ಮದ್(ಸ)ರ ಪತ್ರಗಳಿಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ರೋಮ್‌ನ ರಾಜನು ಹ. ಮುಹಮ್ಮದ್(ಸ)ರನ್ನು ಪ್ರವಾದಿ ಎಂದು ಒಪ್ಪಿಕೊಂಡನು. ಆದರೆ ಇಸ್ಲಾಮ್ ಸ್ವೀಕರಿಸಲಿಲ್ಲ. ಇರಾನಿನ ರಾಜನು ಪ್ರವಾದಿಯವರ(ಸ) ಪತ್ರವನ್ನು ಓದಿ ರೋಷಾಕುಲನಾದನು. ಪ್ರವಾದಿವರ್ಯರ(ಸ) ಪತ್ರವನ್ನು ಆತನು ಹರಿದು ಹಾಕಿದನು. ಈಜಿಪ್ಟ್‌ನ ರಾಜನು ಪ್ರವಾದಿ(ಸ)ರ ದೂತರನ್ನು ಬಹಳ ಗೌರವದಿಂದ ಬರಮಾಡಿಕೊಂಡನು. ನಂತರ ಅನೇಕ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದನು.

ಯಮನ್ ದೇಶದ ರಾಜನು, ಪ್ರವಾದಿ ಮುಹಮ್ಮದ್(ಸ) ಅವರ ರಾಜ್ಯದಲ್ಲಿ ಒಂದು ಪಾಲನ್ನು ಆತನಿಗೂ ನೀಡಿದರೆ ಮಾತ್ರ ಇಸ್ಲಾಮ್ ಸ್ವೀಕರಿಸುವುದಾಗಿ ತಿಳಿಸಿದನು. ಇಸ್ಲಾಮ್ ಕೇವಲ ರಾಜ್ಯಾಡಳಿತ ನಡೆಸಲು ಮಾತ್ರ ಬಂದಿರುವುದಿಲ್ಲ. ಈ ಕಾರಣಕ್ಕಾಗಿ ಪ್ರವಾದಿ(ಸ) ಯಮನ್‌ನ ದೇಶದ ರಾಜನ ಪ್ರಸ್ತಾವನೆಯನ್ನು ತಿರಸ್ಕರಿಸಿದರು.

ಇಥಿಯೋಪಿಯಾದ ರಾಜನು ಪ್ರವಾದಿವರ್ಯರ(ಸ) ದೂತರನ್ನು ಬಹಳ ಗೌರವಾದರಗಳಿಂದ ಕಂಡು, ಇಸ್ಲಾಮ್ ಸ್ವೀಕರಿಸಿದನು.

ಸಿರಿಯಾ ದೇಶದ ಸರಹದ್ದಿನಲ್ಲಿ ಇದ್ದ ಶರಜೀಲ್ ಬಿನ್ ಅಮ್ರ್ ಹೆಸರಿನ ಪಾಳೇಗಾರ, ಪ್ರವಾದಿ(ಸ)ರ ಪತ್ರವನ್ನು ಓದಿ ಕ್ರುದ್ಧನಾಗಿ, ಪ್ರವಾದಿವರ್ಯರ ದೂತರನ್ನು ಕೊಂದು ಹಾಕಿದನು ಮತ್ತು ಮುಸ್ಲಿಮರ ವಿರುದ್ಧ ಯುದ್ಧ ಘೋಷಿಸಿದನು.

ಪ್ರವಾದಿ ಮುಹಮ್ಮದ್(ಸ) ಶರಜೀಲ್‌ನನ್ನು ಶಿಕ್ಷಿಸಲು 3 ಸಾವಿರ ಯೋಧರನ್ನು ಕಳುಹಿಸಿದರು. ಶರಜೀಲ್ ಬೈಝಂಟೈನ್ ಸಾಮ್ರಾಜ್ಯದ 2 ಲಕ್ಷ ಸೇನೆಯ ಬೆಂಬಲ ಪಡೆದು ಮದೀನಾದ ಮೇಲೆ ಆಕ್ರಮಣ ಮಾಡಲು ಸಿದ್ಧತೆ ನಡೆಸಿದ್ದನು.

ಮೌತಃ ಎಂಬ ಸ್ಥಳದಲ್ಲಿ ಎರಡೂ ಸೇನೆಯ ನಡುವೆ ಭೀಕರ ಕಾಳಗ ಶುರುವಾಯಿತು. ಮುಸ್ಲಿಮ್ ಸೇನೆಯು ಮೂವರು ಸೇನಾಧಿಪತಿಗಳು ಒಬ್ಬರ ನಂತರ ಮತ್ತೊಬ್ಬರಂತೆ ಹುತಾತ್ಮರಾದರು. ಕೊನೆಗೆ ಹ. ಖಾಳಿದ್ ಬಿನ್ ವಲೀದ್(ರ) ಸೇನೆಯ ಅಧಿಪತ್ಯವನ್ನು ವಹಿಸಿಕೊಂರು. ಅವರು ಯೋಜನೆವೊಂದನ್ನು ರೂಪಿಸಿ ಮುಸ್ಲಿಮ್ ಸೇನೆಯನ್ನು ರಣರಂಗದಿಂದ ಹಿಂದಕ್ಕೆ ಸರಿಸಿದರು.

ಪ್ರವಾದಿತ್ವದ 21ನೇ ವರ್ಷ:

ಕುರೈಶರು ಮುಸ್ಲಿಮರೊಂದಿಗೆ ಮಾಡಿಕೊಂಡಿದ್ದ ಹುದೈಬಿಯಾ ಒಪ್ಪಂದದ ಅಂಶಗಳ ಉಲ್ಲಂಘನೆ ಮಾಡ ತೊಡಗಿದರು. ಮಕ್ಕಃ ಪಟ್ಟಣದಲ್ಲಿ ಹಿಂಸೆ ನಿಷೇಧಿಸಲ್ಪಟ್ಟಿದೆ. ಮಕ್ಕಃ ಪಟ್ಟಣದ ವ್ಯಾಪ್ತಿಯಲ್ಲಿ ಗಿಡಮರಗಳನ್ನು ಕಡಿಯುವಂತಿಲ್ಲ. ಪ್ರಾಣಿಯ ಹತ್ಯೆಯನ್ನೂ ಮಾಡುವಂತಿಲ್ಲ. ಕುರೈಶರು ಹುದೈಬಿಯಾ ಒಪ್ಪಂದಕ್ಕೆ ವಿರುದ್ಧವಾಗಿ, ಪ್ರವಾದಿ ಮುಹಮ್ಮದ್(ಸ)ರ ಮಿತ್ರ ಪಕ್ಷಕ್ಕೆ ಸೇರಿದ್ದ ಕೆಲವರನ್ನು ಕಅಬಾ ಭವನದ ಘನತೆಯನ್ನು, ಪಾವಿತ್ರ್ಯತೆಯನ್ನು ಪರಿಗಣಿಸದೆ, ಕಅಬಾ ಭವನದ ಎದುರಿನಲ್ಲಿಯೇ ಹತ್ಯೆ ಮಾಡಿದರು. ಪ್ರವಾದಿ ಮುಹಮ್ಮದ್(ಸ) ಕುರೈಶ್‌ರಿಗೆ ರಕ್ತ ಪರಿಹಾರ ನೀಡಲು ಅಥವಾ ಹುದೈಬಿಯಾ ಒಪ್ಪಂದ ಅನೂರ್ಜಿತ ಗೊಂಡಿದೆಯೆಂದು ಘೋಷಿಸಲು ಸೂಚಿಸಿದರು. ಕುರೈಶರು ಅಹಂಕಾರದಿಂದ, ಹುದೈಬಿಯಾ ಒಪ್ಪಮದ ಅನೂರ್ಜಿತಗೊಂಡಿರುವುದಾಗಿ ಘೋಷಿಸಿದರು.

ಹುದೈಬಿಯಾ ಒಪ್ಪಂದ ಈಗ ರದ್ದಾಗಿದ್ದರಿಂದ ಕುರೈಶರು ಪುನಃ ಮದೀನಾದ ಮೇಲೆ ಆಕ್ರಮಣ ಮಾಡುವ ಭಯವಿತ್ತು. ಆದರೆ ಪ್ರವಾದಿ ಮುಹಮ್ಮದ್(ಸ) ಇದಕ್ಕೆ ಆಸ್ಪದ ನೀಡದೇ, 10,000 ಸೇನೆಯೊಂದಿಗೆ ಮಕ್ಕಃ ಪಟ್ಟಣಕ್ಕೆ ಮುತ್ತಿಗೆ ಹಾಕಿದರು.

ಕುರೈಶರು ಮುಸ್ಲಿಮರ ಆಕ್ರಮಣವನ್ನು ನಿರೀಕ್ಷಿಸಿರಲಿಲ್ಲ. ಅವರು ಯುದ್ಧಕ್ಕೆ ಸಿದ್ಧರಾಗಿಯೂ ಇರಲಿಲ್ಲ. ಆದುದರಿಂದ ಅವರು ಹೋರಾಡದೆಯೇ ಸೋಲನ್ನು ಒಪ್ಪಿಕೊಂಡರು. ಈ ಘಟನೆಯು ಪ್ರವಾದಿತ್ವದ 21ನೆಯ ವರ್ಷದಲ್ಲಿ ಜರುಗಿತು.

ಕುರೈಶರು 21 ವರ್ಷಗಳು ನಿರಂತರ ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳಿಗೆ ಹಿಂಸೆ ನೀಡಿದ್ದರು. ಅವರ ಮೇಲೆ ಕಷ್ಟ ಕಾರ್ಪಣ್ಯಗಳ ಮಳೆಗರೆದಿದ್ದರು. ಅನೇಕರ ಹತ್ಯೆಗೈದಿದ್ದರು. ವಾಸ ಸ್ಥಳವನ್ನು ತ್ಯಜಿಸುವಂತೆ ಮಾಡಿದ್ದರು. ಅನೇಕ ಬಾರಿ ಆಕ್ರಮಣ ಮಾಡಿ ಮುಸ್ಲಿಮರ ಮೂಲೋತ್ಪಾದನೆಗೆ ಯತ್ನಿಸಿದ್ದರು. ಆದರೆ ಕುರೈಶರ ಈ ಎಲ್ಲಾ ಕೃತ್ಯಗಳ ಹೊರತಾಗಿಯೂ ಪ್ರವಾದಿ ಮುಹಮ್ಮದ್(ಸ) ಕುರೈಶರನ್ನು ಕ್ಷಮಿಸಿದರು. ಯಾರ ಮೇಲೂ ಅವರು ಕ್ರಮವಹಿಸಲಿಲ್ಲ. ಪ್ರವಾದಿ ಮುಹಮ್ಮದ್(ಸ)ರ ಔದಾರ್ಯತೆಯನ್ನು ನೋಡಿ ಮಕ್ಕಃದ ಎಲ್ಲಾ ಜನರು ಇಸ್ಲಾಮ್ ಸ್ವೀಕರಿಸಿದರು.

ಮಕ್ಕಃದ ಮೇಲೆ ಆಕ್ರಮಣದ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದ್(ಸ)ರೊಂದಿಗೆ 10,000 ಯೋಧರಿದ್ದರು. ಆದರೆ ಅವರು ಯಾರ ಮೇಲೂ ಕೈ ಎತ್ತಲಿಲ್ಲ. ಅಥರ್ವವೇದದಲ್ಲಿ ಈ ಕಾರಣದಿಂದ ಅವರನ್ನು 'ಹಸು'ಗಳೆಂದು ಸಂಭೋದಿಸಲಾಗಿದೆ.

ಅಥರ್ವ ವೇದದಲ್ಲಿ ಶ್ಲೋಕವು ಹೀಗಿದೆ.

**एश इशाय मामहे शतं निष्कान् दश स्त्रजः।**
**त्रीणि शतान्यर्वतां सस्त्ररादश गोनाम॥**

ಅನುವಾದ: ಸೃಷ್ಟಿಕರ್ತನು ಮಮೇಹ್ ಋಷಿಗೆ 100 ಹಾರಗಳನ್ನು, 10 ಚಿನ್ನದ ನಾಣ್ಯಗಳನ್ನು, 300 ಕುದುರೆಗಳನ್ನು ಮತ್ತು 10,000 ಗೋವುಗಳನ್ನು ನೀಡುವನು.

ಈ ಶ್ಲೋಕದಲ್ಲಿ, 100 ಹಾರಗಳೆಂದರೆ ಅಸ್ಸುಫಃದ 100 ವ್ಯಕ್ತಿಗಳು, 10 ಚಿನ್ನದ ನಾಣ್ಯಗಳೆಂದರೆ ಅಶ್ರಮುಬಶ್ರಿರಃ (ಸ್ವರ್ಗದ ಸುವಾರ್ತೆ ನೀಡಲಾಗಿರುವ ಪ್ರವಾದಿವರ್ಯರ ಹತ್ತು ಅನುಯಾಯಿಗಳು). 300 ಕುದುರೆಗಳೆಂದರೆ ಬದ್ರ್ ಯುದ್ಧದಲ್ಲಿ ಹೋರಾಡಿದ ಯೋಧರು, 10,000 ಹಸುಗಳೆಂದರೆ ಮಕ್ಕಃದ ಮೇಲೆ ಆಕ್ರಮಣದ ಸಂದರ್ಭದಲ್ಲಿ ಪ್ರವಾದಿ(ಸ)ರ ಜೊತೆಗಿದ್ದ 10,000 ಯೋಧರು.

**त्वमेतां जनराज्ञो द्विर्दशाबन्धुना सुश्रवसोपजग्मुषः।**
**षष्टिं सहसा।**
**नवतिं नव श्रुतो नि चक्रेरा रथ्या दुष्पदावृराक ॥१॥**

ಅಥರ್ವ ವೇದದ ಎರಡನೇ ಶ್ಲೋಕದಲ್ಲಿ ಸೃಷ್ಟಿಕರ್ತನು ಪ್ರವಾದಿಯವರನ್ನು 60,099 ಶತ್ರುಗಳಿಂದ ರಕ್ಷಿಸುವನು ಎಂದು ತಿಳಿಸಲಾಗಿದೆ. ಈ 60,099 ಶತ್ರುಗಳು ಮಕ್ಕಃದ ಮೇಲೆ ಆಕ್ರಮಣದ ಸಮಯದಲ್ಲಿ ಮಕ್ಕಃದಲ್ಲಿದ್ದ 60,000 ನಿವಾಸಿಗಳು.

(ಒಣ್ಣುಚಿಟಟಚಿಜ ುಟಿ ತಿಂಡಿಟಜ ಖಿಥಿಡುಣಣಾಡಿಜ– ಪುಟ 127, ಅಥರ್ವ ವೇದ 20: 21–3)

ಮಕ್ಕಃದ ವಿಜಯದ ನಂತರ, ಮಕ್ಕಃದ ಸುತ್ತಮುತ್ತಲಿನ ಬುಡಕಟ್ಟುಗಳು ಜೊತೆಗೂಡಿ ಮುಸ್ಲಿಮರ ವಿರುದ್ಧ ಆಕ್ರಮಣ ಮಾಡಲು ಸಿದ್ಧವಾದವು. ಹುನೈನ್ ಸ್ಥಳದಲ್ಲಿ 12,000 ಶತ್ರು ಸೇನೆ ಜಮಾವಣೆಗೊಂಡಿತು. ಘೋರ ಸಂಗ್ರಾಮ ನಡೆಯಿತು. ಎರಡೂ ಪಕ್ಷದವರು ವೀರಾವೇಷದಿಂದ ಕಾದಾಡಿದರು. ಆದರೆ ಅಂತಿಮವಾಗಿ ಮುಸ್ಲಿಮ್ ಸೇನೆಯ ಕೈ ಮೇಲಾಯಿತು. ಅನೇಕ ಶತ್ರು ಸೈನಿಕರನ್ನು ಸೆರೆಹಿಡಿಯಲಾಯಿತು. ಆದರೆ ಪ್ರವಾದಿ ಮುಹಮ್ಮದ್(ಸ) ಅವರೆಲ್ಲರನ್ನು ಬಿಡುಗಡೆಗೊಳಿಸಿದರು. ಈ ಜನರೂ ಪ್ರವಾದಿ(ಸ)ರ ಆದರ್ಶ ಗುಣಗಳನ್ನು ನೋಡಿ ಇಸ್ಲಾಮ್ ಸ್ವೀಕರಿಸಿದರು.

ಈ ರೀತಿ ಅರಬ್ ಪ್ರದೇಶದಿಂದ ಇಸ್ಲಾಮ್ ವಿರೋಧವು ಕೊನೆಗೊಂಡಿತು.

ಪ್ರವಾದಿತ್ವದ 22ನೇ ವರ್ಷ:

ಪ್ರವಾದಿ ಮುಹಮ್ಮದ್(ಸ) ಮಕ್ಕಃ ಪಟ್ಟಣವನ್ನು ಜಯಿಸಿ, ಸುತ್ತಮುತ್ತಲಿನ ಪ್ರದೇಶದಲ್ಲೂ ಅಧಿಪತ್ಯವನ್ನು ಸ್ಥಾಪಿಸಿರುವುದನ್ನು ಬೈಝಂಟೈನಿನ ಸಾಮ್ರಾಟನು ಗಮನಿಸುತ್ತಿದ್ದನು. ಹೀಗೆ ಮುಂದುವರೆದರೆ ಇಸ್ಲಾಮ್ ಜಗತ್ತಿನಾದ್ಯಂತ ಅಧಿಕಾರ ಸ್ಥಾಪಿಸಬಹುದೆಂಬ ಭಯದಿಂದ ಆತನು ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಭಾರಿ ಸಿದ್ಧತೆಗಳಲ್ಲಿ ತೊಡಗಿದನು. ಪ್ರವಾದಿ ಮುಹಮ್ಮದ್(ಸ)ರಿಗೆ ಈ ವಿಷಯ ತಿಳಿಯಿತು.

ಅವರು 30,000 ಸೈನಿಕರೊಂದಿಗೆ ಒಂದು ಸಾವಿರ ಕಿ.ಮೀ. ದೂರವನ್ನು ಕ್ರಮಿಸಿ ಭೈಝಂಟೈನ್ ಸಾಮ್ರಾಜ್ಯದ ಬಾಗಿಲಿಗೇ ಬಂದರು. ಈ ಮೊದಲು ಎರಡು ಲಕ್ಷ ಸೇನೆಯನ್ನು 3000 ಮುಸ್ಲಿಮ್ ಯೋಧರು ಯಾವುದೇ ಅಳುಕಿಲ್ಲದೆ ಎದುರಿಸಿರುವುದನ್ನು ಬೈಝಂಟೀನಿಯರು ಮರೆತಿರಲಿಲ್ಲ. ಈಗ 30,000 ಯೋಧರು ಬೈಝಂಟೈನಿನ ಸರಹದ್ದಿನಲ್ಲಿದ್ದ 'ತಬೂಕ್' ಸ್ಥಳಕ್ಕೆ ಬಂದು ಬಿಡಾರ ಹೂಡಿರುವುದನ್ನು ನೋಡಿ ಅವರು ಕಕ್ಕಾ ಬಿಕ್ಕಿಯಾದರು. ಭಯ ವಿಹ್ವಲರಾಗಿ ನೆರೆಯ ಗ್ರಾಮಗಳಿಗೆ ಓಡಿ ಹೋಗಿ ಅಡಗಿ ಕುಳಿತರು. ಪ್ರವಾದಿ(ಸ) ಸುಮಾರು ಒಂದು ತಿಂಗಳು ಕಾಲ ಶತ್ರು ಸೇನೆಯನ್ನು ನಿರೀಕ್ಷಿಸುತ್ತಾ ತಬೂಕ್‌ನಲ್ಲಿ ತಂಗಿದರು. ಕೊನೆಗೆ ಮದೀನಾ ಹಿಂತಿರುಗಿದರು.

ಈ ಘಟನೆಯು ಪ್ರವಾದಿತ್ವದ 22ನೇ ವರ್ಷದಲ್ಲಿ ಜರುಗಿತು. ಈಗ ಸಂಪೂರ್ಣ ಅರಬ್ ಪ್ರದೇಶದಲ್ಲಿ ಶಾಂತಿ ನೆಲೆಸಿತು. ಅಪಾರ ಸಂಖ್ಯೆಯಲ್ಲಿ ಜನರು ಇಸ್ಲಾಮ್ ಸ್ವೀಕರಿಸಿದರು.

ಪ್ರವಾದಿತ್ವದ 23ನೇ ವರ್ಷ:

ಪ್ರವಾದಿತ್ವದ 22ನೇ ವರ್ಷದಲ್ಲಿ ಹಜ್ಜ್ ನಿರ್ವಹಣೆ ಕಡ್ಡಾಯವಾಗಿರುವುದಾಗಿ ಅಲ್ಲಾಹ್ ಆದೇಶಿಸಿದ್ದನು. ಆದರೆ ಕಾರಣಾಂತರಗಳಿಂದ ಪ್ರವಾದಿ ಮುಹಮ್ಮದ್(ಸ)ರಿಗೆ ಹಜ್ಜ್ ನಿರ್ವಹಿಸಲು ಸಾಧ್ಯವಾಗಿರಲಿಲ್ಲ. ಪ್ರವಾದಿತ್ವದ 23ನೇ ವರ್ಷದಲ್ಲಿ ತಾವು ಹಜ್ಜ್ ನಿರ್ವಹಿಸುವುದಾಗಿ ಪ್ರವಾದಿ(ಸ) ಘೋಷಿಸಿದರು. ಪ್ರವಾದಿ(ಸ)ರೊಂದಿಗೆ ಹಜ್ಜ್ ನಿರ್ವಹಿಸಲು ಹಾಗೂ ಹಜ್ಜ್‌ನ ವಿಧೀ ವಿಧಾನಗಳನ್ನು ಅವರಿಂದ ಕಲಿಯುವ ಅಭಿಲಾಷೆಯಿಂದ ಅರಬ್‌ನ ಮೂಲೆ ಮೂಲೆಗಳಿಂದ ಜನರು ಧಾವಿಸ ತೊಡಗಿದರು. ಸುಮರು ಒಂದು ಲಕ್ಷ 40 ಸಾವಿರ ಯತ್ರಾರ್ಥಿಗಳು ಹಜ್ಜ್ ನಿರ್ವಹಿಸಲು ಜಮಾವಣೆಗೊಂಡರು.

ಹಜ್ಜ್‌ನ ಸಂದರ್ಭದಲ್ಲಿ ಪ್ರವಾದಿ(ಸ) ಅರಫಾ ಮೈದಾನದಲ್ಲಿ ಮಾಡಿದ ವಿದಾಯ ಭಾಷಣ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದಾಗಿದೆ. ಈ ವಿದಾಯ ಭಾಷಣದ ಪ್ರಮುಖ ಅಂಶಗಳನ್ನು ಅಧ್ಯಾಯ 7ರಲ್ಲಿ ನೀಡಲಾಗಿದೆ.

ಮಕ್ಕಃ ಪಟ್ಟಣ ಪ್ರವಾದಿ(ಸ)ರು ಹುಟ್ಟಿ ಬೆಳೆದ ಸ್ಥಳವಾಗಿತ್ತು. ಪ್ರವಾದಿ(ಸ) ಮಕ್ಕಃ ಪಟ್ಟಣವನ್ನು ಬಹಳ ಪ್ರೀತಿಸುತ್ತಿದ್ದರು. ಮಕ್ಕಃ ಪಟ್ಟಣವನ್ನು ತ್ಯಜಿಸಿ ಮದೀನಾ ಹಿಜ್ರತ್ ಮಾಡುವ ಸಂದರ್ಭದಲ್ಲಿ, ಮಕ್ಕಃ ಪಟ್ಟಣವನ್ನು ಬಿಡುವ ದುಃಖದಿಂದ ಪ್ರವಾದಿ(ಸ)ರವರ ಕಣ್ಣಾಲಿಗಳು ತುಂಬಿ ಬಂದಿದ್ದವು.

ಪ್ರವಾದಿ(ಸ) ಹಜ್ಜ್ ಪೂರ್ಣಗೊಳಿಸಿ ಮದೀನಾ

ಹಿಂತಿರುಗಿದರು. ಹಜ್ಜ್‌ನ 75 ದಿನಗಳ ನಂತರ ಪ್ರವಾದಿ(ಸ) ಅಸ್ವಸ್ಥರಾದರು. 15 ದಿನಗಳನ್ನು ಈ ಸ್ಥಿತಿಯಲ್ಲಿಯೇ ಕಳೆದ ಪ್ರವಾದಿ(ಸ) ಜೂನ್ 8, ಕ್ರಿ.ಶ. 632ರಂದು ಇಹಲೋಕವನ್ನು ತ್ಯಜಿಸಿದರು.

ಪ್ರವಾದಿ(ಸ) 63 ವರ್ಷಗಳ ಕಾಲ ಬಾಳಿದರು. ಪ್ರವಾದಿತ್ವದ ನಂತರದ ಅವರ ಜೀವನವು ಸಂಪೂರ್ಣ ಸಂಘರ್ಷಮಯವಾಗಿತ್ತು.

ಪ್ರವಾದಿ(ಸ)ರ ಜನನದ ಮೊದಲೇ ಅವರ ತಂದೆ ತೀರಿಕೊಂಡಿದ್ದರು. 6 ವರ್ಷದ ಬಾಲ್ಯ ಅವಸ್ಥೆಯಲ್ಲಿ ಅವರ ತಾಯಿ ನಿಧನ ಹೊಂದಿದರು. 8 ವರ್ಷದ ಪ್ರಾಯದಲ್ಲಿ ಅವರ ಪ್ರೀತಿಯ ಅಜ್ಜ ನಿಧನ ಹೊಂದಿದರು. ನಂತರ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಕುರಿಗಳನ್ನು ಮೇಯಿಸುತ್ತಿದ್ದರು. ನಂತರ ಯುವಕರಾದಾಗ ವ್ಯಾಪಾರವನ್ನು ಅರಂಭಿಸಿದರು.

40ನೇ ವರ್ಷದಲ್ಲಿ ಪ್ರವಾದಿತ್ವದ ಹೊಣೆ ಅವರ ಹೆಗಲಿಗೆ ಬಂತು. ಇಡಿಯ ಅರಬ್ ಅವರ ಶತ್ರುವಾಯಿತು. ಮೊದ ಮೊದಲು ಅವರ ಮಾತುಗಳನ್ನು ಕೇಳಿ ಜನರು ಮೂದಲಿಸುತ್ತಿದ್ದರು. ಮೆಲ್ಲ ಮೆಲ್ಲನೆ ಅವರ ಮೇಲೆ ದೌರ್ಜನ್ಯ ಆರಂಭವಾಯಿತು. ಅವರನ್ನು ಮಾಂತ್ರಿಕನೆಂದು ಹುಚ್ಚನೆಂದು ಜರಿಯಲಾಯಿತು. ಅವರನ್ನು ಕಲ್ಲಿನಿಂದ ಹೊಡೆದರು. ಅವರ ಕೆಲ ಅನುಯಾಯಿಗಳನ್ನು ನಿರ್ದಯೆಯಿಂದ ಹಿಂಸಿಸಿ ಕೊಲ್ಲಲಾಯಿತು. ಕೆಲ ಅನುಯಾಯಿಗಳು ಮಕ್ಕಃ ತ್ಯಜಿಸಿ ಅಬಿಸೀನಿಯಾ ವಲಸೆ ಹೋಗಲು ನಿರ್ಬಂಧಿಸಲಾಯಿತು. ಕೊನೆಗೆ ಪ್ರವಾದಿ(ಸ)ರನ್ನು ಹತ್ಯೆಗೈಯಲು ಸಂಚು ರೂಪಿಸಲಾಯಿತು. ಅವರನ್ನೂ ಮಕ್ಕಃ ತ್ಯಜಿಸುವಂತೆ ಮಾಡಲಾಯಿತು. ಯಾವ ಪ್ರವಾದಿಯೂ ಎದುರಿನಿಂದ ಹಿಂಸೆಗೆ ತಾವು ಗುರಿಯಾಗ ಬೇಕಾಯಿತು ಎಂದು ಪ್ರವಾದಿ(ಸ) ನುಡಿದಿರುವರು. (ಮುಸ್ಲಿಮ್, ತಿರ್ಮಿದಿ)

ಪ್ರವಾದಿತ್ವದ ಹೊಣೆಗಾರಿಕೆ ನೀಡಲ್ಪಟ್ಟಾಗ ಅವರ ಬಳಿ 25,000 ದೀನಾರ್‌ಗಳಿದ್ದವು. ಈಗಿನ ಕಾಲದ 55 ಕೆ.ಜಿ. ಬಂಗಾರಕ್ಕೆ ಅದು ಸಮವಾಗಿತ್ತು. ಆದರೆ ಪ್ರವಾದಿ(ಸ) ಈ ಹಣವನ್ನು ಧರ್ಮ ಪ್ರಚಾರಕ್ಕಾಗಿ ವಿನಿಯೋಗಿಸಿದರು.

ಪ್ರವಾದಿ(ಸ) ಮದೀನಾ ಹಿಜ್ರತ್ ಮಾಡಿದ ನಂತರ, ಮದೀನಾಕ್ಕೆ ಹಿಜ್ರತ್ ಮಾಡುತ್ತಿದ್ದವರ ವಾಸ್ತವ್ಯದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಸ್ವತಃ ಕುಟುಂಬ ತಿಂಗಳುಗಟ್ಟಲೆ ಹಸಿವೆಯಿಂದ ಇರುತ್ತಿದ್ದರು. ಕೆಲವೊಮ್ಮೆ 3 ತಿಂಗಳುಗಳವರೆಗೂ ಅಡುಗೆ ಮಾಡಲಾಗಿರಲಿಲ್ಲ! ಅವರ ಕುಟುಂಬ ಖರ್ಜೂರ ಮತ್ತು ನೀರನ್ನು ಸೇವಿಸಿ ಜೀವಿಸುತ್ತಿದ್ದರು. (ಬುಖಾರಿ ಮತ್ತು ಮುಸ್ಲಿಮ್)

ಮದೀನಾ ಹಿಜ್ರತ್ ನಂತರ ಪ್ರವಾದಿ(ಸ) ಎಂದೂ ಒಂದೇ ದಿನ ಎರಡು ಹೊತ್ತಿನ ಊಟ ಮಾಡಿರಲಿಲ್ಲ ಎಂದು ವರದಿಯಾಗಿದೆ. (ಬುಖಾರಿ ಮತ್ತು ಮುಸ್ಲಿಮ್). ಮದೀನಾದಲ್ಲಿ ಅವರು ಎಂದೂ ಗೋಧಿ ಹಿಟ್ಟಿನ ರೊಟ್ಟಿ ತಿಂದಿರಲಿಲ್ಲ. ಬಾರ್ಲಿ ಹಿಟ್ಟಿನಿಂದ ಮಾಡಿದ ರೊಟ್ಟಿಯನ್ನು ಸೇವಿಸುತ್ತಿದ್ದರು. (ಬುಖಾರಿ ಮತ್ತು ಮುಸ್ಲಿಮ್)

ಅವರ ಕೋಣೆ ಮಣ್ಣಿನ ಗೋಡೆಯಿಂದ ನಿರ್ಮಿಸಲ್ಪಟ್ಟಿತ್ತು. ಪ್ರವಾದಿ(ಸ) ಗೋಣಿಚೀಲದ ಮೇಲೆ ಮಲಗುತ್ತಿದ್ದರು.

ರಾತ್ರಿ ದೀರ್ಘ ಕಾಲದವರೆಗೆ ಅವರ ನಮಾಝ್‌ನಲ್ಲಿ ನಿರತರಾಗಿರುತ್ತಿದ್ದರು. ಇದರಿಂದಾಗಿ ಅವರ ಕಾಲುಗಳು ಬಾತುಕೊಳ್ಳುತ್ತಿದ್ದವು.

ಯಾರಾದರೂ ಇಸ್ಲಾಮಿನ ಸಂದೇಶವನ್ನು ನಿರಾಕರಿಸಿದರೆ ಪ್ರವಾದಿ(ಸ)ರಿಗೆ ತೀವ್ರ ದುಃಖವಾಗುತ್ತಿತ್ತು. ಜನರ ಮನವೊಲಿಕೆ ಮಾಡಲು ಹಗಲು ರಾತ್ರಿ ಎನ್ನದೆ ಶ್ರಮ ವಹಿಸುತ್ತಿದ್ದರು. ಜನರ ನಿರಾಕರಣೆಯಿಂದ ಪ್ರವಾಸ(ಸ) ಎಷ್ಟು ದುಃಖಿತರಾಗುತ್ತಿದ್ದರೆಂದರೆ ಅಲ್ಲಾಹನು ಸವತಃ ಅವರಿಗೆ ಸಮಾಧಾನ ಹೇಳಬೇಕಾಗುತ್ತಿತ್ತು.

"ನಾವು ಈ ಕುರ್‌ಆನ್‌ನನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ." (ಕುರ್‌ಆನ್: 20:2)

"ಸಂದೇಶವಾಹಕರೇ, ಇವರು ಸತ್ಯವಿಶ್ವಾಸವನ್ನು ಸ್ವೀಕರಿಸುವುದಿಲ್ಲವೆಂಬ ವ್ಯಥೆಯಿಂದ ಪ್ರಾಯಶಃ ನೀವು ನಿಮ್ಮ ಜೀವವನ್ನೇ ಸೊರಗಿಸಿ ಕೊಳ್ಳುವಿರಿ" (ಕುರ್‌ಆನ್: 26: 3)

ಅಲ್ಲಾಹ್ ಪ್ರವಾದಿ(ಸ)ರನ್ನು ಮತ್ತು ಅವರ ಕುಟುಂಬದವರನ್ನು ಅನುಗ್ರಹಿಸಲಿ.

************

# ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಪ್ರಖ್ಯಾತ ವಿದ್ವಾಂಸರ ಅಭಿಪ್ರಾಯ

ಮಹಾ ಋಷಿ ವ್ಯಾಸರ ಭವಿಷ್ಯವಾಣಿ

ಮಹಾ ಋಷಿ ವ್ಯಾಸರು ಹಿಂದೂ ಧರ್ಮದ ಅತಿ ಶ್ರೇಷ್ಟ ವಿದ್ವಾಂಸರಾಗಿರುವರು. ಮಹಾನ್ ಗ್ರಂಥ ಮಹಾಭಾರತವನ್ನು ಅವರು ರಚಿಸಿರುವರು. ಮಹಾಭಾರತ ಯುದ್ಧದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಮಾಡುವ ಉಪದೇಶಗಳನ್ನು ಅವರು ಗೀತೆಯ ರೂಪದಲ್ಲಿ ಕ್ರೋಢೀಕರಿಸಿರುವರು. ವ್ಯಾಸರು 17 ಪುರಾಣವು ದೈವಿಕ ಗ್ರಂಥವೆಂದು ಎಲ್ಲಾ ವಿದ್ವಾಂಸರೂ ಸಹ ಮತ ವ್ಯಕ್ತ ಪಡಿಸುತ್ತಾರೆ. ವ್ಯಾಸರು ಇದನ್ನು ಕ್ರೋಢೀಕರಿಸಿದ್ದರು.

ಶ್ರೀ. ವ್ಯಾಸರು 4000 ವರ್ಷಗಳ ಹಿಂದೆ ಜೀವಿಸಿದ್ದರು. ಪ್ರವಾದಿ ಮುಹಮ್ಮದ್(ಸ) 1400 ವರ್ಷಗಳ ಹಿಂದೆ ಬಾಳಿದ್ದರು. 2600 ವರ್ಷಗಳ ಹಿಂದೆಯೇ ಶ್ರೀ. ವ್ಯಾಸರು ಹ. ಮುಹಮ್ಮದ್(ಸ)ರ ಬಗ್ಗೆ ಹಾಗೂ ಇಸ್ಲಾಮ್ ಬಗ್ಗೆ ಭವಿಷ್ಯ ಪುರಾಣದಲ್ಲಿ ಭವಿಷ್ಯವಾಣಿಯನ್ನು ನುಡಿದಿರುವರು.

ಭವಿಷ್ಯ ಪುರಾಣದಲ್ಲಿ (ಪ್ರತಿಸರ್ದ್ 3, ಅಧ್ಯಾಯ 3, ಭಾಗ 3, ಕಲಿಯುಗಿ ಇತಿಹಾಸ ಸಮುಚ್ಚಯ), ಪ್ರವಾದಿ ಮುಹಮ್ಮದ್(ಸ) ಮತ್ತು ಇಸ್ಲಾಮ್ ಕುರಿತು 27 ಶ್ಲೋಕಗಳಿವೆ. ಭವಿಷ್ಯ ಪುರಾಣದಲ್ಲಿ ನುಡಿದಿರುವ ಭವಿಷ್ಯ ವಾಣಿಯ ಸಾರಂಶ ಹೀಗಿದೆ.

* ಭಾರತದಲ್ಲಿ ಜನರು ಧಾರ್ಮಿಕ ಬೋಧನೆಗಳನ್ನು ಮರೆಯುವರು

* ಮುಹಮ್ಮದ್‌ರು ಭಾರತದಿಂದ ದೂರ ದೇಶ ಅರೇಬಿಯಾದಲ್ಲಿ (ಮರಳುಗಾಡು) ಜನಿಸುವರು.

* ಸೃಷ್ಟಿಕರ್ತನು ಅವರಿಗೆ ಪ್ರವಾದಿಯ(ಬ್ರಹ್ಮ) ಸ್ಥಾನಮಾನವನ್ನು ನೀಡುವನು. ಅವರು ಪುನಃ ಜನರಿಗೆ ಧರ್ಮದ ಬೋಧನೆಗಳನ್ನು ನೀಡುವರು.

* ಭಾರತದಲ್ಲಿ ಆರ್ಯ ಧರ್ಮವು ಪರಿಷ್ಕರಣೆಗೊಂಡು ಎಲ್ಲಾ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸುವರು.

* ಶ್ರೀ ವ್ಯಾಸರು ಮಹಾನ್ ಆಚಾರ್ಯ ಹ. ಮುಹಮ್ಮದ್(ಸ)ರ ಪಾದದಲ್ಲಿ ಆಶ್ರಯ ಪಡೆಯ ಬೇಕೆಂಬ ಅಭಿಲಾಷೆ ವ್ಯಕ್ತ ಪಡಿಸಿರುವರು.

ಭವಿಷ್ಯ ಪುರಾಣದ ಅನೇಕ ಶ್ಲೋಕಗಳು ಹ. ಮುಹಮ್ಮದ್(ಸ)ರ ಹೆಸರನ್ನು ನಿರ್ಧಿಷ್ಟವಾಗಿ ಪ್ರಸ್ತಾಪಿಸಿ ಭವಿಷ್ಯ ನುಡಿದಿವೆ. ಭವಿಷ್ಯ ಪುರಾಣದ 27 ಶ್ಲೋಕಗಳನ್ನು ಈ ಪುಸ್ತಕದ ಪುಟ ಸಂಖ್ಯೆ .........ರಲ್ಲಿ ನೀಡಿದೆ.

(ಉಲ್ಲೇಖ: ಮುಹಮ್ಮದ್ ಇಸ್ ವರ್ಲ್ಡ್ ಸ್ಕ್ರಿಪ್ಚರ್ಸ್ ಲೇಖಕರು ಎ. ಎಚ್. ವಿದ್ಯಾರ್ಥಿ ಪುಟ 35–43, ಭವಿಷ್ಯ ಪುರಾಣ ಮುದ್ರಕರು ವೆಂಕಟೇಶ್ವರ ಪ್ರೆಸ್ ಮುಂಬಯಿ)

ಮಹಾ ಕವಿ ಗೋ ಸ್ವಾಮಿ ತುಲಸೀ ದಾಸರ ಭವಿಷ್ಯವಾಣಿ

ಸಂಗ್ರಾಮ ಪುರಾಣದಲ್ಲಿಯೂ ಹ. ಮುಹಮ್ಮದ್(ಸ)ರ ಬಗ್ಗೆ ಭವಿಷ್ಯವಾಣಿಯನ್ನು ನಾವು ಕಾಣಬಹುದು.

ತುಲಸೀ ದಾಸರು ಸಂಗ್ರಾಮ ಪುರಾಣವನ್ನು ಅನುವಾದಿಸಿರುವರು. ಪಂಡಿತ ಧರ್ಮವೀರ ಉಪಾಧ್ಯಾಯರು ತಮ್ಮ ಹೆಸರಾಂತ ಪುಸ್ತಕ "ಅಂತಿಮ್ ಈಶ್ವರದೂತ್"ನಲ್ಲಿ ಈ ಶ್ಲೋಕಗಳನ್ನು ಉಲ್ಲೇಖಿಸಿರುವರು. ಹ. ಮುಹಮ್ಮದ್(ಸ)ರ ಬಗ್ಗೆ ಭವಿಷ್ಯವಾಣಿಯ ಪ್ರಸ್ತಾಪವಿರುವ ಶ್ಲೋಕಗಳು ಈ ಕೆಳ ಕಂಡಂತಿವೆ.

**यहां न पक्षपात कछु राखहुं।**
**वेद, पुराण, संत मत भाखहुं ।।**
**संवत विक्रम दोऊ अनङ्गा ।**
**महाकोक नस चतुर्पतङ्गा ।।**
**राजनीति भव प्रीति दिखावै।**
**आपन मत सबका समझावै।।**
**सुरन चतुसुदर सतचारी।**
**तिनको वंश भयो अति भारी।।**
**तब तक सुन्दर मद्दिकोया।**
**बिना महामद पार न होया।।**
**तबसे मानहु जन्तु भिखारी।**
**समरथ नाम एहि व्रतधारी।।**
**हर सुन्दर निर्माण न होई।**
**तुलसी वचन सत्य सच होई।।**

(ಸಂಗ್ರಾಮ ಪುರಾಣ, ಇಸ್ಕಾಂಡ 12, ಖಂಡ 6, ಸದನುವಾದ, ಗೋಸ್ವಾಮಿ ತುಲಸೀದಾಸ)

ತುಲಸೀದಾಸರು ಹೀಗೆ ನುಡಿದಿರುವರು.

ನಾನು ಯಾವುದೇ ತರಹದ ಪಕ್ಷಪಾತವಹಿಸದೇ, ಸಂತರ ವೇದಗಳ ಮತ್ತು ಪುರಾಣಗಳ ಮಾತುಗಳನ್ನು ಉಲ್ಲೇಖಿಸಿರುವೆನಷ್ಟೇ, ಅವರು [ಪ್ರವಾದಿ ಮುಹಮ್ಮದ್(ಸ)] ಏಳನೇಯ ವಿಕ್ರಮಿ ಶತಮಾನದಲ್ಲಿ ನಾಲ್ಕು ಸೂರ್ಯಗಳ ಪ್ರಕಾಶದೊಂದಿಗೆ ಜನಿಸುವರು. ಅವರು ಧರ್ಮವನ್ನು ಪ್ರೇಮದಿಂದ ಹರಡುವರು. ನಾಲ್ಕು ದೇವತೆಗಳು (ಖಲೀಫ) ಅವರ ಸಹಾಯಕ್ಕೆ ಇರುವರು. ಈ ನಾಲ್ಕು ದೇವತೆಗಳ ಸಹಾಯದಿಂದ ಅವರ ಅನುಯಾಯಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವುದು.

ಜಗತ್ತಿನಲ್ಲಿ ಸುಂದರವಾಣಿ(ಪವಿತ್ರ ಕುರ್‌ಆನ್) ಇರುವವರೆಗೆ, ಹ. ಮುಹಮ್ಮದ್(ಸ)ರನ್ನು ಪ್ರವಾದಿಯೆಂದು ಒಪ್ಪಿಕೊಳ್ಳುವವರೆಗೆ ಮೋಕ್ಷ ಸಿಗುವುದಿಲ್ಲ. ಜನ ಸಾಮಾನ್ಯರು, ದೀನ ದಲಿತರು, ಪಶು ಪಕ್ಷಿಗಳು ಪ್ರವಾದಿ ಮುಹಮ್ಮದ್(ಸ)ರ ಹೆಸರಿನಿಂದ ಭಗವಂತನ ಭಕ್ತರಾಗುವರು. ಹ. ಮುಹಮ್ಮದ್(ಸ)ರ ನಂತರ ಅವರಂತೆ ಮತ್ತಾರೂ ಹುಟ್ಟಲಿಕ್ಕಿಲ್ಲ. ನನ್ನ ಭವಿಷ್ಯವಾಣಿಯು ನಿಜವಾಗುವುದು ಎಂದು ತುಲಸೀ ದಾಸರು ನುಡಿದಿರುವರು.

* 'ಅಂತಿಮ್ ಈಶ್ವರ್ ದೂತ್' ಪುಸ್ತಕವು ಪ್ರಥಮ ಬಾರಿಗೆ 1927ರಲ್ಲಿ ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್ ದರ್ಯಾಗಂಜ್ ದೆಹಲಿರವರಿಂದ ಪ್ರಕಾಶಿತ ಗೊಂಡಿತ್ತು.

* 'ಹ. ಮುಹಮ್ಮದ್(ಸ) ಔರ್ ಭಾರತೀಯ ಧರ್ಮಗ್ರಂಥ' ಲೇಖಕರು ಡಾ॥ ಎಂ.ವಿ. ಶ್ರೀವಾತ್ಸವ್.

ಸಂತ ತುಕರಾಮ್‌ರ ಅಭಂಗ್ (1577–1650)

ಸಂತ ತುಕಾರಾಮ್‌ರು ಮಹಾರಾಷ್ಟ್ರದ ಶ್ರೇಷ್ಠ ಸಂತರಾಗಿದ್ದರು. ಪುಣೆಯ ಬಳಿ 'ದೆಹು' ಎಂಬ ಸ್ಥಳದಲ್ಲಿ ಜನಿಸಿದ್ದರು. ಬಡ ಜನರ ಮೇಲಿನ ಅನ್ಯಾಯ, ದೌರ್ಜನ್ಯವನ್ನು ಅವರು ಕಡುವಾಗಿ ವಿರೋಧಿಸುತ್ತಿದ್ದರು. ಅವರು ರಚಿಸಿದ "ಅಭಂಗ್" ಬಹಳ ಪ್ರಖ್ಯಾತವಾಗಿದೆ. ಅದರ ಒಂದು ಶ್ಲೋಕವನ್ನು ಪ್ರಸ್ತುತ ಪಡಿಸುತ್ತಿದ್ದೇವೆ.

**अल्ला देवे अल्ला दिलावे**

**अल्ला दारु ( दाता )।**
**अल्ला खिलावे।**
**अल्लाबिगर नहीं कोय।**
**अल्ला करे सोहि होय।।**

ಅನುವಾದ: ಸೃಷ್ಟಿಕರ್ತನು ನೀಡಿದ್ದನ್ನು ಮನುಷ್ಯನು ಇತರರಿಗೆ ನೀಡಲು ಸಾಧ್ಯವಾಗುತ್ತದೆ. ಸೃಷ್ಟಿಕರ್ತನು ಪಾಲನೆ ಪೋಷಣೆ ಮಾಡುತ್ತಾನೆ. ಆತನ ಅನುಮತಿ ಇಲ್ಲದೇ ಯಾವ ಕಾರ್ಯವೂ ಆಗುವುದಿಲ್ಲ. ಸೃಷ್ಟಿಕರ್ತನು ಏನನ್ನು ಇಚ್ಛಿಸುತ್ತಾನೋ, ಅದು ಆಗುವುದು.

**अव्वल नाम अल्ला बडा**
**लेते भूल न जाये।**
**इलाम त्याकालजमुपरताही तुंब बजाये।।१।।**

ಅನುವಾದ: ಸೃಷ್ಟಿಕರ್ತನ ಹೆಸರು ಮುಂಚೂಣಿಯಲ್ಲಿರುವುದು. ಆತನ ನಾಮವನ್ನು ಸ್ಮರಿಸಲು ಮರೆಯಬೇಡಿ. 'ತುಂಭ' ಉಪಕರಣವನ್ನು ನುಡಿಸುವಾಗ ಆತನನ್ನು ಸ್ಮರಿಸಿರಿ.

**अल्ला एक तुं**
**नबी एक तुं।**
**काटतें सिर पावों हातें**
**नहीं जीव डराये।।२।।**

ಅನುವಾದ: ಸೃಷ್ಟಿಕರ್ತನು ಏಕೈಕನು. ಆತನ ಪ್ರವಾದಿ ಅಂತಿಮ ಪ್ರವಾದಿ ಹ. ಮುಹಮ್ಮದ್(ಸ) ಅವರೂ ಏಕೈಕರೇ. ಸೃಷ್ಟಿಕರ್ತನಲ್ಲಿ ಮತ್ತು ಪ್ರವಾದಿ ಮುಹಮ್ಮದ್(ಸ)ರಲ್ಲಿ ವಿಶ್ವಾಸವಿರಿಸಿದ ಬಳಿಕ ಸತ್ಯಮಾರ್ಗದಲ್ಲಿ ನಡೆಯಲು ಯಾವುದೇ ಭಯವು ಇರುವುದಿಲ್ಲ.

**प्यार खुदाई प्यार खुदाई प्यार खुदाई।**
**प्यार खुदाई बाबा जिकिर खुदाई ।।२।।**

ಅನುವಾದ: (ಈ ಜಗತ್ತು ಸೃಷ್ಟಿಕರ್ತನ ಕುಟುಂಬವಾಗಿರುವುದು. ಆದುದರಿಂದ) ಈ ರೀತಿ ಮಾಡುವುದು ಸೃಷ್ಟಿಕರ್ತನ ಅಭಿಲಾಷೆಯಾಗಿರುವುದರಿಂದ, ನೀವು ಜನರನ್ನು ಪ್ರೀತಿಸಬೇಕು.

ಸೃಷ್ಟಿಕರ್ತನು ಮನುಷ್ಯರನ್ನು ತನ್ನ ಆರಾಧನೆ ಮಾಡಲು ಸೃಷ್ಟಿಸಿರುವನು. ಆದುದರಿಂದ ಸೃಷ್ಟಿಕರ್ತನ ನಾಮವನ್ನು ಸ್ಮರಿಸಬೇಕೆಂಬುದು ಸೃಷ್ಟಿಕರ್ತನ ಅಭಿಲಾಷೆಯಾಗಿದೆ.

**अल्ला करे सो होय**
**बाबा करतारका सिरताज।**
**जिकर करो अल्लाकी**
**बाबा सबल्यां अंदर भेस।**
**कहे तुका जो नर**
**बुझे सो हि भया दरवेस।।३।।**

ಅನುವಾದ: ಸೃಷ್ಟಿಕರ್ತನು ಯಾರಿಗಾದರೂ ಘನತೆಯನ್ನು ದಯಪಾಲಿಸಿದ್ದರೆ ಅದು ಆ ವ್ಯಕ್ತಿಯು ತಲೆಗೆ ಧರಿಸುವ ಕಿರೀಟದಂತೆ. ಆದುದರಿಂದ ಸೃಷ್ಟಿಕರ್ತನನ್ನು ಹೃದಯದ ಅಂತರಾಳದಿಂದ ಆರಾಧಿಸಬೇಕು.

ಈ ಸತ್ಯವನ್ನು ಅರಿತವನು ಜ್ಞಾನಿಯಾಗಿರುವನು.

**बाट खाना**
**अल्लाह कहना एकबारा तो ही।**
**अपना नफा देख**
**कहे तुका सो ही सखा**
**हाक अल्ला एक ।। ६।।**

ಅನುವಾದ: ಸೃಷ್ಟಿಕರ್ತನು ನಿಮಗೆ ಏನನ್ನು ನೀಡಿರುವನೋ, ಅದರಿಂದ ಬಡವರಿಗೆ ದಾನವನ್ನು ನೀಡಿ. ಸೃಷ್ಟಿಕರ್ತನನ್ನು ದಿನಕ್ಕೆ ಒಮ್ಮೆಯಾದರೂ ಸ್ಮರಿಸಿರಿ.

ನಿಮ್ಮ ಗೆಳೆಯನಾಗಿರುವ ತುಕಾರಾಮ್

ನುಡಿಯುತ್ತಿರುವನು, ಸೃಷ್ಟಿಕರ್ತನು ಏಕೈಕನಾಗಿರುವನೆಂದು ಒಪ್ಪಿಕೊಳ್ಳುವುದು (ಇಹ ಮತ್ತು ಪರಗಳೆರಡರಲ್ಲೂ) ಪ್ರಯೋಜನಕಾರಿಯಾಗುವುದು.

(ಸರ್ತ್ ಶ್ರೀ, ತುಕಾರಾಮ್ ಚಿಗಥದಿಂದ ಸಂಕ್ಷಿಪ್ತಗೊಳಿಸಿದೆ. ಸಂಪಾದಕರು: ವಿಷ್ಣು ಬುವ ಜೋಗ್ ಮಹಾರಾಜ್, ಪುಟ 892/893/ 894)

ಮಹಾಮತಿ ಪ್ರನ್ನಾತ್‌ಜಿರವರ ಬೋಧನೆಗಳು. ಹಿಂದೂ ಅನುಯಾಯಿಗಳಲ್ಲಿ ವೈಷ್ಣವಿ ಪಂಥದವರಲ್ಲಿ ಪ್ರನ್ನತಿ ಸಮುದಾಯ ಪ್ರಮುಖವಾಗಿದೆ.

ಶ್ರೀ. ಮಹಾಮತಿ ಪ್ರನ್ನಾತ್‌ಜಿರವರು ಈ ಸಮುದಾಯ ಸಂಸ್ಥಾಪಕ ನಾಯಕರಾಗಿರುವರು.

ಅವರ ಬಾಲ್ಯದ ಹೆಸರು ಮಹ್‌ರಮ್ ಠಾಕೂರ್ ಆಗಿತ್ತು. ಪ್ರನ್ನಾತ್‌ಜಿ ಗುಜರಾತಿನ ಜಾಮ್ ನಗರ ಪಟ್ಟಣದಲ್ಲಿ ಕ್ರಿ. ಶ. 1618ರಲ್ಲಿ ಜನಿಸಿದರು. ಅವರು ಏಕದೇವನ ಆರಾಧನೆಯನ್ನು ಪ್ರೋತ್ಸಾಹಿಸಿದ್ದರು. ಪ್ರವಾದಿತ್ವದಲ್ಲಿ ನಂಬಿಕೆಯನ್ನು ಅವರು ಬೆಂಬಲಿಸಿದ್ದರು ಮತ್ತು ಅದು ಸರಿ ಎಂದು ನುಡಿಯುತ್ತಿದ್ದರು.

ಪ್ರನ್ನಾತ್‌ಜಿ ನುಡಿದಿರುವರು:

**कै बड़े कहे पैग़म्बर,**
**पर एक 'महामद' पर खतम।**

ಅನುವಾದ: ಧರ್ಮಗ್ರಂಥಗಳು ಅನೇಕ ಪ್ರವಾದಿಗಳು ಶ್ರೇಷ್ಠರಾಗಿರುವರು ಎಂದು ಹೇಳುತ್ತವೆ. ಆದರೆ ಪ್ರವಾದಿಗಳ ಸರಮಾಲೆ ಹ. ಮುಹಮ್ಮದ್(ಸ)ರೊಂದಿಗೆ ಅಂತ್ಯಗೊಳ್ಳುತ್ತದೆ. ಹ. ಮುಹಮ್ಮದ್(ಸ) ಕೊನೆಯ ಪ್ರವಾದಿಯಾಗಿರುವರು.

ಪ್ರನ್ನಾತ್‌ಜಿಯವರು ಒಂದು ಕಡೆ ಈ ರೀತಿ ಹೇಳಿರುವರು:

**रसूल आवेगा तुम पर,**
**ले मेरा फुरमान।**
**आए मेरे अरस की,**
**देखी सब पहेचान।।**

ಅನುವಾದ: (ಸೃಷ್ಟಿಕರ್ತನು ಹೇಳಿರುವನು) " ನನ್ನ ಸಂದೇಶವಾಹಕ ಮುಹಮ್ಮದ್(ಸ) ನಿಮ್ಮ ಬಳಿಗೆ ನನ್ನ ಸಂದೇಶದೊಂದಿಗೆ ಬರುವರು. ಆತನು ನನ್ನ ವಿಶ್ವ ಸಿಂಹಾಸನವನ್ನು ಗುರುತಿಸಿರುವನು. (ನನ್ನ ಆದೇಶಗಳನ್ನು ಮತ್ತು ಧರ್ಮವನ್ನು ಚೆನ್ನಾಗಿ ಅರಿತಿರುವವನಾಗಿರುವನು)

(ಮಾರಿಫತ್ ಸಾಗರ್ ಪುಟ 19, ಶ್ರೀ. ಪ್ರನ್ನಾತ್ ಮಿಷನ್, ನವ ದೆಹಲಿ)

(ಹ. ಮುಹಮ್ಮದ್ ಔರ್ ಭಾರತೀಯ ಧರ್ಮಗ್ರಂಥ್–ಡಾ॥ ಎಂ. ಎ. ಶ್ರೀ. ವಾತ್ಸವ)

ಇತಿ ಅಲ್ಲೋಪನಿಷದ್‌ನ ಶ್ಲೋಕಗಳು

**आदल्ला बुक मेककम**
**अल्लबूक निखादकम ।।४।।**

**अला यज्ञन हुत हुत्वा अल्ला सूर्य चंद्र सर्व नक्षत्रा।।५।।**

**अल्लों ऋषीणां सर्व दिव्यां इन्द्रायपूर्व माया परमन्तरिक्षा।।६।।**

ಅಲ್ಲಾಹ್ ಸಂತರ ಸಂರಕ್ಷನಾಗಿರುವನು. ಆತನು ಸರ್ವಶ್ರೇಷ್ಟನು. ಅಲ್ಲಾಹ್ ಅನಾದಿಕಾಲದಿಂದಲೂ ಇರುವವನು. ಆತನು ಸಕಲ ವಸ್ತುಗಳಿಗಿಂತ ರಹಸ್ಯಮಯನು.

**अल्ल पृथिव्या अन्तक्षिं विश्वरुपम् ।।७।।**

ಅಲ್ಲಾಹ್ (ಆತನ ಶಕ್ತಿಯನ್ನು) ನನ್ನು ಭೂಮಿಯಲ್ಲಿ ಆಕಾಶದಲ್ಲಿ, ಸೂರ್ಯ, ನಕ್ಷತ್ರಗಳಲ್ಲಿ ಕಾಣಬಹುದು.

**इल्लांकबर इल्लांकबर इल्लां इल्लल्लेति इल्लल्ला ।।८।।**

ಅಲ್ಲಾಹನು ಶ್ರೇಷ್ಟನು, ಅಲ್ಲಾಹನು ಶ್ರೇಷ್ಟನು. ಆತನಿಗೆ ಸರಿಸಮಾನರು ಯಾರೂ ಇಲ್ಲ.

**ओम अल्ला इल्लला अनदि।**

ಓಂನ ಅರ್ಥ ಅಲ್ಲಾಹ್. ಆತನ ಆದಿ ಮತ್ತು ಅಂತ್ಯವನ್ನು ಅರ್ಥೈಸಲು ಸಾಧ್ಯವಿಲ್ಲ. ಕೆಡುಕುಗಳಿಂದ ಸಂರಕ್ಷಿಸುವಂತೆ ಅಲ್ಲಾಹನಲ್ಲಿ ಬೇಡಿಕೊಳ್ಳಬೇಕು.

**दे स्वरुपाय अथर्वण श्यामा हुह्री जनान पशून सिद्धान।**
**जलवरान् अदृश्टं कुरु कुरु फट।**

ಓ ಅಲ್ಲಾಹ್! ಕೆಡುಕುಗಳನ್ನು, ಪಾಪಗಳನ್ನು

ಮತ್ತು ಜನರನ್ನು ದಾರಿ ತಪ್ಪಿಸುವವರನ್ನು ನಾಶಗೊಳಿಸು. ನೀರಿನಲ್ಲಿರುವ ಸೂಕ್ಷ್ಮಾಣುಗಳಿಂದ ನಮ್ಮನ್ನು ರಕ್ಷಿಸು.

**असुरसंहारिणी हुं ही अल्लो रसूल महमदरकबरस्य अल्लो।**

ಅಲ್ಲಾಹ್ ಕೆಡುಕಿನ ಶಕ್ತಿಯನ್ನು ನಾಶಗೊಳಿಸುವವನಾಗಿರುವನು ಮತ್ತು ಮುಹಮ್ಮದ್(ಸ), ಆತನ ಪ್ರವಾದಿಯಾಗಿರುವರು.

**अल्लाम इल्लल्लेति इल्लल्ला।**

ಅಲ್ಲಾಹ್, ಅಲ್ಲಾಹನಾಗಿರುವನು. ಆತನಿಗೆ ಸರಿಸಮಾನರು ಯಾರೂ ಇಲ್ಲ. (ಅಲ್ಲೋಪನಿಷದ್ 4–10)

(ಹ. ಮುಹಮ್ಮದ್(ಸ) ಇನ್ ಭಾರತೀಯ ಧರ್ಮಗ್ರಂಥ್– ಡಾ॥ ಎಂ.ಎ.ಶ್ರೀ ವಾತ್ಸವ ಪುಟ ಸಂಖ್ಯೆ 30)

ಸಂತ ತುಕ್‌ಡೋಜಿ ಮಹಾರಾಜ್: ಸಂತ ತುಕ್ಡೋಜಿ ಮಹಾರಾಜರವರು (1909–1968) ಮಹಾರಾಷ್ಟ್ರದ 'ಯವಲಿ' ಎಂಬ ಸ್ಥಳದಲ್ಲಿ ಜನಿಸಿದ್ದರು. ಅವರು ಪರ್‌ಖೇಡ ಗ್ರಾಮದ ಅಡಕೋಜಿ ಮಹಾರಾಜರವರಿಂದ ಧಾರ್ಮಿಕ ಶಿಕ್ಷಣವನ್ನು ಪಡೆದಿದ್ದರು. ಅವರು ಶ್ರೇಷ್ಠ ಧಾರ್ಮಿಕ ಸಂತರಾಗಿದ್ದರು. ಅವರು ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ 3000ಕ್ಕೂ ಹೆಚ್ಚಿನ ಭಜನೆಗಳನ್ನು ರಚಿಸಿರುವರು. ಡಾ॥ ಬಾಬು ರಾಜೇಂದ್ರ ಪ್ರಸಾದ್ ಆಗಿನ ರಾಷ್ಟ್ರಾಧ್ಯಕ್ಷರು ಅವರನ್ನು "ರಾಷ್ಟ್ರದ ಸಂತ' ಎಂಬ ಬಿರುದಿನಿಂದ ಸನ್ಮಾನಿಸಿರುವರು.

ಸಂತ ತುಕ್‌ಡೋಜಿಯವರು ರಚಿಸಿರುವ ಒಂದು ಮರಾಠಿ ಪದ್ಯವು ಹೀಗಿದೆ.

**मुहम्मदाने केली प्रार्थना।**
**विखुरला इस्लाम कराया शहाणा।।**

ಪ್ರವಾದಿ ಮುಹಮ್ಮದ್(ಸ)ರ ಪರಿಶ್ರಮದ ಕಾರಣ ಇಸ್ಲಾಮ್ ಜಗತ್ತಿನಾದ್ಯಂತ ಹರಡಿತು ಮತ್ತು ಜನರಿಗೆ ಅಂಧಕಾರದಿಂದ ಹೊರ ಬರಲು ಸಾಧ್ಯವಾಯಿತು

**संघटित केले त्याने स्वजना**
**तया काळी।।९०।।**
**लोक प्रतिमापूजक नसावे।**
**त्यांनी एका ईश्वरासि प्रार्थावे।।**

ಪ್ರವಾದಿ ಮುಹಮ್ಮದ್(ಸ), "ಮೂರ್ತಿ ಪೂಜೆ ಮಾಡಬಾರದು ಮತ್ತು ಏಕದೇವನ ಉಪಾಸನೆಯನ್ನು ಮಾಡಬೇಕು" ಎಂಬ ಸಂದೇಶದ ಬುನಾದಿಯ ಮೇಲೆ ಜನರನ್ನು ಒಗ್ಗೂಡಿಸಿದರು.

**हा मुहम्मदांचा उपदेश।**
**नव्हे एकाच देशासाठी।।९।।**


ಪ್ರವಾದಿ ಮುಹಮ್ಮದ್(ಸ)ರ ಸಂದೇಶವು ಕೇವಲ ಅರಬರಿಗಾಗಿ ಮಾತ್ರವಿರದೇ, ಸಕಲ ಜನರಿಗಾಗಿ ಇದೆ.

(ರಾಷ್ಟ್ರ ಸಂತ್ ತುಕ್‌ಡೋಜಿ ಮಹಾರಾಜ್ ವಿರಚಿತ್ ಗ್ರಾಮ್ ಗೀತ: ಅಧ್ಯಾಯ ಸಂಖ್ಯೆ 27 ಪುಟ 294, ಅಧ್ಯಾಯ ಸಂಖ್ಯೆ 28 ಪುಟ 297)

ಬೈಬಲ್‌ನಲ್ಲಿ ಹ. ಮುಹಮ್ಮದ್(ಸ)ರ ವಿವರಣೆ:

ಹ. ಮುಹಮ್ಮದ್(ಸ) ಕೇವಲ ಮುಸ್ಲಿಮರ ಮುಕ್ತಿಗಾಗಿ ಮತ್ತು ಅರಬರಲ್ಲಿ ಧರ್ಮಪ್ರಚಾರಕ್ಕಾಗಿ ಬಂದಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಸೃಷ್ಟಿಕರ್ತನು ಅವರನ್ನು ಇಡೀ ಜಗತ್ತಿಗೆ ಪ್ರವಾದಿಯಾಗಿ ಕಳುಹಿಸಿದ್ದನು.

ಬರ್ನಾಬಸ್ ಬೈಬಲ್‌ನಲ್ಲಿ ಏಸು ಕ್ರಿಸ್ತರ ಇದೇ ಮಾತನ್ನು ಉಲ್ಲೇಖಿಸಲಾಗಿದೆ.




ಬರ್ನಾಬಾಸ್ ಬೈಬಲ್: ಇಂದು ಜಗತ್ತಿನಲ್ಲಿ ಅನೇಕ ಬೈಬಲ್‌ಗಳಿವೆ. ಆರಂಭಿಕ ಕ್ರೈಸ್ತ ಧರ್ಮ ಗ್ರಂಥಗಳನ್ನು ಹಳೆಯ ಒಡಂಬಡಿಕೆ (ಔಟಜ ಖಿಜ ಣಚಿಟಜಟಿಣ) ಎನ್ನುತ್ತಾರೆ. ಹಳೆಯ ಒಡಂಬಡಿಕೆ ತೌರತ್ ಮತ್ತು ಝುಬೂರ್‌ಅನ್ನು ಒಳಗೊಂಡಿದೆ. ಸೃಷ್ಟಿಕರ್ತನು ಇವುಗಳನ್ನು ಹ. ಮೂಸ(ಅ) ಮತ್ತು ಹ. ದಾವೂದ್(ಅ)ರ ಮೇಲೆ ಅನುಕ್ರಮವಾಗಿ ಅವತೀರ್ಣಗೊಳಿಸಿದ್ದನು. ಯೇಸುಕ್ರಿಸ್ತರ ಜನನದ ಮೊದಲು ಈ ಗ್ರಂಥಗಳು ಅವತೀರ್ಣಗೊಂಡಿದ್ದವು. ಆದುದರಿಂದ ಈ ಗ್ರಂಥಗಳಲ್ಲಿ ಯೇಸು ಕ್ರಿಸ್ತರ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ.

ಯೇಸುಕ್ರಿಸ್ತರ ಸ್ವರ್ಗಕ್ಕೆ ಆರೋಹಣದ ಎಪ್ಪತ್ತು ಅಥವಾ ನೂರು ವರ್ಷಗಳ ನಂತರ ಸೇಂಟ್ ಮಾರ್ಕ್, ಸೇಂಟ್ ಮ್ಯಾಥ್ಯೂ, ಸೇಂಟ್ ಲೂಕ್ ಮತ್ತು ಸೇಂಟ್ ಜಾನ್, ಅವರ ಜೀವನ ಚರಿತ್ರೆಯನ್ನು ಬರೆದರು. ಇದಕ್ಕೆ ಬೈಬಲ್ ಎನ್ನುತ್ತಾರೆ. ಈ ಬೈಬಲ್‌ಗಳಿಗೆ, ಸಂಬಂಧಿಸಿದ ಲೇಖಕರ ಹೆಸರನ್ನೇ ಇಡಲಾಗಿದೆ. ಈ ನಾಲ್ಕು ಬೈಬಲ್‌ಗಳನ್ನು ಒಟ್ಟುಗೂಡಿಸಿ ಹೊಸ ಒಡಂಬಡಿಕೆ ಎನ್ನುತ್ತಾರೆ.

ಮೇಲಿನ ನಾಲ್ಕು ಬೈಬಲ್‌ಗಳಲ್ಲಿ ಯೇಸುಕ್ರಿಸ್ತರನ್ನು ಸೃಷ್ಟಿಕರ್ತನ ಪುತ್ರನೆಂದು ಕರೆಯಲಾಗಿದೆ. ಯೇಸುಕ್ರಿಸ್ತರ ಅನುಯಾಯಿಯಾಗಿದ್ದ ಬರ್ನಾಬಾಸ್‌ರವರು ಐದನೇಯ ಬೈಬಲ್‌ಅನ್ನು ರಚಿಸಿದ್ದಾರೆ. ಈ ಬೈಬಲ್‌ನಲ್ಲಿ ಸೃಷ್ಟಿಕರ್ತನು ಏಕೈಕನಾಗಿರುವನೆಂದು ಮತ್ತು ಯೇಸುಕ್ರಿಸ್ತರನ್ನು ಪ್ರವಾದಿಯೆಂದು ಅಭಿಸಂಭೋದಿಸಲಾಗಿದೆ.

ಬರ್ನಾಬಾಸ್ ಬೈಬಲ್‌ನಲ್ಲಿರುವ ವಿಷಯಗಳು ಕ್ರೈಸ್ತ ಧರ್ಮದ ಬೋಧನೆಗಳಿಗೆ ತದ್ವಿರುದ್ಧವಾಗಿರುವ ಪ್ರಯುಕ್ತ ಕ್ರಿ.ಶ. 367ರಲ್ಲಿ ಪೋಪ್ ಚಿಣುಚಿಟಚಿ,ುಝ, ಕ್ರಿ. ಶ.382ರಲ್ಲಿ ಪೋಪ್ ಆಚಿಟಚುಞ ಮತ್ತು ಕ್ರಿ.ಶ.495ರಲ್ಲಿ ಪೋಪ್ ಉಜಟಚುಜಝ ಈ ಬೈಬಲ್ ಧರ್ಮಬಾಹಿರವಾಗಿರುವುದೆಂದು ಘೋಷಿಸಿ ಅದನ್ನು ನಿಷೇಧಿಸಿದರು. ಈ ಬೈಬಲ್‌ಅನ್ನು ಲೈಬ್ರರಿಗಳಲ್ಲಿ ಮತ್ತು ಮನೆಯಲ್ಲಿ ಇಡುವುದನ್ನು ಅಪರಾಧವೆಂದು ಸಾರಲಾಯಿತು.

ಆದುದರಿಂದ 1700 ವರ್ಷಗಳವರೆಗೆ ಸಾರ್ವಜನಿಕರಿಂದ ಬಚ್ಚಿಡಲಾಗಿತ್ತು. ಕ್ರಿ.ಶ. 1709ರಲ್ಲಿ ಅಮ್‌ಸ್ಟರ್ ಡ್ಯಾಂ (ಂಝಣಜಡಿಜಚಿಟ)ನ ಲೈಬ್ರರಿಯಲ್ಲಿ ಸ್ಪೇನ್ ಭಾಷೆಯಲ್ಲಿ ಈ ಬೈಬಲ್‌ನ ಪ್ರತಿ ದೊರಕಿತು. 18ನೇ ಶತಮಾನದ ಆರಂಭದಲ್ಲಿ ಸ್ಪೇನ್ ದೇಶದ ಖಿಜಟಥಿ ಎಂಬ ಸ್ಥಳದಲ್ಲಿ ಆಡಿ. ಒಟಿುಟಜಟಚಿಟಿರವರಿಗೆ ಸ್ಪೇನ್ ಭಾಷೆಯಲ್ಲಿ ಈ ಬೈಬಲ್‌ನ ಮತ್ತೊಂದು ಪ್ರತಿ ದೊರಕಿತು. ಇದರ ನಂತರ, ಬಾರ್ನಾಬಾಸ್ ಬೈಬಲ್‌ನಲ್ಲಿ ಪ್ರವಾದಿ ಮುಹಮ್ಮದ್(ಸ)ರ ಆಗಮನದ ಬಗ್ಗೆ ಭವಿಷ್ಯವಾಣಿ ನುಡಿಯಲಾಗಿದೆ.

ಬರ್ನಾಬಸ್ ಬೈಬಲ್‌ಅನ್ನು Lousdale ಮತ್ತು Laura ಇಂಗ್ಲೀಷ್ ಭಾಷೆಗೆ ಅನುವಾದಿಸಿದ್ದು, ಇಂಗ್ಲೀಷ್ ಅನುವಾದದಿಂದ ಈ ಕೆಳಗೆ ನೀಡಿರುವ ಉಲ್ಲೇಖಗಳನ್ನು ಉದ್ಧರಿಸಲಾಗಿದೆ.

ಬರ್ನಾಬಾಸ್ ಬೈಬಲ್‌ನ 12ನೇ ಅಧ್ಯಾಯ:

ಯೇಸುಕ್ರಿಸ್ತರು ನುಡಿದಿರುವರು: " ನಾವು

ಸೃಷ್ಟಿಕರ್ತನ ಪವಿತ್ರ ನಾಮವನ್ನು ಪ್ರಶಂಸಿಸುತ್ತೇವೆ ಆತನು ಎಲ್ಲಾ ಪ್ರವಾದಿಗಳ ನಾಯಕನನ್ನು [ಹ. ಮುಹಮ್ಮದ್(ಸ)] ಎಲ್ಲಾ ಸೃಷ್ಟಿಗಳನ್ನು ಸೃಷ್ಟಿಸುವ ಮೊದಲು ಸೃಷ್ಟಿ ಸಕಲ ಮಾನವ ಕುಲದ ಮುಕ್ತಿಗಾಗಿ ಕಳುಹಿಸಿ ಕೊಟ್ಟನು.

ಬರ್ನಾಬಾಸ್ ಬೈಬಲ್‌ನ 39ನೇ ಅಧ್ಯಾಯ:

ಸೃಷ್ಟಿಕರ್ತನು ಹ. ಆದಮ್(ಅ)ರ ದೇಹದಲ್ಲಿ ಆತ್ಮವನ್ನು ತುಂಬಿದಾಗ ದೇವಚರರು ನುಡಿದರು ' ಓ ಸೃಷ್ಟಿಕರ್ತನೇ ನಿನ್ನ ಪವಿತ್ರ ನಾಮವು' ಉನ್ನತವಾಗಿದೆ.

ಆದಮ್(ಅ) ಎದ್ದು ನಿಂತು ನೋಡಿದಾಗ, ಸ್ವರ್ಗದಲ್ಲಿ ಪ್ರಕಾಶಿಸುತ್ತಿರುವ ಅಕ್ಷರಗಳಲ್ಲಿ ಹೀಗೆ ಬರೆದಿರುವುದನ್ನು ಕಂಡರು "ಅಲ್ಲಾಹನು ಏಕೈಕನಾಗಿರುವನು ಮತ್ತು ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವವರು"

ಆದಮ್(ಅ) ಅಲ್ಲಾಹನನ್ನು ಪ್ರಶ್ನಿಸಿದರು: "ನನ್ನ ಪ್ರಭೂ ಈ ಬರವಣಿಗೆಯ ಅರ್ಥವೇನು? ನೀನು ನನಗಿಂತ ಮೊದಲು ಓರ್ವ ಮನುಷ್ಯನನ್ನು ಸೃಷ್ಟಿಸಿರುವೆಯಾ? ಅಲ್ಲಾಹ್ ಉತ್ತರಿಸಿದನು. "ಓ ಆದಮ್, ನಿನ್ನನ್ನು ಮೊಟ್ಟ ಮೊದಲು ಸೃಷ್ಟಿಸಿರುವೆನು. ನೀನು ಕಂಡಿರುವ ಹೆಸರು ನಿನ್ನ ಪುತ್ರನ ಹೆಸರಾಗಿದೆ. ಸ್ವಲ್ಪ ಕಾಲದ ನಂತರ ಭೂಮಿಯ ಮೇಲೆ ಆತನು ಆಗಮಿಸಲಿರುವನು. ಅತನು ನನ್ನ ಪ್ರವಾದಿಯಾಗಿರುವನು. ಈ ವಿಶ್ವವನ್ನು ನಾನು ಆತನಿಗಾಗಿ ಸೃಷ್ಟಿಸಿರುವೆನು. ಆತನು ಆಗಮಿಸಿ ಲೋಕದ ಅಂಧಕಾರವನ್ನು ದೂರೀಕರಿಸುವನು. ನಾನು ಈ ವಿಶ್ವದ ಸೃಷ್ಟಿಯ 60,000 ವರ್ಷಗಳ ಮೊದಲು ಆತನ ಆತ್ಮವನ್ನು ಸೃಷ್ಟಿಸಿ ನನ್ನ ದಿವ್ಯ ಖಜಾನೆಯಲ್ಲಿ ಇಟ್ಟಿದ್ದೆನು.

ಬರ್ನಾಬಾಸ್ ಬೈಬಲ್‌ನ 44ನೇ ಅಧ್ಯಾಯ:

ಯೇಸು ಕ್ರಿಸ್ತರು ನುಡಿದಿರುವರು. ನಾನು ಹೇಳುತ್ತಿರುವೆನು ಈಪ್ರವಾದಿ(ಮುಹಮ್ಮದ್(ಸ)) ಸೃಷ್ಟಿಕರ್ತನ ಉಜ್ವಲ ಜ್ಯೋತಿಯಾಗಿರುವನು. ಆತನು ಸಕಲ ಸೃಷ್ಟಿಗಳಿಗೆ ಮುಕ್ತಿಯನ್ನು ನೀಡುವನು, ಏಕೆಂದರೆ ಇತರ ಸೃಷ್ಟಿಗಳಿಗೆ ಹೋಲಿಸಿದರೆ ಅಲ್ಲಾಹನು ಆತನಿಗೆ ಮೂರು ಪಟ್ಟು ಹೆಚ್ಚಿನ ಬುದ್ಧಿ ಶಕ್ತಿ, ಅಧಿಕಾರ, ನ್ಯಾಯ, ಸಹನೆ ಮತ್ತು ಘನತೆಯನ್ನು ನೀಡಿರುವನು.

ಆತನು ಜನ್ಮ ತಾಳುವ ದಿನವು ಮಂಗಳಮಯವಾಗಿರುವುದು. ನನ್ನನ್ನು ನಂಬಿರಿ. ಪ್ರತಿಯೋರ್ವ ಪ್ರವಾದಿ ಅವರನ್ನು ಕಾಣುವಂತೆ, ನಾನೂ ಈ ಪ್ರವಾದಿಯನ್ನು ಕಂಡಿರುವೆನು ಮತ್ತು ಗೌರವವನ್ನು ಸಲ್ಲಿಸಿರುವೆನು. ಸೃಷ್ಟಿಕರ್ತನು ಈ ಪ್ರವಾದಿಯ ಆತ್ಮದಿಂದ ಎಲ್ಲಾ ಪ್ರವಾದಿಗಳಿಗೂ ಪ್ರವಾದಿತ್ವ ನೀಡಿರುವನು. ನಾನು ಆ ಪ್ರವಾದಿಯನ್ನು ಕಂಡಾಗ, ನನ್ನ ಆತ್ಮವು ಸಂತೃಪ್ತವಾಯಿತು ಮತ್ತು ಈ ರೀತಿ ನುಡಿಯಿತು. " ಓ ಮುಹಮ್ಮದ್(ಸ) ಅಲ್ಲಾಹ್ ನಿಮ್ಮೊಂದಿಗೆ ಸಂತೃಪ್ತನಾಗಲಿ. ನಿಮ್ಮ ಚಪ್ಪಲಿ ಸರಿ ಪಡಿಸುವ ಅರ್ಹತೆಯನ್ನು ಸೃಷ್ಟಿಕರ್ತನು ನನಗೆ ನೀಡಲಿ. ಈ ರೀತಿ ನನಗೂ ಶ್ರೇಷ್ಟತೆ ದೊರೆಯುವುದು ಮತ್ತು ನಾನೂ ಸೃಷ್ಟಿಕರ್ತನ ಆಪ್ತರಲ್ಲಾಗುವೆನು"

ಇದನ್ನು ನುಡಿದು ಯೇಸುಕ್ರಿಸ್ತರು ಸೃಷ್ಟಿಕರ್ತನ ಅನುಗ್ರಹವನ್ನು ಬೇಡಿದರು.

ಬರ್ನಾಬಾಸ್ ಬೈಬಲ್‌ನ 97ನೇ ಅಧ್ಯಾಯ:

ಆ ಸಮಯದಲ್ಲಿ ಪುರೋಹಿತರು ಕೇಳಿದರು " ಆ ಪ್ರವಾದಿಯ ಹೆಸರು ಏನಾಗಿರುವುದು?

ಮತ್ತು ಆತನ ಆಗಮನದ ಚಿಹ್ನೆಗಳೇನು?

ಯೇಸುಕ್ರಿಸ್ತರು ನುಡಿದರು " ಆ ಪ್ರವಾದಿಯ ಹೆಸರು 'ಪ್ರಶಂಸಿಸಲ್ಪಟ್ಟ' ಎಂಬುದಾಗಿರುವುದು (ಸಂಸ್ಕೃತದಲ್ಲಿ ಇದನ್ನು ನರಶನ್ಸನೆಂದು ಹಾಗೂ ಅರಬಿ ಭಾಷೆಯಲ್ಲಿ ಮುಹಮ್ಮದ್ ಎನ್ನುತ್ತಾರೆ) ಸೃಷ್ಟಿಕರ್ತನೇ ಆ ಪ್ರವಾದಿಗೆ ಈ ಹೆಸರನ್ನು ಇಟ್ಟಿರುವನು".

ಹ. ಮುಹಮ್ಮದ್(ಸ)ರನ್ನು ಸೃಷ್ಟಿಸಿದ ಬಳಿಕ ಸೃಷ್ಟಿಕರ್ತನು ನುಡಿದನು: " ಮುಹಮ್ಮದರೇ, ತಾಳ್ಮೆ ವಹಿಸಿರಿ ನಾನು ಭೂಲೋಕವನ್ನು, ಆಕಾಶಗಳನ್ನು, ಇತರ ಸಕಲ ವಸ್ತುಗಳನ್ನು ನಿಮಗಾಗಿ ಸೃಷ್ಟಿಸಿರುವೆನು ಯಾರು ನಿಮ್ಮನ್ನು ಅನುಸರಿಸುವರೋ ಅವರು ಯಶಸ್ವಿಯಾಗುವರು ಮತ್ತು ಯಾರು ನಿರಾಕರಿಸುವರೋ ಅವರು ನಾಶ ಹೊಂದುವರು. ನಾನು ನಿನ್ನನ್ನು ಭೂಮಿಗೆ ಕಳುಹಿಸುವಾಗ ಎಲ್ಲಾ ಮನುಷ್ಯರಿಗೂ ಮುಕ್ತಿ ಪಡೆಯಲು ಸಹಾಯಕನಾಗಿ ಕಳುಹಿಸುವೆನು ನಿನ್ನ ಬೋಧನೆಗಳು ಎಷ್ಟು ಸತ್ಯವಾಗಿರುವವೆಂದರೆ ಭೂಮಿ ಮತ್ತು ಆಕಾಶಗಳು ತಮ್ಮ ಸ್ಥಾನದಿಂದ ಸ್ಥಾನ ಪಲ್ಲಟವಾಗ ಬಹುದು ಆದರೆ ನಿನ್ನ ಬೋಧನೆಗಳು ಮಾತ್ರ ಅಮರವಾಗಿರುವವು". ಮುಹಮ್ಮದ್ ಆ ಪ್ರವಾದಿಯ ಹೆಸರಾಗಿರುವುದು.

ಆ ಸಮಯದಲ್ಲಿ ಸಭೆಯಲ್ಲಿ ಯೇಸುಕ್ರಿಸ್ತರೊಂದಿಗೆ ಇದ್ದ ಜನರು ನುಡಿದರು:

'ಓ ಸೃಷ್ಟಿಕರ್ತನೇ , ನಿನ್ನ ಪ್ರವಾದಿಯನ್ನು ನಮ್ಮ ಬಳಿಗೆ ಕಳುಹಿಸು. ಓ ಮುಹಮ್ಮದ್(ಸ) ಜಗತ್ತಿನ ಮುಕ್ತಿಗಾಗಿ ಬೇಗನೇ ಬನ್ನಿ'. (ಬರ್ನಾಬಾಸ್ ಬೈಬಲ್ ಅಧ್ಯಾಯ 97/8)

(ಬರ್ನಾಬಾಸ್ ಬೈಬಲ್‌ನಲ್ಲಿ ಪ್ರವಾದಿ ಮುಹಮ್ಮದ್(ಸ)ರ ಬಗ್ಗೆ ಅನೇಕ ಪ್ರಶಂಸೆಗಳು ಮತ್ತು ಭವಿಷ್ಯವಾಣಿಗಳಿವೆ. ಆದರೆ ಇಲ್ಲಿ ಕೆಲವೇ ಉದ್ಧರಣೆಗಳನ್ನು ಕೊಡಲಾಗಿದೆ).

ಸಾರಾಂಶ: ಮಹಾಭಾರತವನ್ನು 17 ಪುರಾಣಗಳನ್ನು ರಚಿಸಿದ ಮಹಾಋಷಿ ಶ್ರೀ. ವೇದವ್ಯಾಸರು ಮತ್ತು ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಧರ್ಮಿಯರನ್ನು ಹೊಂದಿರುವ ಯೇಸುಕ್ರಿಸ್ತರು, ಇತರ ಅನೇಕ ಪ್ರವಾದಿಗಳು, ಸಂತರು ಪ್ರವಾದಿ ಮುಹಮ್ಮದ್(ಸ)ರ ಅನುಯಾಯಿಯಾಗಲು ತವಕಿಸಿದ್ದರು. ಆದರೆ ಇವರೆಲ್ಲರೂ ಹ. ಮುಹಮ್ಮದ್(ಸ)ರ ಕಾಲದ ಮೊದಲು ಜನಿಸಿದ್ದರಿಂದ ಅವರ ಆಸೆ ಈಡೇರಲಿಲ್ಲ. ಆದರೆ ಅಲ್ಲಾಹನ ಅನುಗ್ರಹದಿಂದಾಗಿ ನಾವು ಹ. ಮುಹಮ್ಮದ್(ಸ)ರ ಸಮುದಾಯದ ಭಾಗವಾಗಿದ್ದೇವೆ. ಆದರೆ ನಾವು ಹ. ಮುಹಮ್ಮದ್(ಸ)ರನ್ನು ಗುರುತಿಸದೇ, ಅವರ ಬೋಧನೆಗಳನ್ನು ಅನುಸರಿಸದಿದ್ದಲ್ಲಿ ನಮಗಿಂತ ದುರದೃಷ್ಟಶಾಲಿಗಳು ಯಾರೂ ಇರಲಿಕ್ಕಿಲ್ಲ!

ಪ್ರಖ್ಯಾತ ದಾರ್ಶನಿಕರು, ಚಿಂತಕರು, ವಿದ್ವಾಂಸರು ಇಸ್ಲಾಮಿನ ಬಗ್ಗೆ ಹಾಗೂ ಹ. ಮುಹಮ್ಮದ್(ಸ)ರ ಬಗ್ಗೆ ನುಡಿದಿರುವ ಮಾತುಗಳನ್ನು ಬರೆಯ ಹೊರಟರೆ ಒಂದು ಬೃಹತ್ ಗ್ರಂಥವೇ ಬೇಕಾಗುತ್ತದೆ. ಇತರ ಮುಸ್ಲಿಮೇತರ ವಿದ್ವಾಂಸರ ಹೇಳಿಕೆಗಂನ್ನು ವೆಬ್ ಸೈಟ್ ತಿತಿತಿ. ಜಿಡಿಜಿಜ ಜಜಣಾಛಿಚಿಣುಆಟಿ. ುಟಿನಲ್ಲಿ ನೀಡಿದೆ. ಉಚಿತವಾಗಿ ಇದನ್ನೂ ಡೌನ್‌ಲೋಡ್ ಮಾಡಿಕೊಳ್ಳಬಹುದು.

1) ಸಂತ್, ಮಹಾತ್ಮ್, ವಿಚಾರವಂತ್ ಔರ್ ಇಸ್ಲಾಮ್, ಸಂದೇಶ್ ಪ್ರಕಾಶನ್, ಪುಣೆ 411005

2) ಪೈಗಂಬರೆ ಇಸ್ಲಾಮ್ ಗೈರ್ ಮುಸ್ಲಿಮೊಂಕಿ ನಝುರ್ ಮೇ (ಫರೀದ್ ಬುಕ್ ಡಿಪೋ, ನವ ದೆಹಲಿ)

3. ಈ ಅಧ್ಯಾಯವನ್ನು ಅಥರ್ವ ವೇದದ ಪ್ರಾರ್ಥನಾ ಶ್ಲೋಕದಿಂದ ನಾವು ಮುಕ್ತಾಯಗೊಳ್ಳುತ್ತೇವೆ

**इन्द्र क्रतुं न आ भर पिता पुत्रेभ्यो यथा।**
**शिक्षाणो अस्मिन् पुरुहूत यामनि जीवा ज्योतिर शीमहि।** (अथर्ववेद- १८:३:६७)

ಅನುವಾದ: ಸೃಷ್ಟಿಕರ್ತನು ಸತ್ಯ ಪಥದಲ್ಲಿ ನಡೆಯುವಂತೆ ಅನುಗ್ರಹಿಸಲಿ. ನಾವು ಜೀವಂತವಿರುವಾಗ ಸತ್ಯದ ಪ್ರಕಾಶವು ನಮಗೆ ದೊರಕಲಿ.

************

# ಮುಹಮ್ಮದ್(ಸ)ರ ಗುಣ ನಡತೆ

ಹ. ಆಯಿಶಾ(ರ)ರಿಗೆ ಹ. ಮುಹಮ್ಮದ್(ಸ)ರ ನಡತೆ ಹೇಗಿತ್ತು? ಎಂದು ವ್ಯಕ್ತಿಯೊರ್ವರು ಪ್ರಶ್ನಿಸಿದರು. ಹ. ಆಯಿಶಾ(ರ) ಉತ್ತರಿಸಿದರು. " ಅವರ ನಡತೆ ಪವಿತ್ರ ಕುರ್‌ಆನ್ ಆಗಿತ್ತು". ಅಂದರೆ ಪವಿತ್ರ ಕುರ್‌ಆನ್‌ನಲ್ಲಿ ಸೃಷ್ಟಿಕರ್ತನ ಆದೇಶಗಳಿಗೆ ಅನುಗುಣವಾಗಿಯೇ ಹ. ಮುಹಮ್ಮದ್(ಸ)ರ ನಡತೆ ಇದ್ದಿತು.

ಸೃಷ್ಟಿಕರ್ತನು ಹ. ಮುಹಮ್ಮದ್(ಸ)ರ ನಡತೆಯನ್ನು ಕುರ್‌ಆನ್‌ನಲ್ಲಿ ಈ ರೀತಿ ಶ್ಲಾಘಿಸಿರುವನು:

" ನಿಮ್ಮ ಪ್ರಭುವಿನ ಅನುಗ್ರಹದಿಂದ ನೀವು ಹುಚ್ಚರಲ್ಲ ಮತ್ತು ಖಂಡಿತವಾಗಿಯೂ ನಿಮಗಾಗಿ ಎಂದಿಗೂ ಮುಗಿದು ಹೋಗದಂತಹ ಸತ್ಫಲವಿದೆ ಮತ್ತು ಖಂಡಿತವಾಗಿಯೂ ನೀವು ಚಾರಿತ್ರ್ಯದ ಅತ್ಯುನ್ನತ ಮಟ್ಟದಲ್ಲಿದ್ದೀರಿ" (ಕುರ್‌ಆನ್ 68:4)

ಇಮಾಮ್ ಮಾಲಿಕ್‌ರವರು ತಮ್ಮ ಗ್ರಂಥ " ಮುಅತ್ತ"ದಲ್ಲಿ ಪ್ರವಾದಿವರ್ಯರು(ಸ) ಈ ರೀತಿ ನುಡಿದಿರುವರು.

" ಮಾನವ ಕುಲಕ್ಕೆ ಅತ್ಯಂತ ಶ್ರೇಷ್ಠ ನಡತೆಯನ್ನು ಕಲಿಸಲು ಸೃಷ್ಟಿಕರ್ತನು ನನ್ನನ್ನು ಪ್ರವಾದಿಯಾಗಿ ಕಳುಹಿಸಿರುವನು".

ಹ. ಮುಹಮ್ಮದ್(ಸ) ಮೃದು ಸ್ವಭಾವದವರಾಗಿದ್ದರು.

ಹ. ಅನಸ್(ರ) ವರದಿ ಮಾಡಿರುವರು. " ನಾನು ಪ್ರವಾದಿ ಮುಹಮ್ಮದ್(ಸ)ರ ಸೇವೆಯಲ್ಲಿ ಹತ್ತು ವರ್ಷಗಳ ಕಾಲ ಇದ್ದೆನು. ಈ ಅವಧಿಯಲ್ಲಿ ಪ್ರವಾದಿ(ಸ)ರವರು ಎಂದೂ ನನಗೆ ಕಠೋರ ಮಾತುಗಳನ್ನು ನುಡಿದಿರಲಿಲ್ಲ ಹಾಗೂ ನಿಂದಿಸಿರಲಿಲ್ಲ. ನಾನು ಏನಾದರೂ ತಪ್ಪನ್ನು ಎಸಗಿದ್ದರೆ, ಈ ತಪ್ಪನ್ನು ಏಕೆ ಮಾಡಿರುವಿರಿ? ಎಂದು ಪ್ರಶ್ನಿಸಿರಲಿಲ್ಲ. ನನಗೆ ಯಾವುದೇ ಕೆಲಸ ಮಾಡಬೇಕಿದ್ದು, ಅದನ್ನು ಮಾಡಿರದಿದ್ದರೆ ಏಕೆ ಮಾಡಿಲ್ಲ? ಎಂದು ಪ್ರಶ್ನಿಸಿರಲಿಲ್ಲ". (ಬುಖಾರಿ, ಮುಸ್ಲಿಮ್)

ಹ. ಆಯಿಶಾ(ರ) ನುಡಿದಿರುವರು: " ಪ್ರವಾದಿ(ಸ) ಎಂದೂ ಪತ್ನಿಯರನ್ನಾಗಲಿ, ಸೇವಕರನ್ನಾಗಲಿ ಹೊಡೆದಿರಲಿಲ್ಲ. ಆದರೆ ಸೃಷ್ಟಿಕರ್ತನ ಆದೇಶದಂತೆ ಶತ್ರುಗಳೊಂದಿಗೆ ಹೋರಾಡಿದ್ದರು. ತಮಗೆ ಸತಾಯಿಸಿದ್ದವರೊಂದಿಗೆ ಎಂದೂ ಪ್ರತೀಕಾರವನ್ನು ಪಡೆದಿರಲಿಲ್ಲ. (ಮುಸ್ಲಿಮ್)

ಹ. ಮುಹಮ್ಮದ್(ಸ)ರ ನುಡಿಗಳು ಹಿತಕರವಾಗಿರುತ್ತಿದ್ದವು.

* ಹ. ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ), ಹ. ಮುಹಮ್ಮದ್(ಸ)ರವರು ಕೋಪಗೊಳ್ಳುವವರಾಗಿರಲಿಲ್ಲ ಮತ್ತು ಅವಾಚ್ಯ ಪದಗಳನ್ನು ಬಳಸುತ್ತಿರಲಿಲ್ಲ ಎಂದು ನುಡಿದಿರುವರು (ಬುಖಾರಿ, ಮುಸ್ಲಿಮ್)

* ಹೆಚ್ಚಿನ ವೇಳೆ ಹ. ಮುಹಮ್ಮದ್(ಸ) ಮೌನವಾಗಿರುತ್ತಿದ್ದರು. (ಸರಹ್ ಅಲ್ ಸನಾ)

* ಹ. ಮುಹಮ್ಮದ್ (ಸ) ಮಾತಾಡುವಾಗ ಪ್ರತಿಯೊಂದು ಪದವನ್ನು ಸ್ಪಷ್ಟವಾಗಿ ಉಚ್ಛರಿಸತ್ತಿದ್ದರು. ಪ್ರತಿಯೊಂದು ವಾಕ್ಯದ

ನಂತರ ವಿರಾಮವನ್ನು ನೀಡುತ್ತಿದ್ದು, ಯಾರಾದರೂ ವಾಕ್ಯಗಳನ್ನು ಬರೆದು ಕೊಳ್ಳ ಬಯಸಿದರೆ, ಬರೆದುಕೊಳ್ಳ ಬಹುದಾಗಿತ್ತು.

(ಬುಖಾರಿ, ಮುಸ್ಲಿಮ್ ಮತ್ತು ಮಅ್‌ರುಫುಲ್ ಹದೀಸ್ ಭಾಗ–8 ಪುಟ 238)

* ಹ. ಮುಹಮ್ಮದ್(ಸ)ರವರು ನೀಡುತ್ತಿದ್ದ ಹೇಳಿಕೆಗಳು ಸಾಹಿತ್ಯಕನಾಗಿ ಉತ್ಕೃಷ್ಟ ಮಟ್ಟದ್ದಾಗಿದ್ದವು. ಇಂದಿಗೂ ಜನರು ಪ್ರವಾದಿಯವರ ಹೇಳಿಕೆಗಳನ್ನು ಪುನರುಚ್ಚಿಸುತ್ತಾರೆ. ಪ್ರವಾದಿವರ್ಯರ ಹೇಳಿಕೆಗಳ ಸಂಗ್ರಹಕ್ಕೆ 'ಜವಮಾವುಲ್ ಕಲಾಮ್' ಎನ್ನುತ್ತಾರೆ.

ಹ. ಮುಹಮ್ಮದ್(ಸ) ಬಹಳ ಸಹನಾಶೀಲರಾಗಿದ್ದರು.

ಒಮ್ಮೆ ಹಳ್ಳಿಗನೋರ್ವನು ಒಂದು ಪ್ರವಾದಿ(ಸ)ರ ಶಾಲನ್ನು ಜೋರಾಗಿ ಎಳೆದನು ಇದರಿಂದ ಪ್ರವಾದಿ(ಸ)ರ ಕುತ್ತಿಗೆಯ ಮೇಲೆ ತರಚುಗಾಯವಾಯಿತು. ಹಳ್ಳಿಗನು ಪ್ರವಾದಿ(ಸ)ರನ್ನು ಉದ್ದೇಶಿಸಿ ಹೇಳಿದನು: " ಓ ಮುಹಮ್ಮದ್, ಅಲ್ಲಾಹನು ನಿನಗೆ ನೀಡಿರುವುದರಲ್ಲಿ ನನಗೂ ಸ್ವಲ್ಪವನ್ನು ನೀಡು".

ಇತರ ಯಾರಾದರೂ ಈ ರೀತಿಯ ದುರ್ವರ್ತನೆಗೆ ಶಿಕ್ಷೆ ನೀಡುತ್ತಿದ್ದರು. ಆದರೆ ಪ್ರವಾದಿ(ಸ) ಮುಗುಳ್ನಕ್ಕು, ಹಳ್ಳಿಗನಿಗೆ ಸ್ವಲ್ಪ ಆಹಾರ ಸಾಮಾಗ್ರಿಗಳನ್ನು ಕೊಡುವಂತೆ ಅನುಯಾಯಿಗಳಿಗೆ ಸೂಚಿಸಿದರು.

ಒಮ್ಮೆ ಪ್ರವಾದಿ(ಸ) ಒಬ್ಬ ಬಡ ಮುಸ್ಲಿಮನಿಗೆ ಸಹಾಯ ಮಾಡುವ ಉದ್ದೇಶದಿಂದ ಯಹೂದಿಯಿಂದ ಸಾಲವನ್ನು ಪಡೆದಿದ್ದರು. ಸಾಲದ ಅವಧಿಯು ಪೂರ್ಣಗೊಳ್ಳುವ ಮೊದಲೇ ಯಹೂದಿಯು ಪ್ರವಾದಿ(ಸ)ರ ಬಳಿ ಬಂದು ಸಾಲವನ್ನು ಮರುಪಾವತಿಸುವಂತೆ ತಗಾದೆ ಮಾಡಿದನು. ಆ ಸಮಯದಲ್ಲಿ ಪ್ರವಾದಿಯವರ ಬಳಿ ಸಾಲ ಮರು ಪಾವತಿಸಲು ಹಣವಿರಲಿಲ್ಲ.

ಹಣವನ್ನು ನೀಡುವವರೆಗೆ ಇಲ್ಲಿಂದ ಮರಳುವುದಿಲ್ಲ ಎಂದು ನುಡಿದು ಯಹೂದಿಯು ಮಸೀದಿಯಲ್ಲಿ ಕುಳಿತನು. ಮಧ್ಯಾಹ್ನದ ಸಮಯ ಬಂದಿದ್ದ ಯಹೂದಿ, ಮಾರನೇಯ ದಿನದವರೆಗೂ ಮಸೀದಿಯಲ್ಲಿಯೇ ಕುಳಿತರು. ಪ್ರವಾದಿ(ಸ) ಸಹ ಆತನೊಂದಿಗೆ ಮಸೀದಿಯಲ್ಲಿ ಕುಳಿತರು. ಪ್ರವಾದಿ(ಸ)ರ ಕೆಲ ಅನುಯಾಯಿಗಳು ಪ್ರವಾದಿ(ಸ)ರ ಪರವಾಗಿ ಸಾಲವನ್ನು ಮರುಪಾವತಿಸಲು ಮುಂದಾದರು. ಆದರೆ ಪ್ರವಾದಿ(ಸ) ಇದಕ್ಕೆ ಒಪ್ಪಲಿಲ್ಲ. ಪ್ರವಾದಿ(ಸ)ರ ಕೆಲ ಅನುಯಾಯಿಗಳು ಯಹೂದಿಯನ್ನು ಹೆದರಿಸಿ ವಾಪಸ್ಸು ಕಳುಹಿಸ ಬಯಸಿದ್ದರು. ಆದರೆ ಪ್ರವಾದಿ(ಸ) ಅವರನ್ನು ಈ ರೀತಿ ಮಾಡಲು ಬಿಡಲಿಲ್ಲ.

ಯಹೂದಿಯು ಪ್ರವಾದಿ(ಸ)ರ ವರ್ತನೆಯನ್ನು ಗಮನಿಸುತ್ತಿದ್ದನು. ಯಹೂದಿ ಧರ್ಮಗ್ರಂಥಗಳಲ್ಲಿ ಭವಿಷ್ಯದಲ್ಲಿ ಬರಲಿರುವ ಪ್ರವಾದಿ ಬಹಳ ತಾಳ್ಮೆಯನ್ನು ಹೊಂದಿರುವರೆಂದು ಯಹೂದಿ ಓದಿದ್ದನು. ಭವಿಷ್ಯದ ಪ್ರವಾದಿ ಹ. ಮುಹಮ್ಮದ್(ಸ)ರವರೇ ಆಗಿರುವರೆಂದು ಆತನಿಗೆ ಮನವರಿಕೆಯಾಯಿತು. ಕೂಡಲೇ ಆತನು ಹ. ಮುಹಮ್ಮದ್(ಸ)ರನ್ನು ಉದ್ದೇಶಿಸಿ, " ನೀವು ನೈಜ ಪ್ರವಾದಿಯಾಗಿರುವಿರಿ. ನನ್ನ ಎಲ್ಲಾ ಸಂಪತ್ತನ್ನು ತಮಗೆ ವಹಿಸುತ್ತಿರುವೆನು. ತಮ್ಮ ಇಚ್ಛೆಯಂತೆ ವ್ಯಯ ಮಾಡಬಹುದು" ಎಂದನು.

(ಮಿಷ್ಕಾತ್, ಮಅ್‌ರುಫುಲ್ ಹದೀಸ್ ಭಾಗ–2

ಪುಟ109)

ಹ. ಮುಹಮ್ಮದ್(ಸ) ಮಾತಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದರು.

ಹ. ಮುಹಮ್ಮದ್(ಸ) ಎಂದು ನೀಡಿದ್ದ ವಚನವನ್ನು ಭಂಗ ಮಾಡಿರಲಿಲ್ಲ. ಒಮ್ಮೆ ಓರ್ವ ಯಹೂದಿ (ಅಬ್ದುಲ್ಲಾ ಬಿನ್ ಅಬಿಲ್ ಹಮ) ಹ. ಮುಹಮ್ಮದ್(ಸ)ರಿಗೆ ನಿರ್ಧಿಷ್ಟ ಸ್ಥಳದಲ್ಲಿ ಬರುವುದಾಗಿ ತಿಳಿಸಿದನು. ಪ್ರವಾದಿ(ಸ) ಸಮಯಕ್ಕೆ ಸರಿಯಾಗಿ ನಿಗದಿತ ಸ್ಥಳವನ್ನು ತಲುಪಿದರು. ಆದರೆ ಯಹೂದಿಗೆ ಇದು ಮರೆತೇ ಹೋಯಿತು. ಹ. ಮುಹಮ್ಮದ್(ಸ) ಮೂರು ದಿನಗಳು ನಿರಂತರ ಸ್ಥಳದಲ್ಲಿ ನಿಂತೇ ಇದ್ದರು. ಮೂರನೆಯ ದಿನ ಆಕಸ್ಮಿಕವಾಗಿ ಯಹೂದಿ ಆ ಸ್ಥಳದಿಂದ ಹಾದು ಹೋಗುತ್ತಿದ್ದಾಗ ಪ್ರವಾದಿ(ಸ)ರನ್ನು ನೋಡಿ, ಅವರನ್ನು ಭೇಟಿ ಮಾಡ ಬೇಕೆಂಬುದನ್ನು ನೆನಪಿಸಿಕೊಂಡನು. ಹ. ಮುಹಮ್ಮದ್(ಸ) ಸ್ವಲ್ಪವೂ ಕೋಪಿಸಿಕೊಳ್ಳದೇ, " ನೀನು ನನ್ನನ್ನು ಆತಂಕಕ್ಕೆ ಈಡು ಮಾಡಿದೆ. ನಾನು 3 ದಿನಗಳಿಂದ ನಿನ್ನನ್ನು ಕಾಯುತ್ತಿರುವೆನು". ಎಂದರು. (ಶಿಫಾ, ಪುಟ 56)

ಮುಸ್ಲಿಮೇತರರೊಂದಿಗೆ ಹ. ಮುಹಮ್ಮದ್(ಸ)ರ ನಡವಳಿಕೆ ಗೌರವಾನ್ವಿತವಾಗಿತ್ತು.

* ಒಮ್ಮೆ ಹ. ಅಸ್ಮಾ ಬಿಂತ್ ಅಬೂಬಕ್ಕರ್(ರ)ರವರ ತಾಯಿ ಅವರನ್ನು ಕಾಣಲು ಮದೀನಾ ಬರುವವರಿದ್ದರು. ಅವರು ಇಸ್ಲಾಮ್ ಸ್ವೀಕರಿಸಿರಲಿಲ್ಲ. ಹ. ಅಸ್ಮಾ ಪ್ರವಾದಿ(ಸ)ರನ್ನು ಕಂಡು, " ನನ್ನ ತಾಯಿ ಮುಸ್ಲಿಮೇತರರು. ಅವರೊಂದಿಗೆ ಹೇಗೆ ವರ್ತಿಸಲಿ?" ಎಂದು ಕೇಳಿದರು. ಪ್ರವಾದಿ(ಸ) ಉತ್ತರಿಸಿದರು: " ಓರ್ವ ಮಗಳು ತಾಯಿಯೊಂದಿಗೆ ಹೇಗೆ ನಡೆದು ಕೊಳ್ಳಬೇಕೋ ಅದೇ ರೀತಿಯಲ್ಲಿ ನಡೆದುಕೊಳ್ಳು. ಆದರೆ ಇಸ್ಲಾಮಿಗೆ ವಿರುದ್ಧವಾಗಿ ಅವರೇನಾದರೂ ಆದೇಶಿಸಿದರೆ, ಅದನ್ನು ಪಾಲಿಸಬೇಡಿ".

(ಬುಖಾರಿ, ಮುಸ್ಲಿಮ್, ಮುಂತಖಬ್ ಅಬ್ವಾಬ್ ಭಾಗ–1, ಪುಟ 981)

* ಹ. ಮುಹಮ್ಮದ್(ಸ) ನುಡಿದಿರುವರು:

" ಇಸ್ಲಾಮಿ ಆಡಳಿತದಲ್ಲಿ ಮುಸ್ಲಿಮೇತರ ಪ್ರಜೆಗಳ ಪ್ರಾಣ, ಘನತೆ ಮತ್ತು ಸಂಪತ್ತು ರಕ್ಷಿಸಲ್ಪಡುವುದು. ಯಾವನೇ ಮುಸ್ಲಿಮನು ಒತ್ತಾಯ ಪೂರ್ವಕವಾಗಿ ಮುಸ್ಲಿಮೇತರರ ಸಂಪತ್ತನ್ನು ಕಬಳಿಸುವನೋ, ಅಥವಾ ಅವರನ್ನು ಶೋಷಣೆಗೆ ಒಳಪಡಿಸುವನೋ ಅಥವಾ ಅವರ ಜೀವನವನ್ನು ದುರ್ಗಮ ವನ್ನಾಗಿಸುವನೋ, ನಿರ್ಣಾಯಕ ದಿನದಂದು ಮುಸ್ಲಿಮೇತರನ ವ್ಯಾಜ್ಯ ಅಲ್ಲಾಹನ ಮುಂದೆ ಮಂಡಿಸಲ್ಪಟ್ಟಾಗ, ನಾನು ಮುಸ್ಲಿಮೇತರನ ಪರವಾಗಿ ವಕಾಲತ್ತು ವಹಿಸುವೆನು.

(ಅಬೂ ದಾವೂದ್, ಸಫೀನಾ ನಜಾತ್ 151)

* ಹ. ಮುಹಮ್ಮದ್(ಸ) ನುಡಿದಿರುವರು. " ಇತರ ಸಮುದಾಯದ ಗೌರವಾನ್ವಿತ ವ್ಯಕ್ತಿ ನಿಮ್ಮ ಬಳಿಗೆ ಬಂದರೆ ಅವರೊಂದಿಗೆ ಗೌರವದೊಂದಿಗೆ ವರ್ತಿಸಿರಿ. (ಜವಾಮುಲ್ ಕಲಾಮ್)

* ಹ. ಆಯಿಶಾ(ರ) ಒಮ್ಮೆ ಯಹೂದಿಯೋರ್ವನು ಪ್ರವಾದಿ(ಸ)ರ ಬಳಿ ಬಂದನೆಂದು, ಪ್ರವಾದಿ(ಸ) ಆತನೊಂದಿಗೆ ಗೌರವಯುತವಾಗಿ ನಡೆದುಕೊಂಡರೆಂದು, ಆತನು ತೆರಳಿದ ಬಳಿಕ, ಆ ಯಹೂದಿ ಕೆಟ್ಟ ವ್ಯಕ್ತಿಯಾಗಿರುವುದಾಗಿ ತಿಳಿಸಿದರೆಂದು ನುಡಿದರು.

ಹ. ಆಯಿಶಾ(ರ)ರಿಗೆ ಆಶ್ಚರ್ಯವಾಗಿ ಹಾಗಿದ್ದರೆ ಆ ವ್ಯಕ್ತಿಯೊಂದಿಗೆ ಗೌರವದೊಂದಿಗೆ ಏಕೆ ವರ್ತಿಸಿದಿರಿ? ಎಂದು ಪ್ರವಾದಿ(ಸ)ರಿಗೆ ಪ್ರಶ್ನಿಸಿದರು. ಪ್ರವಾದಿ(ಸ) ಉತ್ತರಿಸಿದರು. " ಕೆಟ್ಟ ವರ್ತನೆಯ ಕಾರಣ ಯಾರ ಜೊತೆ ಮಾತಾಡಲು ಜನರು ಹಿಂಜರಿಯುತ್ತಾರೋ, ಅಲ್ಲಾಹನ ದೃಷ್ಟಿಯಲ್ಲಿ ಅಂತಹ ವ್ಯಕ್ತಿ ಅತ್ಯಂತ ಕೆಟ್ಟ ವ್ಯಕ್ತಿಯಾಗಿರುವರು. ನಾನು ಅಲ್ಲಾಹನ ದೃಷ್ಟಿಯಲ್ಲಿ ಕೆಟ್ಟ ವ್ಯಕ್ತಿಯಾಗ ಬಯಸುವುದಿಲ್ಲ. (ತಿರ್ಮಿದಿ, ಬೈಹಕಿ)

ಹ. ಮುಹಮ್ಮದ್(ಸ) ನುಡಿದಿರುವರು. " ಯಾವಾಗಲೂ (ಮುಸ್ಲಿಮೇತರರೊಂದಿಗೂ) ಸದ್ವರ್ತನೆ ತೋರಿರಿ. ನೀವು ದೈವಭಕ್ತಿವುಳ್ಳ ಜನರೊಂದಿಗೆ ಸ್ವರ್ಗವನ್ನು ಪ್ರವೇಶಿಸುವಿರಿ. (ತಿಬ್ರಾನಿ ಕಬೀರ್–1115)

ಹ. ಮುಹಮ್ಮದ್(ಸ) ಮತಾಂಧರಾಗಿರಲಿಲ್ಲ

ಹ. ಆಯಿಶಾ(ರ) ನುಡಿದಿರುವರು. " ಪ್ರವಾದಿ(ಸ) ಇಸ್ಲಾಮ್ ಧರ್ಮವು ಅನುಯಾಯಿಗಳಿಗೆ ಹೊರೆಯಾಗಿರಬಾರದೆಂದು ಬಯಸುತ್ತಿದ್ದರು. ಆದುದರಿಂದ ಯಾವುದೇ ವಿಷಯದಲ್ಲಿ ಎರಡು ಸಾಧ್ಯತೆಗಳಿದ್ದು ಒಂದನ್ನು ಆಯ್ದು ಕೊಳ್ಳುವ ಸಂದರ್ಭದಲ್ಲಿ ಪ್ರವಾದಿ(ಸ) ಸದಾ ಸುಲಭವಾದುದನ್ನು ಆಯ್ಕೆ ಮಾಡುತ್ತಿದ್ದರು. (ಬುಖಾರಿ, ಹದೀಸ್ ನಬವಿ ಪುಟ 31)

* ಹ. ಆಯಿಶಾ(ರ) ನುಡಿದಿರುವರು.

" ಒಮ್ಮೆ ಪ್ರವಾದಿ(ಸ)ರವರು ನನ್ನ ಕೊಠಡಿಗೆ ಆಗಮಿಸಿದಾಗ, ಅಲ್ಲಿ ಓರ್ವ ಮಹಿಳೆ ಕುಳಿತಿದ್ದಳು. ಪ್ರವಾದಿ(ಸ), 'ಆ ಮಹಿಳೆ ಯಾರು?' ಎಂದು ವಿಚಾರಿಸಿದರು. 'ಅಧಿಕ ನಮಾಝ್ , ಉಪವಾಸ ವೃತದ ಆಚರಣೆಗೆ ಪ್ರಖ್ಯಾತಳಾಗಿರುವ ಮಹಿಳೆ ಇವರೇ ಆಗಿರುವರು' ಎಂದು ನಾನು ಉತ್ತರಿಸಿದೆ.

ಪ್ರವಾದಿ(ಸ) ನುಡಿದರು: " ಆ ರೀತಿ ಮಾಡಬೇಡಿರಿ, ನಿಮಗೆ ಸಾಧ್ಯವಿದ್ದಷ್ಟು ಆರಾಧನೆಯನ್ನು ಮಾತ್ರ ಮಾಡಿರಿ. ಅಲ್ಲಾಹ್ ನಿಮ್ಮ ಆರಾಧನೆಗೆ ಪ್ರತಿಫಲ ನೀಡಲು ದಣಿಯುವುದಿಲ್ಲ. ಆದರೆ ನೀವು ಅಧಿಕ ಆರಾಧನೆ ಮಾಡುವುದರಿಂದ ಬೇಸರ ಗೊಳ್ಳುವಿರಿ. ನಿರಂತರ ಮಾಡಲಿಕ್ಕೆ ಸಾಧ್ಯವಿರುವಷ್ಟನ್ನು ಮಾತ್ರ ಮಾಡುವುದರಿಂದ ಅಲ್ಲಾಹ್ ಮೆಚ್ಚುತ್ತಾನೆ". (ಬುಖಾರಿ, ಮುಸ್ಲಿಮ್)

* ಒಮ್ಮೆ ಮಹಿಳೆಯೊರ್ವರು ಪ್ರವಾದಿ(ಸ)ರ ಬಳಿಗೆ ಬಂದು, " ನನ್ನ ಪತಿ ಸಫ್ವಾನ್ ಬಿನ್ ಮುಅತ್ತಲ್ ಫಜ್ರ್ ನಮಾಝನ್ನು ಸೂರ್ಯೋದಯದ ನಂತರ ನಿರ್ವಹಿಸುತ್ತಾರೆ" ಎಂದು ದೂರು ನೀಡಿದರು. ಅವರ ಪತಿಯು ಅಲ್ಲಿ ಉಪಸ್ಥಿತರಿದ್ದರು.

ಪ್ರವಾದಿ(ಸ), ಇದು ನಿಜವೇ? ಎಂದು ಅವರ ಪತಿಯನ್ನು ವಿಚಾರಿಸಿದಾಗ ಸಫ್ವಾನ್ ಬಿನ್ ಮುಅತ್ತಲ್ ನುಡಿದರು "ನನ್ನ ತೋಟ ಬಾವಿಯಿಂದ ಬಹಳ ದೂರದಲ್ಲಿದೆ. ಬಾವಿಯ ಹತ್ತಿರ ತೋಟವಿರುವವರು ಮೊದಲು ನೀರನ್ನು ಹಾಯಿಸಿಕೊಳ್ಳುತ್ತಾರೆ. ನನ್ನ ತೋಟಕ್ಕೆ ನೀರು ಸಿಗಬೇಕಾದರೆ ಮಧ್ಯರಾತ್ರಿಯಾಗುತ್ತದೆ. ತೋಟಕ್ಕೆ ನೀರು ಹಾಯಿಸಿ ಮನೆಗೆ ಬರುವುದರಿಂದ ಬರುವಷ್ಟರಲ್ಲಿ ದಣಿದಿರುತ್ತೇನೆ. ಆದುದರಿಂದ ಫಜ್ರ್ ನಮಾಝಿಗೆ ಬೇಗನೆ ಏಳಲು ಸಾಧ್ಯವಾಗುವುದಿಲ್ಲ". ಅವರ ಮಾತನ್ನು ಕೇಳಿ ಪ್ರವಾದಿ(ಸ) ನುಡಿದರು " ಬೆಳಿಗ್ಗೆ ನಿಮಗೆ ಎಚ್ಚರಿಕೆಯಾದ ಕೂಡಲೇ ನಮಾಝ್ ನಿರ್ವಹಿಸಿರಿ".

ಪ್ರವಾದಿ(ಸ) ನುಡಿದಿರುವರು: ' ಯಾರು ತಮ್ಮ ಮೇಲೆ ಧರ್ಮವನ್ನು ಒಂದು ಹೊರೆಯನ್ನಾಗಿಸುವರೋ, ಅವರು ನಾಶ ಹೊಂದುವರು." (ಮುಸ್ಲಿಮ್, ರಿಯಾಝುಸ್ಸಾಲಿಹೀನ್)

ಹ. ಮುಹಮ್ಮದ್(ಸ) ಮತ್ತು ಅವರ ಕುಟುಂಬದವರು ಉದಾರಿಗಳಾಗಿದ್ದರು.

ಹ. ಸುಹೈಲ್(ರ) ವರದಿ ಮಾಡಿರುವರು: " ಒಮ್ಮೆ ಓರ್ವ ಅನುಯಾಯಿ ಪ್ರವಾದಿ(ಸ) ಅವರು ಧರಿಸಿದ್ದ ಶಾಲನ್ನು ಬೇಡಿದರು. ಪ್ರವಾದಿ(ಸ)ರಿಗೆ ಆ ಶಾಲಿನ ಅಗತ್ಯ ಇತ್ತು. ಆದರೂ ಅವರು ತಮ್ಮ ಶಾಲನ್ನು ಅನುಯಾಯಿಗೆ ನೀಡಿದರು.

ಪ್ರವಾದಿ(ಸ) ಸ್ಥಳದಿಂದ ತೆರಳಿದ ಬಳಿಕ ಇತರ ಅನುಯಾಯಿಗಳು ಶಾಲನ್ನು ಕೇಳಿದ ಅನುಯಾಯಿಯನ್ನು ಪ್ರವಾದಿ(ಸ)ರೊಂದಿಗೆ ಶಾಲು ಕೇಳಿದ ಕಾರಣಕ್ಕಾಗಿ ಗದರಿಸಿದರು. ಅವರು, " ನಾನು ಈ ಶಾಲನ್ನು ನನ್ನ ಶವ ವಸ್ತ್ರವನ್ನಾಗಿ ಉಪಯೋಗಿಸಲು ಬಯಸಿದ್ದೇನೆ" ಎಂದು ಉತ್ತರಿಸಿದರು.

ಹ. ಮುಹಮ್ಮದ್(ಸ)ರಿಗೆ ಮದೀನಾ ಮತ್ತು ಖೈಬರ್‌ನಲ್ಲಿ ಸ್ವಲ್ಪ ಜಮೀನು ದೊರಕಿತ್ತು. ಈ ಜಮೀನಿನಿಂದ ಅವರಿಗೆ ಒಂದು ವರ್ಷಕ್ಕೆ ಬೇಕಾದಷ್ಟು ಧಾನ್ಯ ದೊರಕುತ್ತಿತ್ತು. ಆದರೆ ಪ್ರವಾದಿ(ಸ) ಮತ್ತು ಅವರ ಕುಟುಂಬದವರು ಎಷ್ಟು ಉದಾರಿಗಳಾಗಿದ್ದರೆಂದರೆ, ಜಮೀನಿನಿಂದ ಬರುತ್ತಿದ್ದ ಧಾನ್ಯವನ್ನು ಬಡ ಬಗ್ಗರಿಗೆ ಹಂಚಿ ಸ್ವತಃ ಖರ್ಜೂರ ಮತ್ತು ನೀರು ಸೇವಿಸುತ್ತಿದ್ದರು.

ಹ. ಮುಹಮ್ಮದ್(ಸ) ಬೇಡುವವರನ್ನು ಎಂದೂ ಬರಿಗೈಯಲ್ಲಿ ಹಿಂದಿರುಗಿಸುತ್ತಿರಲಿಲ್ಲ. ತಮ್ಮ ಬಳಿ ಏನೂ ಇಲ್ಲದಿದ್ದಾಗ ಇತರರಿಂದ ಸಾಲ ಪಡೆದು ಜನರಿಗೆ ನೀಡುತ್ತಿದ್ದರು. ಪ್ರವಾದಿ(ಸ) ನಿಧನ ಹೊಂದಿದಾಗ ಅವರ ರಕ್ಷಣಾ ಕವಚವನ್ನು ಯಹೂದಿಯ ಬಳಿ ಅಡವಿಡಲಾಗಿತ್ತು. (ಬುಖಾರಿ, ಮುಸ್ಲಿಮ್, ಮಅ್‌ರುಫುಲ್ ಹದೀಸ್ ಭಾಗ–8, ಪುಟ 233)

ಹ. ಮುಹಮ್ಮದ್(ಸ) ಸದಾ ನ್ಯಾಯವನ್ನು ಪಾಲಿಸುತ್ತಿದ್ದರು.

ರುಕಾನಾ ಮಕ್ಕಾದ ಹೆಸರಾಂತ ಕುಸ್ತಿಪಟು ಆಗಿದ್ದರು. ಒಮ್ಮೆ ಅವರು ಪ್ರವಾದಿ(ಸ)ರಿಗೆ " ನೀವು ನನ್ನನ್ನು ಕುಸ್ತಿಯಲ್ಲಿ ಸೋಲಿಸಿದರೆ ನಾನು ಮುಸ್ಲಿಮನಾಗುತ್ತೇನೆ" ಎಂದರು. ಹ. ಮುಹಮ್ಮದ್(ಸ) ಕುಸ್ತಿಪಟು ಆಗಿರಲಿಲ್ಲ. ಆದರೂ ಅವರು ರುಕಾನಾ ಜೊತೆ ಮೂರು ಸಲವೂ ಕುಸ್ತಿ ಆಡಿ ಮೂರು ಸಲವೂ ಜಯಶಾಲಿಯಾದರು. (ಸೀರತ್ ಅಹ್ಮದ್ ಮುಜ್‌ತಬಃ)

ಬರಾ ಬಿನ್ ಅಝಿಬ್(ರ) ನುಡಿದಿರುವರು: " ಯುದ್ಧಗಳಲ್ಲಿ ಪ್ರವಾದಿ ಮುಹಮ್ಮದ್(ಸ) ಸದಾ ಮುಂಚೂಣಿಯಲ್ಲಿರುತ್ತಿದ್ದರು. ಅವರ ಮೇಲೆ ಅತ್ಯಧಿಕ ಆಕ್ರಮಣಗಳು ನಡೆಯುತ್ತಿದ್ದವು. ಆದುದರಿಂದ ಅತ್ಯಂತ ಧೈರ್ಯ ಶಾಲಿ ಅನುಯಾಯಿಗಳು ಮಾತ್ರ ಪ್ರವಾದಿ(ಸ)ರೊಂದಿಗೆ ಇರಲು ಸಾಧ್ಯವಾಗುತ್ತಿತ್ತು. ಘೋರ ಯುದ್ಧದ ಸಂದರ್ಭದಲ್ಲಿ ಗಾಯಾಳುಗಳು ಪ್ರವಾದಿ ವರ್ಯರ ರಕ್ಷಣೆ ಪಡೆಯುತ್ತಿದ್ದರು. (ಬುಖಾರಿ)

ಹುನೈನ್ ಯುದ್ಧದಲ್ಲಿ ಶತ್ರು ಸೇನೆಯ ಅನಿರೀಕ್ಷಿತ ಆಕ್ರಮಣದಿಂದಾಗಿ ಮುಸ್ಲಿಮ್ ಸೇನೆ ರಣರಂಗದಿಂದ ಹಿಂದೆ ಸರಿಯ ಬೇಕಾಯಿತು. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿಯೂ, ಪ್ರವಾದಿ ಮುಹಮ್ಮದ್(ಸ) 8–10

ಅನುಯಾಯಿಗಳೊಂದಿಗೆ ರಣರಂಗದಲ್ಲಿಯೇ ಉಳಿದರು. ಶತ್ರುಗಳ ಮೇಲೆ ಆಕ್ರಮಣವನ್ನು ಮುಂದುವರೆಸಿದರು. ಹ. ಅಬ್ಬಾಸ್(ರ)ರ ಕರೆಯ ಮೇರೆಗೆ ಮುಸ್ಲಿಮ್ ಸೈನಿಕರು ಪುನಃ ಒಗ್ಗೂಡಿ ಶತ್ರುಗಳ ಮೇಲೆ ಆಕ್ರಮಣ ನಡೆಸಿ ಸೋಲಿಸಿದರು. (ಸೀರತೆ ಅಹ್ಮದ್ ಮುಜ್ತಬಾ)

ಹ. ಅನಸ್ ಬಿನ್ ಮಾಲಿಕ್(ರ) ವರದಿ ಮಾಡಿರುವರು:

ಒಮ್ಮೆ ಮದೀನಾದ ಒಂದು ಭಾಗದಿಂದ ಬಹಳ ಜೋರಾದ ಶಬ್ದ ಕೇಳಿ ಬಂತು. ಜನರು ಮದೀನಾದ ಮೇಲೆ ಆಕ್ರಮಣ ನಡೆದಿದೆ ಎಂದು ಭಾವಿಸಿದರು. ಜನರು ಆಯುಧಗಳೊಂದಿಗೆ ಸಿದ್ಧರಾಗಿ ಹೊರಡುವಷ್ಟರಲ್ಲಿ ಪ್ರವಾದಿ(ಸ) ಖಡ್ಗದೊಂದಿಗೆ ಹ. ತಲ್ಹಾರವರ ಕುದುರೆ ಏರಿ ಶಬ್ದ ಬಂದ ದಿಕ್ಕಿನಿಂದ ಬರುತ್ತಿರುವುದು ಕಂಡು ಬಂತು. ಪ್ರವಾದಿ(ಸ) ಯಾವುದೇ ಭಯವಿಲ್ಲ ಎಂದು ಜನರಿಗೆ ಅಭಯ ನೀಡಿದರು. (ಬುಖಾರಿ, ಮುಸ್ಲಿಮ್)

ಹ. ಮುಹಮ್ಮದ್(ಸ) ಆಹಾರವನ್ನು ಬಹಳ ಗೌರವಿಸುತ್ತಿದ್ದರು.

ಹ. ಅಬೂ ಹುರೈರಾ(ರ) ವರದಿ ಮಾಡಿರುವರು.

" ಪ್ರವಾದಿ(ಸ)ರ ಎದುರು ಆಹಾರವನ್ನು ಇಟ್ಟಾಗ ಅಹಾರ ಇಷ್ಟವಾದರೆ ಅವರು ಅದನ್ನು ಸೇವಿಸುತ್ತಿದ್ದರು. ಇಷ್ಟವಾಗದಿದ್ದರೆ ಪ್ರವಾದಿ(ಸ) ಸ್ಥಳದಿಂದ ಏಳುತ್ತಿದ್ದರು. ಅವರು ಎಂದೂ ಆಹಾರದ ಟೀಕೆ ಮಾಡುತ್ತಿರಲಿಲ್ಲ". (ಬುಖಾರಿ)

ಹ. ಆಯಿಶಾ(ರ) ವರದಿ ಮಾಡಿರುವರು.

" ಪ್ರವಾದಿ(ಸ) ಒಮ್ಮೆ ನನ್ನ ಕೋಣೆಯೊಳಗೆ ಬಂದರು. ಕೋಣೆಯಲ್ಲಿ ರೊಟ್ಟಿಯ ಒಂದು ತುಂಡು ನೆಲದ ಮೇಲೆ ಬಿದ್ದಿತ್ತು. ಪ್ರವಾದಿ(ಸ) ರೊಟ್ಟಿಯ ತುಂಡನ್ನು ಎತ್ತಿ ಅದನ್ನು ಸ್ವಚ್ಛಗೊಳಿಸಿ ಈ ರೀತಿ ನುಡಿದರು ಓ ಆಯಿಶಾ, ಒಳ್ಳೆಯ ವಸ್ತುಗಳನ್ನು ಗೌರವಿಸು. ಏಕೆಂದರೆ (ಅಲ್ಲಾಹನ ಅನುಗ್ರಹದಿಂದಾಗಿ) ಯಾವ ಸಮುದಾಯದಿಂದ ಈ ವಸ್ತು ಬಂದಿರುವುದೋ, ಪುನಃ ಆ ಸಮುದಾಯದ ಬಳಿಗೆ ಮರಳುವುದಿಲ್ಲ". ಅಂದರೆ ಆಹಾರವನ್ನು ಅಪಮಾನಿಸಿ ಬಡವರಾದ ಜನರು ಪುನಃ ತಮ್ಮ ಸಿರಿವಂತಿಕೆಯನ್ನು ಮರಳಿ ಪಡೆದಿರುವುದಿಲ್ಲ.

ಹ. ಮುಹಮ್ಮದ್(ಸ) ಸದಾ ಹಸನ್ಮುಖರಾಗಿರುತ್ತಿದ್ದರು.

ಹ. ಮುಹಮ್ಮದ್(ಸ) ಸದಾ ಹಸನ್ಮುಖರಾಗುತ್ತಿದದರು. ಹ. ಅಬೂ ಹುರೈರಾ(ರ) ವರದಿ ಮಾಡಿರುವರು. " ಪ್ರವಾದಿ(ಸ)ರನ್ನು, ಅವರು ಪ್ರವಾದಿಯ ಹೊಣೆಗಾರಿಕೆಯನ್ನು ವಹಿಸಿಯೂ ಜನರೊಂದಿಗೆ ಸದಾ ಹಸನ್ಮುಖರಾಗಿ ಮಾತಾಡುವ ಬಗ್ಗೆ ಪ್ರಶ್ನಿಸಲಾದಾಗ ಪ್ರವಾದಿ(ಸ) ಹೌದು, ಆದರೆ ನಾನು ತಪ್ಪು ಮಾತನ್ನು ಮತ್ತು ಧರ್ಮಕ್ಕೆ ವಿರುದ್ಧದ ಮಾತನ್ನು ನುಡಿಯುವುದಿಲ್ಲ" ಎಂದು ಉತ್ತರಿಸಿದರು. (ತಿರ್ಮಿದಿ, ಝಾದೆರಾಹ್ ಪುಟ–320)

ಹ. ಅಬ್ದುಲ್ಲಾ ಬಿನ್ ಹಾರಿಸ್(ರ) ವರದಿ ಮಾಡಿರುವರು:

" ನಾನು ಪ್ರವಾದಿ ಮುಹಮ್ಮದ್(ಸ)ರವರಿಗಿಂತ ಹೆಚ್ಚು ಹಸನ್ಮುಖ ವ್ಯಕ್ತಿಯನ್ನು ನೋಡಿಲ್ಲ. (ತಿರ್ಮಿದಿ, ಮುಂತಖಬ್ ಅಬ್ವಾಬ್ 827)

ಹ. ಅಬೂದರ್(ರ)ರವರು ಪ್ರವಾದಿ(ಸ) ಹೀಗೆ ನುಡಿದಿರುವರಾಗಿ ವರದಿ ಮಾಡಿರುವರು. " ನಿಮ್ಮ ಸಹೋದರನನ್ನು ನಗು ಮುಖದಿಂದ ಭೇಟಿ ಮಾಡುವುದು ಸದಕವಾಗಿದೆ". (ತಿರ್ಮಿದಿ 1956, ಹದೀಸ್ ನಬವಿ 110)

ಹ. ಮುಹಮ್ಮದ್(ಸ)ರವರ ನಗು ಮುಗುಳ್ನಗೆಗೆ ಸೀಮಿತವಾಗಿತ್ತು.

ಹ. ಆಯಿಶಾ(ರ) ನುಡಿದಿರುವರು: " ಪ್ರವಾದಿ(ಸ) ತಮ್ಮ ಗಂಟಲು ಕಾಣುವಷ್ಟು ಜೋರಾಗಿ ನಗುವುದನ್ನು ನಾನು ಎಂದು ನೋಡಿಲ್ಲ".

ತಮಗೆ ವಿಶೇಷ ಮರ್ಯಾದೆ ನೀಡುವುದನ್ನು ಇಷ್ಟಪಡುತ್ತಿರಲಿಲ್ಲ.

ಹ. ಮುಹಮ್ಮದ್(ಸ)ರ ಅನುಯಾಯಿಗಳು ವ್ಯಾಪಾರಕ್ಕಾಗಿ ಸಿರಿಯಾ, ಇರಾಕ್, ಈಜಿಪ್ಟ್ ಮೊದಲಾದ ದೇಶಗಳಿಗೆ ತೆರಳುತ್ತಿದ್ದರು. ಆ ದೇಶಗಳ ಜನರು ಧಾರ್ಮಿಕ ಮುಖಂಡರ ಮುಂದೆ ಸಾಷ್ಟಾಂಗ ಮಾಡಿ ಅವರ ಪಾದಗಳನ್ನು ಚುಂಬಿಸಿ ಅವರಿಗೆ ಗೌರವವನ್ನು ಸಲ್ಲಿಸುತ್ತಿದ್ದರು. ಇದನ್ನು ಗಮನಿಸಿದ ಅನುಯಾಯಿಗಳು ಇದೇ ರೀತಿ ಪ್ರವಾದಿ(ಸ)ರಿಗೂ ಗೌರವ ಸಲ್ಲಿಸುವ ಅಭಿಲಾಷೆಯನ್ನು ಅವರ ಮುಂದೆ ವ್ಯಕ್ತ ಪಡಿಸಿದರು. ಆದರೆ ಪ್ರವಾದಿ(ಸ) ಈ ರೀತಿ ಮಾಡುವುದರಿಂದ ಅನುಯಾಯಿಗಳನ್ನು ಪ್ರತಿಬಂಧಿಸಿದರು.

ಸಭೆಯಲ್ಲಿ ಆಗಮಿಸಿದಾಗ ಗೌರವ ಸೂಚಕವಾಗಿ ಜನರು ಎದ್ದು ನಿಲ್ಲುವುದರಿಂದ ಪ್ರವಾದಿ(ಸ) ತಡೆದಿರುವರು. (ತಿರ್ಮಿದಿ, ಮುಂತಖಬ್ ಅಬ್ವಾಬ್ ಭಾಗ–1 ಪುಟ 778)

ಯಾರು ಈ ರೀತಿ ಗೌರವಿಸಲ್ಪಡುವುದನ್ನು ಬಯಸುತ್ತಾರೋ, ಅವರ ಪರ್ಯವಸಾನ ನರಕವಾಗಿರುವುದೆಂದು ಪ್ರವಾದಿ(ಸ) ನುಡಿದಿರುವರು.

ತಮ್ಮ ಗೋರಿಯ ಮೇಲೆ ಸ್ಮಾರಕವನ್ನು ನಿರ್ಮಿಸಿ ಅದನ್ನು ಆರಾಧನಾಲಯವನ್ನಾಗಿಸುವುದನ್ನು ಪ್ರವಾದಿ(ಸ) ನಿಷೇಧಿಸಿರುವರು. (ಬುಖಾರಿ, ಮುಸ್ಲಿಮ್, ಮಆರೂಫುಲ್ ಹದೀಸ್, ಭಾಗ–8 ಪುಟ 246)

ಪ್ರವಾದಿ(ಸ) ಈ ರೀತಿ ನುಡಿದಿರುವುದಾಗಿ ಹ. ಉಮರ್(ರ) ವರದಿ ಮಾಡಿರುವರು:

" ಕ್ರೈಸ್ತರು ಪ್ರವಾದಿ ಯೇಸು ಕ್ರಿಸ್ತರನ್ನು ಹೊಗಳಿ (ಅವರನ್ನು ದೇವ ಪುತ್ರರನ್ನಾಗಿಸಿ)ದಂತೆ ನನ್ನನ್ನು ಹೊಗಳ ಬೇಡಿ. ನಾನು ಅಲ್ಲಾಹನ ದಾಸನಾಗಿದ್ದು ನನ್ನನ್ನು ಅಲ್ಲಾಹನ ದಾಸ ಹಾಗು ಅಲ್ಲಾಹನ ಪ್ರವಾದಿಯಾಗಿ ಪರಿಗಣಿಸಿರಿ".

(ಬುಖಾರಿ, ಮುಸ್ಲಿಮ್, ಮುಂತಖಬ್ ಅಬ್ವಾಬ್ ಭಾಗ–1, ಪುಟ 965)

ಹ. ಮುಹಮ್ಮದ್(ಸ) ಸಮಾಜದಲ್ಲಿ ಪ್ರೀತಿ ಮತ್ತು ಶಾಂತಿಯನ್ನು ಬಯಸಿದ್ದರು.

ಅಲ್ಲಾಹ್ ಪವಿತ್ರ ಕುರ್ಆನ್‌ನಲ್ಲಿ ಹೇಳಿರುವನು:

" ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು ಮತ್ತು ಸ್ತ್ರೀಯರು ಇತರ ಸ್ತ್ರೀಯರನ್ನು ಪರಿಹಾಸ್ಯಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು . ಪರಸ್ಪರರನ್ನು ನಿಂದಿಸ ಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ

ಹೆಸರಿನಿಂದ ಕರೆಯ ಬೇಡಿರಿ" (ಕುರ್‌ಆನ್ 49:11)

........................

......................

ಪ್ರವಾದಿ(ಸ) ಅನುಯಾಯಿಗಳ ಲೋಪ ದೋಷಗಳನ್ನು ತಮಗೆ ತಿಳಿಸುವುದರಿಂದ ಅನುಯಾಯಿಗಳಿಗೆ ತಡೆದಿದ್ದರು. ಅವರು ನುಡಿದರು " ವ್ಯಕ್ತಿಯ ಬಗ್ಗೆ ನನ್ನ ಹೃದಯದಲ್ಲಿ ಯಾವುದೇ ಕಲ್ಮಶವಿರಬಾರದೆಂದು ನಾನು ಬಯಸುತ್ತೇನೆ"

(ಅಬೂ ದಾವೂದ್, ಝಾದೆ ರಾಹ್ ಪುಟ 237)

ಇತರರ ಲೋಪದೋಷಗಳ ಅನ್ವೇಷಣೆ ಮಾಡುವುದನ್ನು ಪ್ರವಾದಿ(ಸ) ನಿಷೇಧಿಸಿದ್ದರು. (ಬುಖಾರಿ, ಮುಸ್ಲಿಮ್, ಮಅ್‌ರೂಫುಲ್ ಹದೀಸ್ ಭಾಗ–2 ಪುಟ 212)

ಪ್ರವಾದಿ(ಸ) ನುಡಿದಿರುವರು: ಪ್ರತಿಯೋರ್ವ ವ್ಯಕ್ತಿಯ ಪ್ರಾಣ, ಸಂಪತ್ತು ಮತ್ತು ಘನತೆ ಮಕ್ಕಾ ಪಟ್ಟಣ ಮತ್ತು ಹಜ್ಜ್‌ನಂತೆ ಪವಿತ್ರವಾಗಿದೆ. ಆದುದರಿಂದ ಪ್ರತಿಯೊಬ್ಬರು ಇತರರ ಪ್ರಾಣ, ಸಂಪತ್ತು ಮತ್ತು ಘನತೆಯನ್ನು ರಕ್ಷಿಸಬೇಕು. (ಪ್ರವಾದಿ(ಸ)ರ ವಿದಾಯ ಭಾಷಣ)

ಹ. ಆಯಿಶಾ(ರ) ವರದಿ ಮಾಡಿರುವರು: ಪ್ರವಾದಿ(ಸ) ಯಾವುದೇ ವ್ಯಕ್ತಿಯ ಲೋಪ ದೋಷಗಳ ಬಗ್ಗೆ ಅವರ ಗಮನಕ್ಕೆ ತಂದಾಗ ವ್ಯಕ್ತಿಯನ್ನು ಕರೆಸಿ ಆತನನ್ನು ಗದರಿಸುತ್ತಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮಸೀದಿಯಲ್ಲಿ ಪ್ರವಚನ ನೀಡುತ್ತಿದ್ದರು. ಈ ರೀತಿ ಜನ ಸಾಮಾನ್ಯರಿಗೂ ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ದೊರಕುತ್ತಿತ್ತು ಮತ್ತು ಸಂಬಂಧಿಸಿದ ವ್ಯಕ್ತಿಗೂ ತನ್ನ ತಪ್ಪಿನ ಅರಿವಾಗುತ್ತಿತ್ತು.

ಹ. ಹಂಝುಲ ನುಡಿದಿರುವರು: ಪ್ರತಿಯೋರ್ವ ವ್ಯಕ್ತಿಯನ್ನು ಆ ವ್ಯಕ್ತಿ ಬಯಸುವ ಒಳ್ಳೆಯ ಹೆಸರಿನಿಂದ ಕರೆಯ ಬೇಕೆಂದು ಪ್ರವಾದಿ(ಸ) ಇಚ್ಛಿಸುತ್ತಿದ್ದರು. (ಅದಾಬುಲ್ ಮುಫರ್ರದ್)

ಸಮಾಜದಲ್ಲಿ ಪ್ರೀತಿ ಮತ್ತು ವಿಶ್ವಾಸವನ್ನು ಹೆಚ್ಚಿಸಲು ಪ್ರತಿಯೊಬ್ಬರು ಪರಸ್ಪರರಿಗೆ ಸಲಾಮ್ ಹೇಳಬೇಕೆಂದು ಪ್ರವಾದಿ(ಸ) ಆದೇಶಿಸಿದ್ದರು. (ಮುಸ್ಲಿಮ್, ಮುಂತಖಬುಲ್ ಅಬ್ವಾಬ್ ಭಾಗ–2, ಪುಟ 391)

ಪ್ರವಾದಿ(ಸ) ಯಾವಾಗಲೂ ಸಲಾಮ್ ಹೇಳುವುದರಲ್ಲಿ ಮೊದಲಿಗರಾಗಿರುತ್ತಿದ್ದರು. ಯಾರು ಸಲಾಮ್ ಮೊದಲು ನುಡಿಯುತ್ತಾರೋ, ಅವರಲ್ಲಿ ಅಹಂಕಾರ ಬೆಳೆಯುವುದಿಲ್ಲ ಎಂದು ಪ್ರವಾದಿ(ಸ) ನುಡಿದಿರುವರು. (ಬೈಹಕಿ, ಮುಸ್ಲಿಮ್, ಮುಂತಖಬುಲ್ ಅಬ್ವಾಬ್ ಭಾಗ–1 ಪುಟ 403)

ಪ್ರವಾದಿ(ಸ) ಮಹಿಳೆಯರಿಗೂ, ಮಕ್ಕಳಿಗೂ ಸಲಾಮ್ ಹೇಳುತ್ತಿದ್ದರು. (ಅಹ್ಮದ್, ಮುಂತಖಬುಲ್ ಅಬ್ವಾಬ್ ಭಾಗ–1 ಪುಟ 402)

ಪ್ರವಾದಿ(ಸ)ರ ಬಗ್ಗೆ ನಮ್ಮ ಕರ್ತವ್ಯ.

ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸಲಿಕ್ಕಾಗಿತಮ್ಮ ಜೀವನವನ್ನು ಮುಡುಪಾಗಿಟ್ಟರು. ಇದರ ಬದಲಿಗೆ ಜನರಿಂದ ಏನನ್ನೂ ಅಪೇಕ್ಷಿಸಲಿಲ್ಲ. ಆದುದರಿಂದ ಪ್ರವಾದಿ(ಸ)ರ ಹೆಸರು ಪ್ರಸ್ತಾಪವಾದಾಗ ನಾವು "ಅಲ್ಲಾಹ್! ಪ್ರವಾದಿ(ಸ)ರನ್ನು ಮತ್ತು ಅವರ ಕುಟುಂಬದವರನ್ನು ಅನುಗ್ರಹಿಸು" ಎಂದು

ಪ್ರಾರ್ಥಿಸಬೇಕು. ಪ್ರವಾದಿ(ಸ)ರಿಗೆ ಕೃತಜ್ಞತೆ ಸಲ್ಲಿಸುವ ಇದು ಕನಿಷ್ಟ ಕ್ರಮವಾಗಿದೆ. ಈ ರೀತಿ ಪ್ರಾರ್ಥಿಸುವುದನ್ನು 'ದರೂದ್' ಎನ್ನುತ್ತಾರೆ.

ಪ್ರವಾದಿ(ಸ)ರಿಗೆ ದರೂದ್ ಕಳುಹಿಸಬೇಕೆಂದು ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಆದೇಶಿಸಿರುವನು.

" ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ಮಲಕ್‌ಗಳು (ದೇವಚರರು) ಪ್ರವಾದಿಯವರಿಗೆ 'ಸಲಾತ್' (ಸ್ವಸ್ತಿ ವಚನ) ಹೇಳುತ್ತಾರೆ. ಸತ್ಯವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಿರಿ. (ಕುರ್‌ಆನ್ 33: 56)

ಹ. ಜಿಬ್ರೀಲ್(ಅ) ಪ್ರವಾದಿ(ಸ) ಮತ್ತು ಅವರ ಕುಟುಂಬದವರಿಗೆ ದರೂದ್ ಕಳುಹಿಸದವರನ್ನು ಶಪಿಸಿರುವರು. ಹ. ಮುಹಮ್ಮದ್(ಸ)ರ ಹೆಸರು ಪ್ರಸ್ತಾಪವಾದಾಗಲೆಲ್ಲಾ ದರೂದ್ ಕಳುಹಿಸುವ ಸುಲಭ ವಿಧಾನ " ಸಲ್ಲಲ್ಲಾಹು ಅಲೈಹಿವಸಲ್ಲಮ್' ಎಂದು ಹೇಳುವುದಾಗಿದೆ. ಇದರ ಅರ್ಥ "ಅಲ್ಲಾಹ್ ಪ್ರವಾದಿ(ಸ) ಮತ್ತು ಅವರ ಕುಟುಂಬದವರನ್ನು ಅನುಗ್ರಹಿಸು" ಎಂಬುದಾಗಿದೆ.

ಪ್ರವಾದಿ(ಸ)ರವರ ಹೆಸರಿನ ಮುಂದೆ (ಸ) ಎಂದು ಬರೆಯಲಾಗುತ್ತದೆ. ಸಲ್ಲಲ್ಲಾಹು ಅಲೈಹಿವಸ್ಸಲಾಮ್‌ನ ಸಂಕ್ಷಿಪ್ತ ರೂಪ (ಸ) ಆಗಿದೆ.

ಪ್ರವಾದಿ(ಸ)ರೊಂದಿಗೆ ಮಾತನಾಡುವಾಗ ಗೌರವಪೂರ್ವಕವಾಗಿ ಮತ್ತು ಕೆಳಸ್ವರದಲ್ಲಿ ಮಾತನಾಡಬೇಕು ಎಂದು ಅಲ್ಲಾಹ್ ಆದೇಶಿಸಿರುವನು.

" ಸತ್ಯವಿಶ್ವಾಸಿಗಳೇ, ನಿಮ್ಮ ಧ್ವನಿಯನ್ನು ಪ್ರವಾದಿವರ್ಯರ(ಸ)ರ ಧ್ವನಿಗಿಂತ ಎತ್ತರಿಸಬೇಡಿರಿ ಮತ್ತು ನೀವು ಪರಸ್ಪರರೊಡನೆ ಮಾತನಾಡುವಂತೆ ಪ್ರವಾದಿವರ್ಯ(ಸ)ರೊಡನೆ ಉಚ್ಛ ಸ್ವರದಿಂದ ಮಾತನಾಡಬೇಡಿರಿ ನಿಮಗೆ ಅರಿವೇ ಇಲ್ಲದಂತೆ ನಿಮ್ಮ ಕರ್ಮಗಳೆಲ್ಲವೂ ನಷ್ಟವಾಗಬಿಡದಿರಲಿ" (ಕುರ್‌ಆನ್ 49: 2–3)

ಈ ರೀತಿ ಮಾಡದಿದ್ದರೆ ವ್ಯಕ್ತಿಯ ಎಲ್ಲಾ ಪುಣ್ಯಫಲಗಳು ನಾಶವಾಗುವವು.

ಪ್ರವಾದಿ(ಸ) ಉತ್ಕೃಷ್ಟ ಶಿಕ್ಷಕರಾಗಿದ್ದರು.

ಮೈಕಲ್. ಎಚ್. ಹಾರ್ಟ್ ವಿಶ್ವ ವಿಖ್ಯಾತ ಪುಸ್ತಕ "........... " ರಚಿಸಿರುವರು ಲೇಖಕರು ಕ್ರೈಸ್ತ ಧರ್ಮಕ್ಕೆ ಸೇರಿದವರು. ಆದರೂ ಜಗತ್ತಿನಲ್ಲಿ ಅತ್ಯಧಿಕ ಪ್ರಭಾವ ಬೀರಿರುವ ವ್ಯಕ್ತಿಯ ಪ್ರಥಮ ಸ್ಥಾನವನ್ನು ಹ. ಮುಹಮ್ಮದ್(ಸ)ರಿಗೆ ನೀಡಿರುವರು. ಇದಕ್ಕೆ ಕಾರಣವನ್ನು ಅವರು ಹೇಳಿರುವುರು: " ಹ. ಮುಹಮ್ಮದ್(ಸ)ರ ಬಳಿ ಸಂಪತ್ತು, ಅಧಿಕಾರ, ಶಿಕ್ಷಣ, ಸೇನೆ ಮೊದಲಾದವುಗಳು ಇರಲಿಲ್ಲ. ಆದರೂ ಅವರು 23 ವರ್ಷಗಳ ನಿರಂತರ ಹೋರಾಟದ ಮೂಲಕ ಜಗತ್ತಿನಲ್ಲಿ ಅತ್ಯಧಿಕ ಪ್ರಭಾವ ಬೀರಿರುವರು. ಇದು ಬಹಳ ವಿಸ್ಮಯಕಾರಿಯಾಗಿದೆ".

ಹ. ಮುಹಮ್ಮದ್(ಸ)ರ ವಾಕ್ಯಗಳು ಸಂಕ್ಷಿಪ್ತವಾಗಿರುತ್ತಿದ್ದವು ಮತ್ತು ಬಹಳ ಪ್ರಭಾವ ಪೂರ್ಣವಾಗಿರುತ್ತಿದ್ದವು. ಪ್ರವಾದಿ(ಸ) ನುಡಿದಂತೆ ನಡೆಯುತ್ತಿದ್ದರು. ಈ ಕಾರಣದಿಂದ ಪ್ರವಾದಿ(ಸ)ರ ಮಾತುಗಳು ಜನರ ಮೇಲೆ ಅತ್ಯಧಿಕ ಪ್ರಭಾವವನ್ನು ಬೀರುತ್ತಿದ್ದವು ಇದರ ಕೆಲ ಉದಾಹರಣೆಗಳು ಈ ರೀತಿ ಇದೆ.

ಪ್ರವಾದಿ(ಸ) ಜನರಿಗೆ 5 ಹೊತ್ತಿನ ನಮಾಝ್

ನಿರ್ವಹಿಸುವಂತೆ ಆದೇಶಿಸುತ್ತಿದ್ದರು, ಆದರೆ ಸ್ವತಃ ಪ್ರತಿದಿನ 8 ಸಲ ನಮಾಝ್ ನಿರ್ವಹಿಸುತ್ತಿದ್ದರು. (5 ಕಡ್ಡಾಯ ನಮಾಝ್ ಜೊತೆಗೆ ತಹಜ್ಜುದ್, ಇಶ್‌ರಾಖ್ ಮತ್ತು ಚಾಸ್ತ್ ನಮಾಝ್)

ಪ್ರವಾದಿ(ಸ) ಜನರಿಗೆ ದಾನವನ್ನು ನೀಡಲು ಹೇಳುತ್ತಿದ್ದರು. ಆದರೆ ದಾನವನ್ನು ನೀಡುವಾಗ ತಮ್ಮ ಕುಟುಂಬದವರಿಗೂ ಉಳಿಸಲು ಸಲಹೆ ನೀಡುತ್ತಿದ್ದರು. ಆದರೆ ಸ್ವತಃ ದಾನವನ್ನು ಮಾಡುವಾಗ ತಮಗಾಗಿ ಏನನ್ನು ಉಳಿಸುತ್ತಿರಲಿಲ್ಲ.

ಪ್ರವಾದಿ(ಸ) ಜನರಿಗೆ ರಮಝಾನ್ ತಿಂಗಳ ಆ ಉಪವಾಸವನ್ನು ಆಚರಿಸಲು ಆದೇಶಿಸುತ್ತಿದ್ದರು. ಆದರೆ ಸ್ವತಃ ರಮಝಾನ್ ಉಪವಾಸಗಳ ಜೊತೆಗೆ ಅನೇಕ ಐಚ್ಛಿಕ ಉಪವಾಸಗಳನ್ನು ನಿರ್ವಹಿಸುತ್ತಿದ್ದರು.

ಮದೀನಾದಲ್ಲಿ ಮಸ್ಜಿದ್ ನಬವಿ ನಿರ್ಮಾಣ ಕಾರ್ಯದಲ್ಲಿ ಅನುಯಾಯಿಗಳ ಜೊತೆಗೆ ಪ್ರವಾದಿ(ಸ) ಸಹ ಜತೆಗೂಡಿ ಕಟ್ಟಡ ಸಾಮಾಗ್ರಿಗಳನ್ನು ಹೊರಿದ್ದರು.

ಬದ್ರ್ ಯುದ್ಧದಲ್ಲಿ ಮುಸ್ಲಿಮರ ಸೇನೆಯಲ್ಲಿ ಸವಾರಿಗೆ ಒಂಟೆಗಳ ಕೊರತೆ ಇತ್ತು. ಮೂರು ಮೂರು ಜನರು ಸರದಿಯಂತೆ ಒಂಟೆ ಸವಾರಿ ಮಾಡುತ್ತಿದ್ದರು. ಪ್ರವಾದಿ ಮುಹಮ್ಮದ್(ಸ)ರವರು ಸಹ ಇತರರಂತೆ ತಮ್ಮ ಸರದಿಗಾಗಿ ಕಾಯುತ್ತಿದ್ದರು. ತಮ್ಮ ಸರದಿ ಬಂದಾಗ ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದರು. ಅನುಯಾಯಿಗಳು ಎಷ್ಟೇ ಒತ್ತಾಯಿಸಿದರೂ ಪ್ರವಾದಿ(ಸ) ತಮಗಾಗಿ ಒಂದು ಒಂಟೆಯನ್ನು ಕಾಯ್ದಿರಿಸಲಿಲ್ಲ. (ಮಿಷ್ಕಾತ್, ಝಾದೆ ರಾಹ್ ಪುಟ 235)

ಕಂದಕ ಯುದ್ಧದ ಸಮಯದಲ್ಲಿ ಪ್ರವಾದಿ(ಸ)ರವರು ಸಹ ಜನ ಸಾಮಾನ್ಯರ ಜೊತೆಗೂಡಿ ಮದೀನಾದ ಸುತ್ತ ಕಂದಕ ತೋಡುವಲ್ಲಿ ಪಾಲುಗೊಂಡಿದ್ದರು. ಈ ಸಂದರ್ಭದಲ್ಲಿ ಆಹಾರ ಸಾಮಾಗ್ರಿಗಳ ತೀವ್ರ ಕೊರತೆ ಉಂಟಾಗಿತ್ತು. ಪ್ರವಾದಿ(ಸ) ಇತರ ಜನರಂತೆ ಉಪವಾಸ ಇರಬೇಕಾಯಿತು.

ಪ್ರವಾದಿ(ಸ)ರ ದಿನ ನಿತ್ಯದ ಕಾರ್ಯಕ್ರಮ.

ಹ. ಮುಹಮ್ಮದ್(ಸ) ಪ್ರಾತಃಕಾಲ 3 ಘಂಟೆಗೆ ಎದ್ದು ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ನಂತರ ಮಸೀದಿಗೆ ತೆರಳಿ ಸಾಮೂಹಿಕವಾಗಿ ಫಜ್ರ್ ನಮಾಝ್ ನಿರ್ವಹಿಸುತ್ತಿದ್ದರು. ನಮಾಝ್ ನಂತರ ಸೂರ್ಯೋದಯದ ತನಕ ಮಸೀದಿಯಲ್ಲಿ ಪ್ರಾರ್ಥನಾ ನಿರತರಾಗುತ್ತಿದ್ದರು. ನಂತರ ಇಶ್ರಾಕ್ ನಮಾಝ್ ನಿರ್ವಹಿಸಿ ಮನೆಗೆ ತೆರಳುತ್ತಿದ್ದರು. ಮನೆಯಲ್ಲಿ ಕುಟುಂಬದವರಿಗೆ ಮನೆ ಕೆಲಸದಲ್ಲಿ ನೆರವಾಗುತ್ತಿದ್ದರು.

ಪ್ರವಾದಿ(ಸ) ಕೆಲವೊಮ್ಮೆ ಝುಹರ್ ನಮಾಝ್‌ನ ಮೊದಲು ಊಟ ಮಾಡುತ್ತಿದ್ದರು. ಮಧ್ಯಾಹ್ನ ಝುಹರ್ ನಮಾಝ್ ನಂತರ ಸ್ವಲ್ಪ ಕಾಲ ವಿಶ್ರಮಿಸುತ್ತಿದ್ದರು. ಸಾಯಂಕಾಲದಿಂದ ಇಶಾ ನಮಾಝಿನ ತನಕ ಪ್ರವಚನ ಬೋಧನೆ, ಆಡಳಿತ ಕಾರ್ಯಗಳಲ್ಲಿ ಅಥವಾ ಪ್ರಾರ್ಥನೆಯಲ್ಲಿ ನಿರತರಾಗಿರುತ್ತಿದ್ದರು. ಇಶಾ ನಮಾಝಿನ ಬಳಿಕ ಬೆಳಗ್ಗೆ ಬೇಗನೇ ಏಳಲು ಅನುವಾಗಲು ಬೇಗನೇ ಮಲಗುತ್ತಿದ್ದರು.

ಇದು ಪ್ರವಾದಿ(ಸ)ರ ದಿನಚರಿಯಾಗಿತ್ತು.

ಹ. ಮುಹಮ್ಮದ್(ಸ)ರ ರೂಪ.

ಅವರು ಮಧ್ಯಮ ಎತ್ತರ ಹೊಂದಿದ್ದರು. ಆದರೆ ಅನುಯಾಯಿಗಳ ನಡುವೆ ಎಲ್ಲರಿಗಿಂತ ಎತ್ತರದವರಾಗಿ ಕಾಣುತ್ತಿದ್ದರು.

(ತಿರ್ಮಿದಿ ಭಾಗ–1)

ಅವರು ಗೋಧಿವರ್ಣ ಹೊಂದಿದ್ದರು. (ತಿರ್ಮಿದಿ ಭಾಗ–1)

ಹ. ಅಲೀ(ರ) ಪ್ರವಾದಿಯವರ ವರ್ಣ ಬಿಳಿ ಮತ್ತು ಕೆಂಪು ಮಿಶ್ರಿತ ಆಕರ್ಷಕ ಮಿಶ್ರಣವಾಗಿತ್ತು. ಎಂದಿರುವರು.

(ಮುಸ್ನದ್ ಇಮಾಮ್ ಅಹ್ಮದ್ 944)

ಅವರ ತಲೆ ಕೂದಲು ನೇರವೂ ಅಲ್ಲ ಗುಂಗರವೂ ಅಲ್ಲದಂತಿತ್ತು. ಅವರ ತಲೆ ಕೂದಲು ಕಿವಿಯ ತೊಳೆಯ ತನಕವಿತ್ತು (ಭುಜದ ಮಟ್ಟಕ್ಕಿಂತ ಸ್ವಲ್ಪ ಕಡಿಮೆ). ಅವರು ಕೂದಲಿಗೆ ಎಣ್ಣೆಯನ್ನು ಬಳಸುತ್ತಿದ್ದರು. (ತಿರ್ಮಿದಿ)

63ನೇ ಪ್ರಾಯದಲ್ಲಿ ಕೇವಲ 23 ಕೂದಲುಗಳು ಮಾತ್ರ ಬಿಳಿ ವರ್ಣ ಹೊಂದಿದ್ದವು.

ಪ್ರವಾದಿ(ಸ)ರ ಕಣ್ಣುಗಳು ವಿಶಾಲವಾಗಿದ್ದವು. ಕಣ್ಣು ಕರಿ ಬಣ್ಣದಾಗಿದ್ದವು. ಹುಬ್ಬು ಉದ್ದವಾಗಿತ್ತು. ಪ್ರವಾದಿ(ಸ) ಕಣ್ಣಿಗೆ 'ಸುರ್ಮಾ' ಹಚ್ಚುತ್ತಿದ್ದರು. (ತಿರ್ಮಿದಿ)

ಅವರ ಕೈ ಮತ್ತು ಕಾಲುಗಳು ಮಾಂಸ ಖಂಡಗಳಿಂದ ತುಂಬಿದ್ದು, ರೇಷ್ಮೆಯಂತೆ ಮೃದುವಾಗಿದ್ದವು. (ತಿರ್ಮಿದಿ)

ಅವರ ಮುಖಾರವಿಂದ ಬಹುತೇಕ ಗುಂಡಾಗಿತ್ತು. (ತಿರ್ಮಿದಿ)

ಅವರ ಎದೆ ವಿಶಾಲವಾಗಿತ್ತು. ಅವರ ಭುಜಗಳು ಅಗಲವೂ, ಶಕ್ತಿಶಾಲಿಯೂ ಅಗಿದ್ದವು. ಅವರ ಹೊಟ್ಟೆಯು ಎದೆಯ ಮಟ್ಟಕ್ಕೆ ಸಮವಾಗಿತ್ತು. (ತಿರ್ಮಿದಿ)

ಪ್ರವಾದಿ(ಸ) ನಡೆಯು ಚುರುಕಾಗಿತ್ತು. ಇಳಿ ಜಾರಿನಲ್ಲಿ ನಡೆಯುವಂತೆ ಪ್ರವಾದಿ(ಸ) ಪ್ರತಿಯೊಂದು ಹೆಜ್ಜೆಯನ್ನು ಒತ್ತಿ ನಡೆಯುತ್ತಿದ್ದರು. (ತಿರ್ಮಿದಿ ಸಂಖ್ಯೆ 386)

ಅಲ್ಲಾಹ್ ಎಲ್ಲಾ ಪ್ರವಾದಿಗಳಿಗೂ ಆಕರ್ಷಕ ರೂಪವನ್ನು ನೀಡಿದ್ದನು. ಪ್ರವಾದಿ(ಸ) ಸಹ ಸುಂದರ ರೂಪವನ್ನು ಹೊಂದಿದ್ದರು. ಪ್ರವಾದಿ(ಸ)ರನ್ನು ಕಂಡ ಪ್ರಥಮ ನೋಟದಲ್ಲಿಯೇ ಜನರು ಅವರ ಕಡೆಗೆ ಆಕರ್ಷಿತರಾಗುತ್ತಿದ್ದರು. ಪ್ರವಾದಿ(ಸ)ರ ಸಮೀಪವಿರುವವರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಅವರನ್ನು ಪ್ರೀತಿಸುತ್ತಿದ್ದರು. (ಮಿಷ್ಕಾತ್ ಭಾಗ–5 ಪುಟ 373).

************

# ಮುಹಮ್ಮದ್(ಸ)ರ ಬೋಧನೆಗಳು

ಹ. ಮುಹಮ್ಮದ್(ಸ)ರ ವಚನಗಳನ್ನು ಮತ್ತು ಬೋಧನೆಗಳನ್ನು ಸಂಪೂರ್ಣವಾಗಿ ದಾಖಲಿಸಲಾಗಿದೆ. ಪ್ರವಾದಿ(ಸ)ರ ವಚನಗಳನ್ನು ದಾಖಲಿಸಲಿರುವುದನ್ನು ಹದೀಸ್ ಎನ್ನುತ್ತಾರೆ. ಬುಖಾರಿ, ಮುಸ್ಲಿಮ್, ಇಬ್ನ್ ಮಾಜ, ತಿರ್ಮಿದಿ, ಇಬ್ನ್ ದಾವೂದ್ ಮೊದಲಾದ ವಿಶ್ವ ವಿಖ್ಯಾತ ವಿದ್ವಾಂಸರು ಪ್ರವಾದಿ(ಸ)ರ ವಚನಗಳನ್ನು ದಾಖಲಿಸಿರುವರು.

ಕೆಳಗೆ ಕೆಲ ಪ್ರವಾದಿ ವಚನಗಳ ಸಾರಾಂಶವನ್ನು ನೀಡಲಾಗಿದೆ.

ವೈಯಕ್ತಿಕ ಜೀವನಕ್ಕೆ ಪ್ರವಾದಿ(ಸ)ರ ಬೋಧನೆ:

ನಿಮ್ಮ ಮಕ್ಕಳಿಗೆ ಉತ್ತಮ ಹೆಸರನ್ನು ಇಡಿ. ನಿರ್ಣಾಯಕ ದಿನದಂದು ಪ್ರತಿಯೊರ್ವರನ್ನು ಅವರ ಹೆಸರಿನಿಂದಲೇ ಕರೆಯಲಾಗುವುದು. (ಮುಸ್ನದ್ ಅಹ್ಮದ್, ಅಬೂ ದಾವೂದ್)

ಪ್ರತಿಯೋರ್ವ ಮುಸ್ಲಿಮನಿಗೆ ಶಿಕ್ಷಣವನ್ನು ಪಡೆಯುವುದು ಕಡ್ಡಾಯವಾಗಿದೆ. (ಇಬ್ನ್ ಮಾಜ)

ಜ್ಞಾನವನ್ನು ಸಂಪಾದಿಸಿರಿ. ಇದಕ್ಕಾಗಿ ನೀವು ಚೀನಾ ದೇಶಕ್ಕೆ ಪ್ರಯಾಣ ಬೆಳೆಸ ಬೇಕಾದರೂ ಸರಿ. (ಇಮಾಮ್ ಗಝ್ಝಾಲಿ, ಚೆಮೆಯ– ಯೆ– ಶಆದತ್)

(ಕ್ರಿ.ಪೂ. 300ರಿಂದ ಕ್ರಿ.ಶ.1000ವರೆಗೂ ಚೀನಾ ದೇಶ ಜ್ಞಾನಾರ್ಜನೆಯ ಕೇಂದ್ರವಾಗಿತ್ತು)

ಆರೋಗ್ಯವಂತರಾಗಿರಿ. ಏಕೆಂದರೆ ಆರೋಗ್ಯವಂತ ವ್ಯಕ್ತಿ ಸಮಾಜ ಸೇವೆಯನ್ನು ಮಾಡಬಲ್ಲನು. (ಮುಸ್ಲಿಮ್)

ಮಾತಾಪಿತರ ಸೇವೆಯನ್ನು ಮಾಡಿ ಸ್ವರ್ಗದ ಪ್ರತಿಫಲ ಪಡೆಯಿರಿ. ಯಾರು ಮಾತಾಪಿತರ ಸೇವೆಯನ್ನು ಮಾಡಿಯೂ ಸ್ವರ್ಗವನ್ನು ಪಡೆಯುವುದಿಲ್ಲವೇ ಅವರಂತಹ ನತದೃಷ್ಟರು ಯಾರು ಇಲ್ಲ.

ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ. ನಿಮ್ಮ ಮಕ್ಕಳೂ ನಿಮ್ಮೊಂದಿಗೆ ಉತ್ತಮ ರೀತಿಯಲ್ಲಿ ಪಡೆದುಕೊಳ್ಳುವರು. (ಮುಸ್‌ತದ್ರಕ್ 7258)

ಹೆತ್ತವರೊಂದಿಗೆ ವಿಧೇಯರಾಗಿರುವವರ ಆಯಸ್ಸನ್ನು ಅಲ್ಲಾಹ್ ವೃದ್ಧಿಸುವವನು. (ಕನ್‌ಝೂಲ್ ಅಮಾಲ್, 4568)

ಹೆತ್ತವರು ನಿಮ್ಮೊಂದಿಗೆ ಸಂತುಷ್ಟರಾಗಿರದಿದ್ದರೆ, ಅಲ್ಲಾಹನೂ ನಿಮ್ಮೊಂದಿಗೆ ಸಂತುಷ್ಟರಾಗಿರದಿದ್ದರೆ, ಅಲ್ಲಾಹನು ನಿಮ್ಮೊಂದಿಗೆ ಸಂತುಷ್ಟನಾಗುವುದಿಲ್ಲ. (ಶುಐಬುಕ್ ಈಮಾನ್ 7830)

ಹ. ಮುಹಮ್ಮದ್(ಸ) ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಅತ್ಯಂತ ಕಿರಿಯ ಪುತ್ರಿ ಬಂದಾಗಲೆಲ್ಲಾ ಅವರ ಹಣೆಯನ್ನು ಚುಂಬಿಸುತ್ತಿದ್ದರು.

ಯಾರು ಹಿರಿಯರನ್ನು ಗೌರವಿಸುವುದಿಲ್ಲವೋ ಮತ್ತು ಹಿರಿಯರನ್ನು ಪ್ರೀತಿಸುವುದಿಲ್ಲವೋ ಅವರು ಮುಸ್ಲಿಮರಲ್ಲ. (ತಿರ್ಮಿದಿ, ಅಬೂ

ದಾವೂದ್)

ಸಾಧ್ಯವಿದ್ದಲ್ಲಿ ಯುವಕರು ವಿವಾಹವಾಗಬೇಕು. ವಿವಾಹವು ಕೆಡುಕಿನ ಕಾರ್ಯಗಳಿಂದ ತಡೆಯುತ್ತದೆ. (ಇಬ್ನ್ ಮಾಜ ಭಾಗ–2, ಪುಟ20)

ಅತ್ಯಂತ ಕಡಿಮೆ ವೆಚ್ಚದಲ್ಲಿ ಮಾಡಲಾಗುವ ವಿವಾಹವೇ ಅತ್ಯುತ್ತಮ ವಿವಾಹವಾಗಿರುವುದು. (ಸುನನ್ ಅಹ್ಮದ್ 24529)

ಯಾರು ಯಾವ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುತ್ತಾರೋ, ಅವರ ಅಂತ್ಯವು ಅದರಲ್ಲಿಯೇ ಆಗುವುದು. (ತಿರ್ಮಿದಿ)

ಪುರುಷರು ತಮ್ಮ ದೃಷ್ಟಿಯನ್ನು ಕೆಳಗಿರಿಸಬೇಕು. (ಪರ ಸ್ತ್ರೀಯರತ್ತ ನೋಡಬಾರದು) (ಪವಿತ್ರ ಕುರ್‌ಆನ್ 24: 30)

ವಿಲಾಸಿ ಜೀವನದಿಂದ ದೂರವಿರಿ. ಏಕೆಂದರೆ ಅಲ್ಲಾಹನ ವಿಶೇಷ ಸೇವಕರು ವಿಲಾಸಿ ಜೀವನ ನಡೆಸುವುದಿಲ್ಲ. (ಮುಸ್ನದ್ ಅಹ್ಮದ್, ಮುಂತಖಬ್ ಅಬ್ವಾಬ್ ಭಾಗ–2, ಪುಟ 1317)

ಅಮಲು ಪದಾರ್ಥಗಳನ್ನು ಸೇವಿಸ ಬೇಡಿ (ಅಬೂ ದಾವೂದ್ 3676)

ಯಾವಾಗಲೂ ಸತ್ಯವನ್ನೇ ನುಡಿಯಿರಿ. ಇದರಿಂದ ನಿಮಗೆ ನಷ್ಟವಾದರೂ ಸರಿಯೆ ಏಕೆಂದರೆ ಯಶಸ್ಸು ಸತ್ಯದಲ್ಲಿ ಅಡಗಿದೆ. (ಕಂಝುಲ್ ಆಮಾಲ್ 6956)

ಅಲ್ಲಾಹನ ನಾಮದೊಂದಿಗೆ ಎಲ್ಲರೂ ಒಟ್ಟಾಗಿ ಊಟವನ್ನು ಸೇವಿಸಿರಿ. ಇದರಿಂದಾಗಿ ಆಹಾರದಲ್ಲಿ ಸಮೃದ್ಧಿ ಉಂಟಾಗುವುದು ಮತ್ತು ನಿಮಗೂ ಆನಂದ ಉಂಟಾಗುವುದು. (ಅಬೂ ದಾವೂದ್ 3764)

ಎಲ್ಲಕ್ಕಿಂತ ದೊಡ್ಡ ಗಂಡಾಂತರ ನಾಲಗೆಯಲ್ಲಿದೆ. (ತಿರ್ಮಿದಿ 2410)

ಹೆಚ್ಚಿನ ಜನರು ನಾಲಗೆಯ ದುರ್ಬಳಕೆಯಿಂದ ನರಕವನ್ನು ಪ್ರವೇಶಿಸುವರು.

ಯಾರೊ ಹೇಳಿದ ಮಾತನ್ನು ಸತ್ಯವೆಂದು ಪರಿಶೀಲಿಸದೇ ಅದನ್ನು ಇತರ ಜನರಲ್ಲಿ ಹರಡುತ್ತಾರೋ, ಅವರು ಸುಳ್ಳುಗಾರರೆಂದು ಸಾಬೀತಾಗಲು ಇದೇ ಕಾರಣವಾಗುತ್ತದೆ. (ಮುಸ್ಲಿಮ್, 8)

ಯಾವುದು ನಿಮ್ಮ ಅಂತರಾತ್ಮವನ್ನು ಚುಚ್ಚುತ್ತದೆ ಮತ್ತು ನೀವು ಅದನ್ನು ಇತರ ಜನರು ಅರಿಯಲು ಇಷ್ಟ ಪಡುವುದಿಲ್ಲವೇ ಅದೇ ಪಾಪಕಾರ್ಯವಾಗಿದೆ. (ಮುಸ್ಲಿಮ್ 6680)

ಯಾರು ಸತ್ಯದ ಅನ್ವೇಷಣೆಗಾಗಿ ದಾರವನ್ನು ಶ್ರಮಿಸುತ್ತಾರೋ, ಅಲ್ಲಾಹನು ಆತನಿಗೆ ಸ್ವರ್ಗದ ದಾರಿಯನ್ನು ಸರಳಗೊಳಿಸುತ್ತಾನೆ.

ನಿಮಗೆ ಇಷ್ಟ ವಿರುವುದನ್ನು ಇತರರಿಗೂ ಬಯಸಿದಾಗ ನೀವು ಪರಿಪೂರ್ಣ ಮುಸ್ಲಿಮರಾಗಿರುವಿರಿ.

(ಮುಸ್ನದ್ ಅಹ್ಮದ್, ತಿರ್ಮಿದಿ, ಮಾಅ್‌ರೂಫುಲ್ ಹದೀಸ್ ಭಾಗ–2, ಪುಟ239)

ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಪ್ರವಾದಿ(ಸ)ರ ಬೋಧನೆಗಳು ಈ ಜಗತ್ತು ಅಲ್ಲಾಹನ ಕುಟುಂಬವಾಗಿರುವುದು. ಜನರ ಸೇವೆ ಮಾಡುವವರನ್ನು ಅಲ್ಲಾಹ್ ಪ್ರೀತಿಸುವನು.

(ಮಿಷ್ಕಾತ್, ತರ್ಜುಮಾನೆ ಹದೀಸ್ ಭಾಗ–2 ಪುಟ 239)

ಅಲ್ಲಾಹ್ ಕೆಲ ಜನರನ್ನು ಇತರ ಜನರ

ಸೇವೆಗಾಗಿ ಸೃಷ್ಟಿಸುತ್ತಾನೆ. ಜನರು ತಮ್ಮ ಅಗತ್ಯಗಳಿಗೆ ಇಂತಹ ಜನರ ಬಳಿ ತೆರಳುತ್ತಾರೆ. ಈ ಜನರನ್ನು ಅಲ್ಲಾಹ್ ನಿರ್ಣಾಯಕ ದಿನದಂದು ಶಿಕ್ಷೆಯಿಂದ ರಕ್ಷಿಸುವನು. (ಕಂಜೂಲ್–ಆಮಾಲ್)

ಭೂಮಿಯ ಮೇಲಿರವವರ ಮೇಲೆ ಕರುಣೆ ತೋರಿರಿ. ಆಕಾಶದಲ್ಲಿರುವವನು ನಿಮ್ಮ ಮೇಲೆ ಕರುಣೆ ತೋರುತ್ತಾನೆ. (ಅಬೂ ದಾವುದ್, ತಿರ್ಮಿದಿ)

ನೆರೆಕರೆಯವರಿಗೆ ಕಿರುಕುಳ ಕೊಡುವವನು ಮುಸ್ಲಿಮನಲ್ಲ. (ಬಖಾರಿ)

ಅಲ್ಲಾಹನನ್ನು ಅಲ್ಲಾಹನ ಸಂದೇಶವಾಹಕರನ್ನು ಮತ್ತು ನಿಮ್ಮ ನಾಯಕರನ್ನು ಅನುಸರಿಸಿರಿ. (ಪವಿತ್ರ ಕುರ್‌ಆನ್ 4: 59)

ಜನರು ಅವರ ಗೆಳೆಯರಿಂದ ಗುರುತಿಸಲ್ಪಡುತ್ತಾರೆ. (ಅಬೂ ದಾವೂದ್, ತಿರ್ಮಿದಿ)

ಯಾವ ಸಮಾಜದಲ್ಲಿ ಎಲ್ಲಾ ವರ್ಗದ ಜನರೊಂದಿಗೆ ನ್ಯಾಯವನ್ನು ಪಾಲಿಸಲಾಗುವುದಿಲ್ಲವೋ, ಆ ಸಮಾಜದಲ್ಲಿ ಅಶಾಂತಿಯು ವ್ಯಾಪಕವಾಗುತ್ತದೆ. (ಮುವತ್ತ 1670)

ಜನರು ಹೇಗಿರುವರೋ ಅವರ ಆಡಳಿತಗಾರರೂ ಅದರಂತೆ ಇರುವರು. ಜನರು ಕೆಟ್ಟವರಾಗಿದ್ದರೆ, ಆಡಳಿತಗಾರರೂ ಕೆಟ್ಟವರಾಗಿರುತ್ತಾರೆ.

ಜನರು ಬಾಚಣಿಕೆಯ ಹಲ್ಲಿನಂತೆ ಇರುವರು. (ಜವಾಹಿರ್ ಹಿಕ್ಮತ್)

ಓ ಜನರೇ! ನೀವು ಅಲ್ಲಾಹನನ್ನು ಆರಾಧಿಸಿದರೆ ಆತನು ನಿಮ್ಮ ಜೀವನವನ್ನು ಸುಲಭಗೊಳಿಸುವನು ಮತ್ತು ನಿಮ್ಮ ಹೃದಯವನ್ನು ಸಂಪನ್ನಗೊಳಿಸುವನು. ನೀವು ಅಲ್ಲಾಹನ ಆರಾಧನೆಯನ್ನು ಕಡೆಗಣಿಸಿದರೆ ಅಲ್ಲಾಹ್ ನಿಮ್ಮ ಕಷ್ಟಗಳನ್ನು ಮತ್ತು ನಿಮ್ಮ ಬಡತನವನ್ನು ದೂರ ಮಾಡುವುದಿಲ್ಲ. (ಇಬ್ನ್ ಮಾಜ 40, ತಿರ್ಮಿದಿ 2466)

ಪ್ರವಾದಿ(ಸ) ನುಡಿದಿರುವರು: "ನಾನು ಪ್ರವಾದಿಗಳಲ್ಲಿ ಕೊನೆಯ ಪ್ರವಾದಿಯಾಗಿರುವೆನು. ನನ್ನ ನಂತರ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಈ ಕಾಲದ ನಂತರ ಪ್ರಳಯದ ದಿನದವರೆಗೆ ಯಾರು ಅಲ್ಲಾಹನು ಏಕೈಕನೆಂದು ಮತ್ತು ನಾನು ಪ್ರವಾದಿಯಾಗಿರುವೆನೆಂದು ವಿಶ್ವಾಸವಿಡುತ್ತಾರೋ, ಅವರು ಮುಕ್ತಿಯನ್ನು ಹೊಂದುವರು. (ಮುಸ್ಲಿಮ್, ಮುಂತಖಬ್ ಅಬ್ವಾಬ್ ಭಾಗ–1, ಪುಟ 70)

ಸಮುದ್ರದಲ್ಲಿ ಬೆರಳನ್ನು ಅದ್ದಿ ತೆಗೆದಾಗ ಬೆರಳಿಗೆ ಅಂಟಿಕೊಂಡಿರುವ ನೀರಿನಂತೆ ಮರಣೋತ್ತರ ಜೀವನಕ್ಕೆ ಇಹಲೋಕದ ಜೀವನವನ್ನು ಹೋಲಿಸಿದಾಗ, ಇಹಲೋಕದ ಜೀವನವು ನಶ್ವರವಾಗಿರುವುದು.

ಇಸ್ಲಾಮ್ ಸ್ವೀಕರಿಸಿದಾಗ, ಈ ಮೊದಲು ಮಾಡಿದ ಎಲ್ಲಾ ತಪ್ಪುಗಳನ್ನು ಅಲ್ಲಾಹ್ ಕ್ಷಮಿಸುವನು. (ಮುಸ್ಲಿಮ್, ಮುಂತಖಬ್ ಅಬ್ವಾಬ್ ಬಾಗ–1, ಪುಟ 80)

ಪ್ರವಾದಿ ಮುಹಮ್ಮದ್(ಸ) ನುಡಿದಿರುವರು: " ನೀವು ಅಲ್ಲಾಹನನ್ನು ಸಂತುಷ್ಟಗೊಳಿಸು ಬಯಸಿದರೆ, ಬಡವರ ಸೇವೆಯನ್ನು ಮಾಡಿರಿ. ಅವರ ಕಾರಣದಿಂದ ಅಲ್ಲಾಹ್ ನಿಮ್ಮನ್ನು ಸಿರಿವಂತರಾಗಿಸುವನು (ಅವರ ಸಹಾಯ ಮಾಡಲು) (ಅಹ್ಮದ್, ಅಬೂ ದಾವೂದ್, ತಿರ್ಮಿದಿ)

ಹ. ಅಬೂ ಉಮಾಮ(ರ) ಪ್ರವಾದಿ(ಸ) ನುಡಿದಿರುವುದಾಗಿ ವರದಿ ಮಾಡಿರುವರು: ನಿಮ್ಮ ನಿಲುವು ಸರಿಯಿದ್ದು (ತಪ್ಪು ಮಾಡಿದವರೊಡನೆ) ನೀವು ವಾಗ್ವಾದ ಮಾಡದಿದ್ದರೆ ಸ್ವರ್ಗದ ಬಳಿ ನಿಮಗೆ ಭವನದ ವಾಗ್ದಾನ ಮಾಡುತ್ತೇವೆ. ತಮಾಷೆಗಾಗಿಯೂ ನೀವು ಸುಳ್ಳನ್ನು ನುಡಿಯದಿದ್ದರೆ ಸ್ವರ್ಗದ ಒಳ ಭಾಗದಲ್ಲಿ ನಿಮಗೊಂದು ಭವನದ ವಾಗ್ದಾನ ಮಾಡುತ್ತೇನೆ. ಅತ್ಯುತ್ತಮ ನಡವಳಿಕೆವುಳ್ಳವರಿಗೆ ಸ್ವರ್ಗದ ಅತ್ಯುನ್ನತ ಸ್ಥಳದಲ್ಲಿ ನಿಮಗೆ ಭವನದ ವಾಗ್ದಾನ ಮಾಡುತ್ತೇವೆ.

(ಅಬೂ ದಾವೂದ್, ಹದೀಸ್ ನವವಿ ಪುಟ 353)

ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಪ್ರವಾದಿ(ಸ)ರ ಬೋಧನೆಗಳು

ಯಾವಾಗಲೂ ಸಕರಾತ್ಮಕ ಧೋರಣೆಯನ್ನು ಹೊಂದಿರಬೇಕು. ಪ್ರಳಯವು ಸಮೀಪದಲ್ಲಿದ್ದು ಕೈಯಲ್ಲಿ ಸಸಿ ಇದ್ದರೆ, ಸಸಿ ನೆಡಲು ತ್ವರೆ ಮಾಡಬೇಕು.

(ಆದಾಬ್ ಮುಫರ್ರದ್ ಉರ್ದು 479)

ಇಸ್ಲಾಮಿನ ಕಡ್ಡಾಯ ವಿಧಿಗಳ ನಂತರ, ಕುಟುಂಬದ ಪೋಷಣೆಗಾಗಿ ದುಡಿಯುವುದು ಕಡ್ಡಾಯವಾಗಿದೆ. (ತಬ್ರಾನಿ ಕಬೀರ್ 9651)

ಯಾರು ಕುಟುಂಬದ ಪಾಲನೆ ಪೋಷಣೆಗಾಗಿ ಧರ್ಮ ಸಮ್ಮತ ಆರಾಧನೆಯೆಂದು ಪರಿಗಣಿಸುವುದು. (ತಬ್ರಾನಿ)

ಅಲ್ಲಾಹನು ತನ್ನ ಅನುಗ್ರಹವನ್ನು 20 ಭಾಗಗಳಲ್ಲಿ ವಿಂಗಡಿಸಿರುವನು. 19 ಭಾಗಗಳನ್ನು ವ್ಯಾಪಾರದಲ್ಲಿ ಇಟ್ಟಿರುವನು ಮತ್ತು ಒಂದು ಭಾಗವನ್ನು ನೌಕರಿಯಲ್ಲಿ ಇಟ್ಟಿರುವನು.

(ಕಂಝಾಲ್ ಉಮ್ಮಲ್ 16/4 ರಖಮುಲ್ ಹದೀಸ್ 9354)

ಅಲ್ಲಾಹನು ಒಂದು ಮಾರ್ಗದಿಂದ ಜೀವನಾಧಾರವನ್ನು ನೀಡುತ್ತಿರುವಾಗ ಅನಾವಶ್ಯಕವಾಗಿ ಆ ಮಾರ್ಗವನ್ನು ತೊರೆಯಬಾರದು. ಆ ಮಾರ್ಗದಿಂದ ಅಗತ್ಯವಿದ್ದಷ್ಟು ಜೀವನಾಧಾರ ದೊರೆಯದಿದ್ದಲ್ಲಿ ಅಥವಾ ಇನ್ನೇನಾದರೂ ಸಮಸ್ಯೆಗಳಿದ್ದಲ್ಲಿ ಮಾತ್ರ ಅದನ್ನು ಪೂಜಿಸ ಬಹುದು. (ಇಬ್ನ್ ಮಾಜ ಕನ್‌ಝುಲ್ ಉಮ್ಮಲ್ 9266)

ನಿಮ್ಮ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ನಿಮ್ಮ ಸಹೋದರರಾಗಿರುವರು. ಅಲ್ಲಾಹ್ ಅವರನ್ನು ನಿಮ್ಮ ಸುಪರ್ದಿಯಲ್ಲಿ ನೀಡಿರುವನು. ನೀವು ತಿನ್ನುವುದನ್ನೇ ಅವರಿಗೂ ತಿನ್ನಿಸಿರಿ. ನೀವು ಧರಿಸುವ ಉಡುಪನ್ನೇ ಅವರಿಗೆ ಧರಿಸಲು ನೀಡಿ. ಅವರಿಗೆ ಕಷ್ಟಕರ ಕೆಲಸವನ್ನು ಮಾಡಲು ಹೇಳಿದ್ದರೆ ಆ ಕಾರ್ಯದಲ್ಲಿ ನೀವೂ ಅವರಿಗೆ ನೆರವಾಗಿ. (ಬುಖಾರಿ, ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ)

ಭೂಮಿಯ ಗರ್ಭದಲ್ಲಿ ಅಡಗಿರುವ ಖಜಾನೆಗಳಲ್ಲಿ ಜೀವನಾಧಾರವನ್ನು ಹುಡುಕಿರಿ. (ಕನ್‌ಝುಲ್ ಉಮ್ಮಲ್ ಭಾಗ–2 ಪುಟ 197)

ಕಾರ್ಮಿಕರ ಬೆವರು ಆರುವ ಮುನ್ನ ಅವರ ಮಜೂರಿಯನ್ನು ಅವರಿಗೆ ನೀಡಿ (ಇಬ್ನ್ ಮಾಜ)

ಯಾವುದೇ ಕಾರ್ಯವನ್ನು ನಿರ್ವಹಿಸಿದರೂ ಅದನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿರಿ. (ಮುಸ್ಲಿಮ್, ಹದೀಸ್ ನವವಿ ಸಂಖ್ಯೆ 365)

ಧರ್ಮ ಸಮ್ಮತ ರೀತಿಯಲ್ಲಿ ಸಂಪಾದಿಸಿರಿ. (ಮುಸ್ತದ್ರಕ್ ಹಕೀಮ್ 214)

ಮೋಸವನ್ನು ಮಾಡಬೇಡಿರಿ. (ಇಬ್ನ್ ಮಾಜ 2250)

ಒಮ್ಮೆ ಮೋಸ ಹೊಂದಿದ ನಂತರ ಪುನಃ ಮೋಸಕ್ಕೆ ಒಳಗಾಗದಿರಿ. (ಬುಖಾರಿ, ಮುಸ್ಲಿಮ್)

ನೀವು ಮಾರಿದ ವಸ್ತುವಿಗೆ ಗ್ಯಾರಂಟಿಯನ್ನು ಒದಗಿಸಿರಿ. (ಇಬ್ನ್ ಮಾಜ 2265)

ಯಾರಿಗೂ ನಷ್ಟವನ್ನು ಉಂಟುಮಾಡಿರಿ (ಇಬ್ನ್ ಮಾಜ 2248)

ಯಾರನ್ನು ದೂಷಿಸದಿರಿ (ಇಬ್ನ್ ಮಾಜ 3353)

ನಿಮ್ಮ ವಾಗ್ದಾನವನ್ನು ಪೂರ್ತಿಗೊಳಿಸಿರಿ (ಪವಿತ್ರ ಕುರ್‌ಆನ್ 5:1)

ತೂಕವನ್ನು ಮಾಡುವಾಗ ಸ್ವಲ್ಪ ಹೆಚ್ಚಾಗಿಯೇ ಅಳೆಯಿರಿ (ತಿರ್ಮಿದಿ 2305)

ಬಡ್ಡಿಯನ್ನು ತೆಗೆದುಕೊಳ್ಳಬೇಡಿ ಮತ್ತು ನೀಡಬೇಡಿ. ಬಡ್ಡಿ ವ್ಯವಹಾರದಲ್ಲಿ ಯಾರಿಗೂ ಸಹಕಾರ ನೀಡಬೇಡಿ (ಮಿಷ್ಕಾತ್)

ನಿಮ್ಮ ವ್ಯವಹಾರಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ. (ತಿರ್ಮಿದಿ, ಪವಿತ್ರ ಕುರ್‌ಆನ್ 2:282)

ಮರಗಳಲ್ಲಿ ಹಣ್ಣು ಬಿಡುವ ಮೊದಲು ಹಣ್ಣುಗಳ ವ್ಯಾಪಾರ ಮಾಡುವುದು ನಿಷಿದ್ಧವಾಗಿಎ. (ಇಬ್ನ್ ಮಾಜ 2268/ 2294)

ವಸ್ತುಗಳನ್ನು ಮಾರುವಾಗ ಒಂದೇ ದರವನ್ನು ನಿಗದಿ ಪಡಿಸಿರಿ. (ಇಬ್ನ್ ಮಾಜ 2281)

ಯಾವನೇ ವ್ಯಕ್ತಿಯ ದುಷ್ಪಯೋಜನೆ ಪಡೆಯಬೇಡಿ. (ಇಬ್ನ್ ಮಾಜ 2269)

ಕೇವಲ ನಿಮ್ಮ ಬಳಿ ಇರುವ ವಸ್ತುವಿನ ವ್ಯವಹಾರವಾಗಿದೆ.

ಕ್ಷೌರಿಕನ ಕಾರ್ಯವನ್ನು ಮಾಡಿದಿರಿ. (ಇಬ್ನ್ ಮಾಜ 2242)

ಜೀವಂತ ವಸ್ತುಗಳ ಚಿತ್ರವನ್ನು ಬಿಡಿಸ ಬೇಡಿ. (ಇಬ್ನ್ ಮಾಜ 2227)

ನಟನೆ ಮಾಡುವ ಕಾರ್ಯವನ್ನು ಮಾಡದಿರಿ. (ತಿರ್ಮಿದಿ, ಸಫೀನಾ ನಜಾತ್ 237)

ವ್ಯಭಿಚಾರದ ವ್ಯವಹಾರದಲ್ಲಿ ತೊಡಗದಿರಿ. (ಬುಖಾರಿ)

ಶರಾಬು, ಜೂಜಾಟ ಮತ್ತು ಜ್ಯೋತಿಷ್ಯ ಸಂಬಂಧಿತ ವ್ಯವಹಾರಗಳಲ್ಲಿ ತೊಡಗದಿರಿ.

ನೃತ್ಯ ಮತ್ತು ಹಾಡುಗಾರಿಕೆ ಸಂಬಂಧಿತ ವ್ಯವಹಾರಗಳಲ್ಲಿ ತೊಡಗದಿರಿ. (ಬುಖಾರಿ)

ಯಾರು ಕಳ್ಳತನ ಮಾಡಿರುವ ವಸ್ತುಗಳನ್ನು ಅದು ಕಳ್ಳತನದ ಮಾಲು ಎಂದು ಅರಿತೂ ಖರೀದಿಸುವರೋ ಅವರು ಕಳ್ಳತನದಲ್ಲಿ ಭಾಗಿಯಾಗಿರುವುದಕ್ಕೆ ಸಮವಾಗಿದೆ. (ಮುಸ್ತದ್ರಕ್ 2253)

ವ್ಯಾಪಾರ ಮತ್ತು ವಹಿವಾಟುಗಳಲ್ಲೇ ಸಂಪೂರ್ಣವಾಗಿ ಮಗ್ನರಾಗದಿರಿ. (ತಿರ್ಮಿದಿ) (ಕುಟುಂಬಕ್ಕೂ, ಸಮಾಜಕ್ಕೂ ಸ್ವಲ್ಪ ಸಮಯವನ್ನು ನೀಡಿ)

ಪಾಪ ಕಾರ್ಯಗಳನ್ನು ಮಾಡುವುದರಿಂದ ಅಲ್ಲಾಹ್ ಸಮೃದ್ಧಿಯನ್ನು ಕೊನೆಗೊಳಿಸುತ್ತಾನೆ. (ಮುಸ್ಲಿಮ್ 3721, ಇಬ್ನ್ ಮಾಜ ಮುಸ್ನದ್ ಅಹ್ಮದ್ 21881)

ರಾತ್ರಿ ತಡವಾಗಿ ಮಲಗುವುದರಿಂದ

ಜೀವನಾಧಾರದಲ್ಲಿ ಅಲ್ಲಾಹ್ ಕಡಿತಗೊಳಿಸುತ್ತಾನೆ. (ಮುಸ್ನದ್ ಅಹ್ಮದ್ ಭಾಗ–1 ಪುಟ73)

ಯಾವ ಸಂಪತ್ತಿಗೆ ಝಕಾತ್ ನೀಡಲಾಗುವುದಿಲ್ಲವೋ ಆ ಸಂಪತ್ತು ನಾಶದಲ್ಲಿರುವುದು. (ಮಿಶ್ಕಾತ್, ಸಫೀನಾ ನಜಾತ್, 60)

ಸಾಲ ಪಡೆಯುವುದನ್ನು ತಪ್ಪಿಸಿರಿ. ಸಾಲದಿಂದ ರಾತ್ರಿ ನಿದ್ರೆಯಿಂದ ವಂಚಿತರಾಗುವಿರಿ ಮತ್ತು ಹಗಲಿನಲ್ಲಿ ಅಪಮಾನಕ್ಕೆ ಗುರಿಯಾಗುವಿರಿ. (ಜವಾಹಿರ್ ಹಿಕ್ಮತ್)

ಯಾರು ಸಾಲವನ್ನು ಪಡೆದು ಸಾಲವನ್ನು ಪಾವತಿಸುವ ನಿರ್ಧಾರವನ್ನು ಮಾಡುತ್ತಾರೋ, ಅಲ್ಲಾಹನು ಆ ವ್ಯಕ್ತಿಗೆ ಸಾಲವನ್ನು ಮರು ಪಾವತಿಸಲು ಸಹಾಯ ಮಾಡುವನು, ಯಾರು ಸಾಲ ಮಾಡಿ ಅದನ್ನು ಮರು ಪಾವತಿಸುವ ಇರಾದೆ ಮಾಡುವುದಿಲ್ಲವೋ, ಅಲ್ಲಾಹ್ ಅಂತಹ ವ್ಯಕ್ತಿಗಳನ್ನು ನಾಶಗೊಳಿಸುವನು. (ಬುಖಾರಿ, ಮಅ್‌ರುಫುಲ್ ಹದೀಸ್ ಭಾಗ–2 ಪುಟ)

ಲಂಚ ಕೊಡುವವನನ್ನು ಮತ್ತು ಲಂಚ ಸ್ವೀಕರಿಸುವವನನ್ನು ಪ್ರವಾದಿ(ಸ) ಶಪಿಸಿರುವರು (ಅಬೂ ದಾವೂದ್, ತರ್ಜುಮಾನೆ ಹದೀಸ್ ಭಾಗ–1, ಪುಟ299)

ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರವಾದಿ(ಸ)ರ ಬೋಧನೆಗಳು:

ಹ. ಮುಹಮ್ಮದ್(ಸ) ಪುತ್ರಿಯರನ್ನು ಪ್ರೀತಿಸಲು ಬೋಧಿಸಿರುವರು. ಪುತ್ರಿಯರು ಹೆತ್ತವರನ್ನು ಮತ್ತು ಕುಟುಂಬದ ಸದಸ್ಯರನ್ನು ಬಹಳ ಪ್ರೀತಿಸುವುದಾಗಿ ಪ್ರವಾದಿ(ಸ) ನುಡಿದಿರುವರು (ಜವಾಮುಲ್ ಕಲಾಮ್)

" ಯಾರು ಪತ್ನಿಯೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುವರೋ, ಅವರೇ ನಿಮ್ಮಲ್ಲಿ ಅತ್ಯುತ್ತಮರು" ಎಂದು ಪ್ರವಾದಿ(ಸ) ನುಡಿದಿರುವರು. ( ತಿರ್ಮಿದಿ 1162)

"ಯಾರು ಇಬ್ಬರು ಪುತ್ರಿಯರನ್ನು ಉತ್ತಮ ರೀತಿಯಲ್ಲಿ ಪಾಲನೆ ಪೋಷಣೆ ಮಾಡಿ ವಿವಾಹ ಮಾಡಿ ಕೊಡವರೋ ಅವರು ಸ್ವರ್ಗದಲ್ಲಿ ನನ್ನೊಂದಿಗೆ ಇರುವರು" ಎಂದು ಪ್ರವಾದಿ(ಸ) ನುಡಿದಿರುವರು. (ಇಬ್ನ್ ಮಾಜ 3670)

ಪ್ರವಾದಿ(ಸ) ನುಡಿದಿರುವರು ಯಾರಿಗೆ ಓರ್ವ ಪುತ್ರಿ ಅಥವಾ ಓರ್ವ ಸಹೋದರಿ ಇದ್ದು ಆತನು ಅವರೊಂದಿಗೆ ತನ್ನ ಪುತ್ರರಂತೆಯೇ ನಡೆದು ಕೊಳ್ಳುವನೋ ಅಲ್ಲಾಹನು ಆ ವ್ಯಕ್ತಿಗೆ ಸ್ವರ್ಗ ದಯಪಾಲಿಸುವನು. (ಅಬೂ ದಾವೂದ್, 5146)

ಹ. ಮುಹಮ್ಮದ್(ಸ) ನುಡಿದಿರುವರು: "ನಿಮ್ಮ ಪತ್ನಿಗೆ ಒಳ್ಳೆಯ ಆಹಾರವನ್ನು ಮತ್ತು ಉಡುಪನ್ನು ನೀಡುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ". (ಮುಸ್ಲಿಮ್ 3721)

ಮಹಿಳೆಯರಿಗೆ ಸುಗಂಧವನ್ನು ಹಚ್ಚಿ, ಆಭರಣವನ್ನು ಧರಿಸಿ ಪುರುಷರನ್ನು ಆಕರ್ಷಿಸಲು ಮನೆಯ ಹೊರಗಡೆ ಹೋಗುವುದನ್ನು ನಿಷೇಧಿಸಿದೆ. (ಅಬೂ ದಾವೂದ್, ತಿರ್ಮಿದಿ)

(ಮಹಿಳೆಯರು ಮನೆಯೊಳಗೆ ಇದ್ದುಕೊಂಡು ಸುಗಂಧವನ್ನು ಹಚ್ಚಿಕೊಳ್ಳಬಹುದು ಮತ್ತು ಆಭರಣ ಧರಿಸಬಹುದು)

ಮಹಿಳೆಯರು ತಮ್ಮ ನೋಟವನ್ನು ಕೆಳಗಿರಿಸಬೇಕು. (ಪರ ಪುರುಷರ ಕಡೆಗೆ ನೋಡಬಾರದು), ತಮ್ಮ ಎದೆಯ ಭಾಗವನ್ನು ಮುಚ್ಚಬೇಕು ಮತ್ತು ತಮ್ಮ ಶೀಲವನ್ನು

ರಕ್ಷಿಸಿಕೊಳ್ಳಬೇಕು. (ಪವಿತ್ರ ಕುರ್‌ಆನ್ 24:31)

ಮಹಿಳೆಯರು ಹೊರ ಹೋಗುವಾಗ ತಮ್ಮನ್ನು ಉಡುಪಿನಿಂದ ಮರೆಮಾಚಿಕೊಳ್ಳಬೇಕು (ಪತಿವೃತ್ಯವುಳ್ಳ ಮಹಿಳೆಯರ ತರಹ)

ಈ ರೀತಿ ಪರ ಪುರುಷರು ಅವರಿಗೆ ಕಿರುಕುಳ ನೀಡುವುದಿಲ್ಲ. (ಪವಿತ್ರ ಕುರ್‌ಆನ್ 33:59)

ಸಮಾಜದಲ್ಲಿ ವಿಧವೆಯರ ಪುನರ್ ವಿವಾಹಕ್ಕೆ ಪ್ರೋತ್ಸಾಹ ನೀಡಬೇಕು. (ಪವಿತ್ರ ಕುರ್‌ಆನ್ 24:32)

ಹೆಣ್ಣು ಮಕ್ಕಳು ಮನೆಯೊಳಗೆ ಇರುವುದು ಶ್ರೇಯಸ್ಕರವಾಗಿದೆ. ಅಂಕೆಯಿಲ್ಲದೆ ಹೊರಗಡೆ ಓಡಾಡುವುದರಿಂದ ಅವರ ನಡವಳಿಕೆ ಕೆಡುತ್ತದೆ. ಕೆಟ್ಟ ನಡವಳಿಕೆಯ ಕಾರಣ ಅಪಮಾನಕ್ಕೆ ಗುರಿಯಾಗ ಬೇಕಾಗುತ್ತದೆ. (ಜವಾಹಿರ್ ಯೆ ಹಿಕ್ಮತ್)

ಮಾನವ ಕುಲಕ್ಕೆ ಪ್ರವಾದಿ ಮುಹಮ್ಮದ್(ಸ)ರ ಕೊನೆಯ ಸಂದೇಶ.

ಪ್ರವಾದಿ ಮುಹಮ್ಮದ್(ಸ) ವಿದಾಯ ಹಜ್ಜ್‌ನ ಸಂದರ್ಭದಲ್ಲಿ ಮಾಡಿದ ಭಾಷಣದ ಪ್ರಮುಖ ಅಂಶಗಳು ಹೀಗಿವೆ.

ಅಲ್ಲಾಹನು ಏಕೈಕನು. ಅಲ್ಲಾಹನಲ್ಲದೇ ಇನ್ನಾರೂ ಆರಾಧನೆಗೆ ಅರ್ಹರಿಲ್ಲ. ಆತನೊಂದಿಗೆ ಇತರ ಯಾರೂ ಭಾಗೀದಾರರಿಲ್ಲ. ಅಲ್ಲಾಹನು ತನ್ನ ವಾಗ್ದಾನವನ್ನು ಪೂರ್ಣಗೊಳಿಸಿರುವನು. ಆತನು ಎಲ್ಲಾ ಕೆಡುಕಿನ ಶಕ್ತಿಗಳನ್ನು ಸೋಲಿಸಿ, ನೈಜ ಧರ್ಮವನ್ನು ಸಂಸ್ಥಾಪಿಸಿರುವನು.

ಇವುಗಳನ್ನು ಸಮವಾಗಿ ನಿಯಂತ್ರಿಸಿಕೊಟ್ಟವನು ಪರಮ ಪಾವನನು ಅನ್ಯಥಾ ನಾವು ಇವುಗಳನ್ನು ಹತೋಟಿಗೆ ತರಲು ಶಕ್ತರಾಗಿರಲಿಲ್ಲ". (ಪವಿತ್ರ ಕುರ್‌ಆನ್ 43:13)

.........................

...........................

ಜನರೇ! ಇಂದು ಹಜ್ಜ್‌ನ ದಿನವಾಗಿದೆ. ಈ ಮಾಸ ಮತ್ತು ಮಕ್ಕಾ ಪಟ್ಟಣವು ಪವಿತ್ರವಾಗಿರುವಂತೆಯೇ, ಪರಸ್ಪರರ ಪ್ರಾಣ, ಸಂಪತ್ತು ಮತ್ತು ಘನತೆ ಪವಿತ್ರವಾಗಿರುವುದು.

ಜನರೇ! ನನ್ನ ನಂತರ ನನ್ನ ಬೋಧನೆಗಳನ್ನು ಮರೆಯಬೇಡಿ. ಪರಸ್ಪರರು ಹೊಡೆದಾಡಬೇಡಿ. ಎಲ್ಲಾ ಮುಸ್ಲಿಮರು ಸಹೋದರರಾಗಿರುವರು. ನಿಮ್ಮ ದೇವರ ಬಗ್ಗೆ ನಿಮಗೆ ಅನುಕಂಪವಿರಬೇಕು. ನೀವು ತಿನ್ನುವ ಆಹಾರವನ್ನು ಅವರಿಗೆ ನೀಡಬೇಕು ಮತ್ತು ನೀವು ಧರಿಸುವ ಉಡುಪನ್ನೇ ಅವರಿಗೆ ಧರಿಸಲು ಕೊಡಬೇಕು.

ಇಸ್ಲಾಮ್‌ನ ಆಗಮನಕ್ಕೆ ಮೊದಲು ಇದ್ದ ವಿವಿಧ ಗೋತ್ರಗಳ ಪಂಗಡಗಳ ದ್ವೇಷವನ್ನು ನಾನು ಕೊನೆಗೊಳಿಸುತ್ತೇನೆ. ಒಂದು ಕೊಲೆಯ ಕಾರಣ ನನ್ನ ಪಂಗಡ ತೆಗೆದುಕೊಳ್ಳಲಿದ್ದ ಪ್ರತೀಕಾರವನ್ನು ನಾನು ಕ್ಷಮಿಸಿದ್ದೇನೆ.

ಬಡ್ಡಿ ತೆಗೆದು ಕೊಳ್ಳುವುದನ್ನು ಮತ್ತು ಕೊಡುವುದನ್ನು ನಿಷೇಧಿಸಲಾಗಿದೆ.

ನನ್ನ ಚಿಕ್ಕಪ್ಪ ಹ. ಅಬ್ಬಾಸ್(ರ)ರಿಗೆ ಬರಬೇಕಿದ್ದ ಬಡ್ಡಿಯನ್ನು ನಾನು ಮನ್ನಾ ಮಾಡಿದ್ದೇನೆ.

ಓ ಜನರೇ, ಅಲ್ಲಾಹನು ಪ್ರತಿಯೋರ್ವರ ಹಕ್ಕನ್ನು ನಿರ್ಧರಿಸುವವನು. ಯಾರೂ ವಾರೀಸುದಾರರಿಗೆ ಆಸ್ತಿಯನ್ನುನೀಡಲು ಉಯಿಲು ಬರೆಯುವುದನ್ನು ನಿಷೇಧಿಸಿದೆ.

(ಅಲ್ಲಾಹ್ ಕುರ್‌ಆನ್‌ನಲ್ಲಿ ಎಲ್ಲಾ ಸಂಬಂಧಿಕರ ಹಕ್ಕನ್ನು ನಿರ್ಧರಿಸಿರುವನು. ಆದುದರಿಂದ ಯಾರೂ ತಮ್ಮ ಇಚ್ಛೆಯಂತೆ ನಿರ್ಧರಿಸಲು ಉಯಿಲು ಬರೆಯುವಂತಿಲ್ಲ.)

ಮಗು ತಂದೆಗೆ ಸೇರುತ್ತದೆ. (ಕಾನೂನು ಬದ್ಧ ತಂದೆ). ವ್ಯಭಿಚಾರಿಯನ್ನು ಕಲ್ಲೆಸೆದು ಕೊಲ್ಲಬೇಕು. ನಿರ್ಣಾಯಕ ದಿನದಂದು ನ್ಯಾಯ ಮಾಡಲಾಗುವುದು.

ಯಾರು ತಮ್ಮ ಗೋತ್ರದ ಬಗ್ಗೆ ತಪ್ಪು ಮಾಹಿತಿ ನೀಡುವರೋ ಆ ಜನರ ಮೇಲೆ ಅಲ್ಲಾಹನ ಶಾಪವಿದೆ.

ಸಾಲವನ್ನು ಮರಳಿಸಿರಿ.

ಸಾಲವಾಗಿ ಪಡೆದ ವಸ್ತುವನ್ನು ಮರಳಿಸಬೇಕು.

ಉಡುಗೊರೆಯನ್ನು ಪಡೆದ ಬಳಿಕ ಉಡುಗೊರೆಯನ್ನು ನೀವೂ ನೀಡಬೇಕು.

ನೀವು ಯಾರಿಗಾದರೂ ಜಾಮೀನು ನೀಡಿದ್ದರೆ, ಅದರ ಷರತ್ತುಗಳನ್ನು ಪೂರ್ಣಗೊಳಿಸಬೇಕು.

ಯಾರಿಂದಲೂ ಏನನ್ನೂ ಒತ್ತಾಯ ಪೂರ್ವಕವಾಗಿ ತೆಗೆದುಕೊಳ್ಳಬಾರದು.

ಯಾರೊಂದಿಗೂ ಅನ್ಯಾಯವನ್ನು ಮಾಡಬೇಡಿರಿ.

ಓರ್ವ ನಿಗ್ರೋ ನಿಮ್ಮ ಆಡಳಿತಗಾರನಾಗಿ ಇಯುಕ್ತಿಗೊಂಡಿದ್ದು, ಆತನು ಅಲ್ಲಾಹನ ಬೋಧನೆಗಳಿಗೆ ವಿರುದ್ಧ ನಿಮಗೆ ಆದೇಶ ನೀಡಿದ್ದರೆ, ಆತನ ಆದೇಶಗಳನ್ನು ಪಾಲಿಸುವುದು ನಿಮಗೆ ಕಡ್ಡಾಯವಾಗುತ್ತದೆ.

ನನ್ನ ನಂತರ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ನೀವು ಅಂತಿಮ ಸಮುದಾಯವಾಗಿರುವಿರಿ.

ಪತಿಯ ಅನುಮತಿ ಇಲ್ಲದೇ ಆತನ ಸಂಪತ್ತಿನಿಂದ ಯಾರಿಗೂ ಏನನ್ನಾದರೂ ನೀಡುವುದು ಪತ್ನಿಗೆ ಧರ್ಮಸಮ್ಮತವಲ್ಲ.

ಪತಿಗೆ ಪತ್ನಿಯ ಮೇಲೆ ಕೆಲ ಹಕ್ಕುಗಳಿವೆ. ಪತ್ನಿಗೆ ಪತಿಯ ಮೇಲೆ ಕೆಲ ಹಕ್ಕುಗಳಿವೆ. ವ್ಯಭಿಚಾರ ಮಾಡದಿರುವುದು ಮತ್ತು ಪತಿ ಬಯಸದ ವ್ಯಕ್ತಿಗಳನ್ನು ಮನೆಗೆ ಬರಮಾಡಿಕೊಳ್ಳದಿರುವುದು ಪತ್ನಿಯ ಕರ್ತವ್ಯವಾಗಿದೆ.

ಪತ್ನಿಯು ತಪ್ಪು ಎಸಗಿದರೆ, ಆಕೆಗೆ ಲಘುವಾಗಿ ಶಿಕ್ಷಿಸಬೇಕು. ಆಕೆ ಸರಿ ದಾರಿಗೆ ಬರಲೂ ಬಹುದು. ವಿವಾಹದ ನಂತರವಷ್ಟೇ ಸ್ತ್ರೀ, ಪುರುಷರ ನಡುವೆ ದೈಹಿಕ ಸಂಪರ್ಕ ವೇರ್ಪಡಬೇಕು. ಪತಿ ಪತ್ನಿಯರು ವೈವಾಹಿಕ ಜೀವನದಲ್ಲಿ ಅಲ್ಲಾಹನ ಆದೇಶಗಳನ್ನು ಪಾಲಿಸಬೇಕು.

ಯಾರು ದೌರ್ಜನ್ಯವನ್ನು ಎಸಗುತ್ತಾರೋ, ಶಿಕ್ಷೆಯನ್ನು ಅವರಿಗೇ ನೀಡಬೇಕು. ತಂದೆಯ ತಪ್ಪಿಗೆ ಮಗನಿಗೆ ಶಿಕ್ಷೆಯನ್ನು ನೀಡಬಾರದು ಮತ್ತು ಮಗನ ತಪ್ಪಿಗೆ ಮಗನಿಗೆ ಶಿಕ್ಷೆಯನ್ನು ನೀಡಬಾರದು ಮತ್ತು ಮಗನ ತಪ್ಪಿಗೆ ತಂದೆಗೆ ಶಿಕ್ಷೆಯನ್ನು ನೀಡಬಾರದು.

ಪ್ರವಾದಿ(ಸ) ನುಡಿದಿರುವರು. ಓ ಜನರೇ! ಮೂರು ವಿಷಯಗಳು ಹೃದಯವನ್ನು ಪರಿಶುದ್ಧಿ ಮತ್ತು ಸ್ವಚ್ಛಚಾಗಿ ಇಡುತ್ತವೆ.

1) ನಿಮ್ಮ ಎಲ್ಲಾ ಕಾರ್ಯಗಳಲ್ಲಿ ಪ್ರಾಮಾಣಿಕರಾಗಿರಬೇಕು.

2) ನಿಮ್ಮ ಎಲ್ಲಾ ಒಳಿತಾಗುವಂತಹ ಕಾರ್ಯಗಳನ್ನೇ ಮಾಡಬೇಕು.

3) ಸೌಹಾರ್ದಯುತ ಸಂಬಂಧಗಳನ್ನು

ಹೊಂದಿರಿ.

ಜನರೇ! ವರ್ಷಧ ತಿಂಗಳುಗಳನ್ನು ಮುಂದೂಡಬೇಡಿರಿ ಅಥವಾ ಹಿಂದೂಡಬೇಡಿರಿ. ಚಂದ್ರಮಾನ ತಿಂಗಳುಗಳ ದಿನದಲ್ಲಿ ಹೆಚ್ಚಳ ಮಾಡಿ ಅದನ್ನು ಸೂರ್ಯಮಾನ ಕ್ಯಾಲೆಂಡರಿನ ಸರಿಸಮಾನ ಮಾಡಬೇಡಿ.

ಜನರೇ, ನಾನು ಎರಡು ವಸ್ತುಗಳನ್ನು ನಿಮ್ಮ ನಡುವೆ ಬಿಟ್ಟು ತೆರಳುತ್ತಿದ್ದೇನೆ. ಕುರ್‌ಆನ್ ಮತ್ತು ನನ್ನ ಚರ್ಯೆ. ಇವೆರಡನ್ನು ನೀವು ಗಟ್ಟಿಯಾಗಿ ಹಿಡಿದರೆ ನೀವು ದಾರಿ ತಪ್ಪಲಾರಿರಿ.

ಜನರೇ ಅಲ್ಲಾಹನನ್ನು ಸ್ತುತಿಸಿರಿ. ಪ್ರತಿದಿನ 5 ಹೊತ್ತಿನ ನಮಾಝ್ ನಿರ್ವಹಿಸಿರಿ. ರಮಝಾನ್ ತಿಂಗಳಿನಲ್ಲಿ ಉಪವಾಸವನ್ನು ನಿರ್ವಹಿಸಿರಿ. ಝಕಾತ್ ನೀಡಿರಿ. ಹಜ್ಜ್ ನಿರ್ವಹಿಸಿರಿ. ನಿಮ್ಮ ನಾಯಕನನ್ನು ಅನುಸರಿಸಿರಿ. ಈ ರೀತಿ ನೀವು ಸ್ವರ್ಗವನ್ನು ಗಳಿಸುವಿರಿ.

ಓ ಜನರೇ ಇಲ್ಲಿ ಹಾಜರಿರುವವರು, ಇಲ್ಲಿ ಹಾಜರಿಲ್ಲದವರಿಗೆ ಸಂದೇಶವನ್ನು ತಿಳಿಸಿರಿ. ಬಹುಶಃ ಇಲ್ಲಿ ಹಾಜರಿಲ್ಲದಿರುವವರು ನಿಮಗಿಂತಲೂ ಹೆಚ್ಚು ಅರ್ಥಮಾಡಿಕೊಳ್ಳುವವರೂ, ನೆನಪಿಟ್ಟುಕೊಳ್ಳುವವರೂ ಆಗಿರ ಬಹುದು. (ವಿದಾಯ ಭಾಷಣ)

************

# ಸೃಷ್ಟಿಕರ್ತನ ಅಸ್ತಿತ್ವದ ಪುರಾವೆ

ನೀವು ಏಕೈಕ ಸೃಷ್ಟಿಕರ್ತನಲ್ಲಿ ವಿಶ್ವಾಸವಿಡುತ್ತೀರಾ?

ಇಲ್ಲ!

ಏನೂ ತೊಂದರೆ ಇಲ್ಲ!

ನಾನು ಈಗ ನಿಮಗೆ ಕೆಲ ಪ್ರಶ್ನೆಗಳನ್ನು ಕೇಳುತ್ತೇನೆ. ದಯವಿಟ್ಟು ಉತ್ತರಿಸಿರಿ.

* 20ನೇ ಶತಮಾನದಲ್ಲಿ (ಕ್ರಿ. ಶ. 1900) ವಿಜ್ಞಾನಿಗಳು ಈ ವಿಶ್ವವು ಅಸ್ತಿತ್ವಕ್ಕೆ ಮೊದಲು ಬಹಳ ಉಷ್ಣವಿರುವ ಒಂದು ಸಣ್ಣ ವಸ್ತುವಿತ್ತೆಂದು, ಈ ವಸ್ತು ಕ್ರಮೇಣ ಹಿಗ್ಗಿ ನಂತರ ಸ್ಫೋಟಗೊಂಡು ವಿಶ್ವದ ಅಸ್ತಿತ್ವಕ್ಕೆ ನಾಂದಿಯಾಯಿತೆಂದು ನಿರ್ಧಾರಕ್ಕೆ ಬಂದರು.

ಈ ಉಷ್ಣದ ವಸ್ತು ಸ್ವಲ್ಪ ತಣ್ಣಗಾದ ನಂತರ ಬಿಸಿ ಹವೆಯ ರೂಪ ಪಡೆಯಿತು. ಈ ಹವೆಯು ತಣ್ಣಗಾದ ನಂತರ ಭೂಮಿ ಮತ್ತು ಆಕಾಶಗಳು ಅಸ್ತಿತ್ವಕ್ಕೆ ಬಂದವು. ಆರಂಭದಲ್ಲಿ ಭೂಮಿಯನ್ನು ಸಂಪೂರ್ಣವಾಗಿ ನೀರು ವ್ಯಾಪಿಸಿತ್ತು. ನಂತರ ನೀರಿನೊಳಗಿನಿಂದ ಭೂಮಿ ಕಾಣಿಸಿಕೊಳ್ಳತೊಡಗಿತು. ಎಲ್ಲಾ ಜೀವಿಗಳೂ ನೀರಿನಿಂದ ಸೃಷ್ಟಿಯಾದವು. ಇದಕ್ಕೆ ಮಹಾ ಸ್ಫೋಟ ಸಿದ್ಧಾಂತ(ಐರ ಛಿಚಿಟಿರ ಃಖಿಊಔಡಿಥಿ) ಎನ್ನುತ್ತಾರೆ.

ಈ ಎಲ್ಲಾ ವಿವರಗಳು 1400 ವರ್ಷಗಳ ಹಿಂದೆ ಅವತೀರ್ಣಗೊಂಡ ಕುರ್‌ಆನ್‌ನಲ್ಲಿದೆ. ಆರಂಭದಲ್ಲಿ ಭೂಮಿ ಮತ್ತು ಆಕಾಶಗಳು ಹವೆಯ ರೂಪದಲ್ಲಿದ್ದವು ಎಂದೂ, ಸೃಷ್ಟಿಕರ್ತನು ಅದರಿಂದ ಭೂಮಿ ಮತ್ತು ಆಕಾಶಗಳನ್ನು ಸೃಷ್ಟಿಸಿದನೆಂದು ಕುರ್‌ಆನ್ ತಿಳಿಸುತ್ತದೆ! (ಪವಿತ್ರ ಕುರ್‌ಆನ್ 41:11)

ಒಂದೇ ಶತಮಾನದಲ್ಲಿ ಕಂಡು ಹಿಡಿದ ವೈಜ್ಞಾನಿಕ ವಿಷಯಗಳು 1400 ವರ್ಷಗಳ ಹಿಂದೆಯೇ ಪವಿತ್ರ ಕುರ್‌ಆನ್‌ನಲ್ಲಿ ಹೇಗೆ ಪ್ರಸ್ತಾಪಿಸಲ್ಪಟ್ಟವು?

* ಕ್ರಿ. ಶ. 1800ರಲ್ಲಿ ಎಲ್ಲಾ ಜೀವಿಗಳೂ ನೀರಿನಿಂದ ಸೃಷ್ಟಿಸಲ್ಪಟ್ಟಿವೆ ಎಂದು ವಿಜ್ಞಾನಿಗಳು ಕಂಡು ಹಿಡಿದರು. ಆದರೆ 1400 ವರ್ಷಗಳ ಹಿಂದೆಯೇ ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು, "ನಾವು ಎಲ್ಲಾ ಜೀವಿಗಳನ್ನು ನೀರಿನಿಂದ ಸೃಷ್ಟಿಸಿದ್ದೇವೆ" ಎಂದು ಹೇಳಿರುವನು. (ಪವಿತ್ರ ಕುರ್‌ಆನ್ 21:30)

* 19ನೇ ಶತಮಾನದವರೆಗೆ ಜನರು ಸೂರ್ಯ ಮತ್ತು ಚಂದ್ರ, ತಮ್ಮ ಪ್ರಕಾಶವನ್ನು ನೀಡುತ್ತವೆ ಎಂದು ನಂಬಿದ್ದರು. ಆದರೆ 19ನೇ ಶತಮಾನದಲ್ಲಿಯಷ್ಟೇ ಸೂರ್ಯ ಮಾತ್ರನು ತನ್ನ ಪ್ರಕಾಶವನ್ನು ನೀಡುತ್ತಾನೆಂದೂ, ಚಂದ್ರನು ಸೂರ್ಯನ ಪ್ರಕಾಶವನ್ನೂ ಬಿಂಬಿಸುತ್ತಾನಷ್ಟೇ ಎಂಬುದು ತಿಳಿದು ಬಂತು. ಆದರೆ ಪವಿತ್ರ ಕುರ್‌ಆನ್‌ನಲ್ಲಿ ಈ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ.

(ನೋಡಿರಿ ಪವಿತ್ರ ಕುರ್‌ಆನ್ 25:61)

* ಪ್ರಾಚೀನ ಕಾಲದಲ್ಲಿ, ಭೂಮಿಯು ತನ್ನ ಸ್ಥಾನದಲ್ಲಿ ಸ್ಥಿರವಾಗಿದೆಯೆಂದು, ಸೂರ್ಯ, ಚಂದ್ರ ಒಳಗೊಂಡಂತೆ ಸಂಪೂರ್ಣ ವಿಶ್ವವು ಭೂಮಿಯ ಸುತ್ತ ಸುತ್ತುತ್ತಿದೆ ಎಂದು ಭಾವಿಸಲಾಗಿತ್ತು. ಕ್ರಿ. ಶ. 1609ರಲ್ಲಿ

ಜರ್ಮನಿಯ ವಿಜ್ಞಾನಿ ಜೋಹನ್ನಾಸ್ ಕೆಪ್ಲರ್ (ಎಔಚಿಟಿಟಿಜ ಇಜಠಿಇಜಡಿ) ಸೂರ್ಯನ ಸುತ್ತ ಪ್ರತಿಯೊಂದು ಗ್ರಹಗಳು ತಮ್ಮ ತಮ್ಮ ಕಕ್ಷೆಯಲ್ಲಿ ಸುತ್ತುತ್ತಿವೆ ಎಂದು ಕಂಡುಹಿಡಿದನು. ಇದರ ಜೊತೆಗೆ ಗ್ರಹಗಳು ತಮ್ಮ ಅಕ್ಷ ರೇಖೆಯ ಸುತ್ತ ತಿರುಗುತ್ತಿವೆ ಎಂದೂ ಹೇಳಿದನೂ.

20ನೆಯ ಶತಮಾನದಲ್ಲಿ ಸೂರ್ಯನೂ ತನ್ನ ಸ್ಥಾನದಲ್ಲಿ ಸ್ಥಿರವಾಗಿಲ್ಲ ಎಂದು ತಿಳಿಯಿತು. ಸೂರ್ಯನು ತನ್ನ ಅಕ್ಷ ರೇಖೆಯ ಸುತ್ತ ತಿರುಗುತ್ತಿದ್ದು ಸಂಪೂರ್ಣ ಸೂರ್ಯ ಮಂಡಲ 'ಟಟಚಿಡಿ ಚಿಔಜಥ'ನ ಸುತ್ತ ಸೆಕೆಂಡಿಗೆ 150 ಮೈಲು ವೇಗದಲ್ಲಿ ಚಲಿಸುತ್ತದೆ. ಒಂದು ಸುತ್ತು ತಿರುಗಲು 200 ಮಿಲಿಯ ವರ್ಷಗಳು ತಗಲುತ್ತವೆ. ಸೂರ್ಯ, ಚಂದ್ರ ಮೊದಲಾದವು ತಮ್ಮ ಕಕ್ಷೆಯಲ್ಲಿ ಚಲಿಸುತ್ತಿವೆ. ಎಂದು ಕುರ್‌ಆನ್ 1400 ವರ್ಷಗಳ ಹಿಂದೆಯೇ ಪ್ರಸ್ತಾಪಿಸಿದೆ. (ನೋಡಿರಿ ಕುರ್‌ಆನ್ 21:33)

* ಸೂರ್ಯನಲ್ಲಿ ಹೇಲಿಯಮ್ ಅನಿಲದ ಬೆಸುಗೆ ನಡೆಯುತ್ತದೆ. ಈ ಪ್ರಕ್ರಿಯೆಯಲ್ಲಿ 'ಶಕ್ತಿ' ಮತ್ತು 'ಬೆಳಕು' ಉತ್ಪತಿಯಾಗುತ್ತದೆ. ಸೂರ್ಯನಲ್ಲಿ ಹೇಲಿಯಮ್ ಅನಿಲವು ಬರಿದಾದಾಗ, ಬೆಸುಗೆ ಪ್ರಕ್ರಿಯೆಯೂ ನಿಲ್ಲುತ್ತದೆ. ಸೂರ್ಯನ ಶಾಖವು ಕಡಿಮೆಯಾಗ ತೊಡಗುತ್ತದೆ. ಕೊನೆಗೆ ಸೂರ್ಯನು ನಸುಗೆಂಪು ಬಣ್ಣದ ಅನಿಲದ ಚೆಂಡಿನಂತಾಗಿ ಹಿಗ್ಗಲಾರಂಭಿಸಿ ತನ್ನ ವ್ಯಾಪ್ತಿಯಲ್ಲಿ ಭೂಮಿಯನ್ನೂ ತೆಗೆದು ಕೊಳ್ಳುತ್ತಾನೆ. ಆಕಾಶವು ಆಗ ನಸುಗೆಂಪು ಬಣ್ಣಕ್ಕೆ ತಿರುಗುತ್ತದೆ. ಭೂಮಿಯ ಸುತ್ತಲೂ ಆಗ ಹಗಲು ಆಗಿರುತ್ತದೆ.

ವಿಜ್ಞಾನಿಗಳು ಇದನ್ನು ಕೇವಲ 50 ವರ್ಷಗಳ ಹಿಂದೆ ಕಂಡುಹಿಡಿದರು. ಆದರೆ ಈ ವಿವರಗಳು 1400 ವರ್ಷಗಳ ಹಿಂದೆಯೇ ಕುರ್‌ಆನ್‌ನಲ್ಲಿ ಉಲ್ಲೇಖಿತವಾಗಿವೆ. (ನೋಡಿರಿ ಕುರ್‌ಆನ್ 55:37) ಸೂರ್ಯನ ಪರಿಸ್ಥಿಯು ಈ ರೀತಿಯಾದಾಗ ಪ್ರಳಯವು ಸಂಭವಿಸುವುದು.

* ನಕ್ಷತ್ರಗಳ ನಡುವೆ ಯಾವ ವಸ್ತುವೂ ಇಲ್ಲವೆಂದೂ ಇಲ್ಲಿಯವರೆಗೆ ವಿಜ್ಞಾನಿಗಳು ನಂಬಿದ್ದರು. ಆದರೆ ಇತ್ತೀಚೆಗಷ್ಟೇ ನಕ್ಷತ್ರಗಳ ನಡುವೆ ಪ್ಲಾಸ್ಮ (ಔಟಚಿಟಚಿ) ಇರುವುದು ಕಂಡುಬಂದಿದೆ. ಕುರ್‌ಆನ್ ಇದನ್ನು 1400 ವರ್ಷಗಳ ಹಿಂದೆಯೇ ಪ್ರಸ್ತಾಪಿಸಿದೆ. (ನೋಡಿರಿ ಕುರ್‌ಆನ್ 25:59)

* ಕ್ರಿ. ಶ. 1955ರಲ್ಲಿ ಎಡ್ವಿನ್ ಹುಬಲ್ (ಇಜತಿಟ ಊಣಭಭಟಜ) ಗ್ಯಾಲಕ್ಸಿಗಳ ನಡುವಿನ ಅಂತರ ಹೆಚ್ಚುತ್ತಿದ್ದು, ವಿಶ್ವವು ಹಿಗ್ಗುತ್ತಿದೆ ಎಂದು ವರದಿ ಮಾಡಿದರು. ಆದರೆ ಕುರ್‌ಆನ್ 1400 ವರ್ಷಗಳ ಹಿಂದೆಯೇ, "ನಾವು ವಿಶ್ವವನ್ನು ಹಿಗ್ಗಿಸುತ್ತಿದ್ದೇವೆ" ಎಂದು ತಿಳಿಸಿದೆ.

* ವಸ್ತುವಿನ ಅತ್ಯಂತ ಸಣ್ಣ ಭಾಗಕ್ಕೆ ಪರಮಾಣು ಎನ್ನುತ್ತಾರೆ. ಪ್ರಾಚೀನ ಕಾಲದಲ್ಲಿ ಇದಕ್ಕೆ 'ಝುರ್ರ', 'ಐಯೋಟ' ಎಂದೂ ಕರೆಯುತ್ತಿದ್ದರು. ಕೆಲ ವರ್ಷಗಳ ಹಿಂದೆ ಪರಮಾಣುಗಳಿಗಿಂತಲೂ ಸಣ್ಣ ಭಾಗಗಳನ್ನು ವಿಜ್ಞಾನಿಗಳು ಕಂಡು ಹಿಡಿದಿರುವರು. ಇದಕ್ಕೆ ಪರಮಾಣು ಭಾಗ (ಖಣಭ ಚಣಟಿಛಿ ಠಿಚಿಡಿಣಛಿಟಜ) ಎನ್ನುತ್ತಾರೆ.

1400 ವರ್ಷಗಳ ಹಿಂದೆಯೇ ಅಲ್ಲಾಹನು, ಕುರ್‌ಆನ್‌ನಲ್ಲಿ ಪರಮಾಣುಗಳಿಗಿಂತ ಸಣ್ಣ ಗಾತ್ರದ ಭಾಗಗಳು ಇರುವುದಾಗಿ ತಿಳಿಸಿರುವನು. (ಪವಿತ್ರ ಕುರ್‌ಆನ್ 34:3)

* ಎರಡು ಸಮುದ್ರಗಳು ಸೇರಿದರೂ, ಅವುಗಳ ನೀರಿನ ಲಕ್ಷಣಗಳು ಬದಲಾಗುವುದಿಲ್ಲ. ಎರಡೂ ಸಮುದ್ರಗಳ ನೀರು, ವೈಶಿಷ್ಟ್ಯತೆಯಿಂದ ಬೇರೆ ಬೇರೆಯಾಗಿರುತ್ತದೆ. ಈ ಅಂಶವನ್ನು ಸ್ವಲ್ಪ ಕಾಲದ ಮೊದಲಷ್ಟೇ ವಿಜ್ಞಾನಿಗಳು ಕಂಡುಹಿಡಿದರು. ಆದರೆ ಕುರ್‌ಆನ್ 1400 ವರ್ಷಗಳ ಹಿಂದೆಯೇ ಇದನ್ನು ಪ್ರಸ್ತಾಪಿಸಿದೆ.

* ಭೂಮಿಯನ್ನು 100 ಕಿ. ಮಿೂ. ಆಳಕ್ಕೆ ಅಗೆದರೆ ಲಾವಾರಸ ಹೊರ ಚಿಮ್ಮುತ್ತದೆ. ಭೂಮಿಯ ಒಳ ಭಾಗದಲ್ಲಿ ಕಲ್ಲಿನ ಅನೇಕ ಪದರುಗಳಿವೆ. ಈ ಪದರುಗಳು ಸ್ವಲ್ಪ ಚಲಿಸಿದಾಗ ಭೂ ಕಂಪನ ಉಂಟಾಗುತ್ತದೆ. ಕಲ್ಲಿನ ಪದರುಗಳು ಅಲುಗಾಡದಂತೆ ಭೂಮಿಯ ಮೇಲ್ಭಾಗದಲ್ಲಿರುವ ಪರ್ವತಗಳು ತಡೆಯುತ್ತದೆ. ಭೂಮಿಯ ಒಳ ಭಾಗದಲ್ಲಿ ಪರ್ವತಗಳು ಕಲ್ಲಿನ ಪದರುಗಳ ನಡುವೆ ಬ ೆ ಣ ೆ ಯ ಂ ತೆ (wedge) ಕಾರ್ಯನಿರ್ವಹಿಸುತ್ತವೆ.

ವಿಜ್ಞಾನಿಗಳು ಈ ವಿಷಯವನ್ನೂ 20ನೇ ಶತಮಾನದಲ್ಲಿ ಕಂಡು ಹಿಡಿದರು. ಆದರೆ ಅಲ್ಲಾಹನು ಕುರ್‌ಆನ್‌ನಲ್ಲಿ ಇದನ್ನು ಈಗಾಗಲೇ ತಿಳಿಸಿರುವನು. (ನೋಡಿರಿ ಕುರ್‌ಆನ್ 78: 6–7)

* ಶಿಶುವಿನ ಅಂದವು ಪುರುಷರ ವೀರ್ಯಾಣುಗಳ ಮೇಲೆ ಅವಲಂಬಿತವಾಗಿದೆ. Uromozome ನ 23ನೇ ಜೋಡಿಯು 'xx' ವಿಧದ ಆಗಿದ್ದರೆ ಹೆಣ್ಣು ಮಕ್ಕಳು ಜನಿಸುತ್ತದೆ. 'ಥಥಿ' ಯಾಗಿದ್ದರೆ ಗಂಡು ಶಿಶು ಜನಿಸುತ್ತದೆ.

ಶಿಶುವಿನ ಅಂಗವು ಪುರುಷರ ಮೇಲೆ ನಿರ್ಧರಿತವಾಗುತ್ತದೇ ವಿನಹಃ ಸ್ತ್ರೀಯರ ಮೇಲೆ ಅಲ್ಲ ಎನ್ನುವ ವಿಷಯವನ್ನು ವಿಜ್ಞಾನಿಗಳು 20ನೇ ಶತಮಾನದಲ್ಲಿ ಕಂಡು ಹಿಡಿದರು. ಆದರೆ ಕುರ್‌ಆನ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪಿತಗೊಂಡಿದೆ. (ನೋಡಿರಿ ಕುರ್‌ಆನ್ 75: 35–39, 53: 45–46)

* 1980ರಲ್ಲಿ ಸರ್ ಫ್ರಾನ್ಸಿಸ್ ಗೋಲ್ಟ್ ಪ್ರತಿಯೊಬ್ಬ ಮನುಷ್ಯನ ಬೆರಳಚ್ಚು ಭಿನ್ನ ವಾಗಿರುವುದನ್ನು ಕಂಡು ಹಿಡಿದರು. ಆದರೆ ಕುರ್‌ಆನ್ 1400 ವರ್ಷಗಳ ಹಿಂದೆಯೇ ಇದನ್ನು ತಿಳಿಸಿದೆ. (ನೋಡಿರಿ ಕುರ್‌ಆನ್ 75: 3–4)

* 19ನೇ ಶತಮಾನದಲ್ಲಿ ವೈದ್ಯರು, ಮನುಷ್ಯರಿಗೆ ನೋವು ಅವರ ಚರ್ಮದ ಮುಖಾಂತರ ತಿಳಿಯುತ್ತದೆ ಎಂಬುದನ್ನು ಕಂಡು ಹಿಡಿದರು. ಕುರ್‌ಆನ್‌ನಲ್ಲಿ ಅಲ್ಲಾಹನು, ನರಕದಲ್ಲಿ ಪಾಪಿಗಳನ್ನು ಶಿಕ್ಷಿಸುವಾಗ ಪಾಪಿಗಳ ಚರ್ಮ ಸುಟ್ಟ ಕೂಡಲೇ ಅದನ್ನು ಪುನಃ ಸೃಷ್ಟಿಸಲಾಗುವುದು ಎಂದು ತಿಳಿಸಲಾಗಿದೆ. (ನೋಡಿರಿ ಕುರ್‌ಆನ್ 4: 56)

* ಕೆಲ ಇರುವೆಗಳು ತಮ್ಮ ಸಹಚರರು ಸತ್ತ ನಂತರ ಅದನ್ನು ದಫನ ಮಾಡುತ್ತವೆ. ಅವು ಪರಸ್ಪರರನ್ನು ಗುರುತಿಸುತ್ತವೆ ಮತ್ತು ಮಾತನಾಡುತ್ತವೆ. ಇರುವೆಗಳು ಆಹಾರವನ್ನೂ ಸಂಗ್ರಹಿಸಿ, ವೈಜ್ಞಾನಿಕ ರೀತಿಯಲ್ಲಿ ಅದನ್ನು ಕೆಡದಂತೆ ಸಂರಕ್ಷಿಸುತ್ತವೆ.

ವಿಜ್ಞಾನಿಗಳು ಈ ವಿಷಯವನ್ನು 17ನೇ ಶತಮಾನದಲ್ಲಿ ಕಂಡುಹಿಡಿದರು. ಆದರೆ ಕುರ್‌ಆನ್ 1400 ವರ್ಷಗಳ ಹಿಂದೆಯೇ ಇರುವೆಗಳ ಬುದ್ಧಿವಂತಿಕೆಯ ವಿಷಯ ಪ್ರಸ್ತಾಪಿಸಿದೆ. (ನೋಡಿರಿ, ಕುರ್‌ಆನ್ 78:6–7)

* ಇದೇ ರೀತಿ ನೀರು, ಗಾಳಿ, ಪರ್ವತಗಳು, ಪಕ್ಷಿಗಳು, ಪ್ರಾಣಿಗಳು, ಕೀಟಗಳು, ಮಾನವ ದೇಹ, ಸಂತಾನೋತ್ಪತ್ತಿ ಮೊದಲಾದ ವಿಷಯಗಳ ಬಗ್ಗೆ ವೈಜ್ಞಾನಿಕ ವಿವರಗಳು ಕುರ್‌ಆನ್‌ನಲ್ಲಿದೆ.

* ಪ್ರಖ್ಯಾತ ಲೇಖಕ ಹಾರೂನ್ ಯಾಹ್ಯಾ ತಮ್ಮ ಪುಸ್ತಕ 'Allah's mirakales in the Holy Quran'ದಲ್ಲಿ 80ಕ್ಕೂ ಹೆಚ್ಚು ವೈಜ್ಞಾನಿಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಡಾ॥ ಝಾಕಿರ್ ನಾಯ್ಕ್ ಸಹ 'ಕುರ್‌ಆನ್ ಮತ್ತು ಆಧುನಿಕ ವಿಜ್ಞಾನ' ವಿಷಯದ ಬಗ್ಗೆ ಪುಸ್ತಕವನ್ನು ರಚಿಸಿದ್ದಾರೆ.

* ಕುರ್‌ಆನ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಉಲ್ಲೇಖಗಳನ್ನು ಅರ್ಥ ಮಾಡಿಕೊಳ್ಳಲು ಹಾರೂನ್ ಯಾಹ್ಯಾ ಮತ್ತು ಡಾ॥ ಝಾಕಿರ್ ನಾಯ್ಕರವರ ಪುಸ್ತಕಗಳು ಸಹಕಾರಿಯಾಗುತ್ತವೆ.

* ವೈಜ್ಞಾನಿಕ ಸತ್ಯಗಳು ಅತ್ಯಾಧುನಿಕ ಯಂತ್ರೋಪಕರಣಗಳ ಮೂಲಕ ಮಾತ್ರ ಕಂಡು ಹಿಡಿಯಲು ಸಾಧ್ಯ. ಹಾಗಿದ್ದಲ್ಲಿ ಈ ವಿಷಯಗಳು 1400 ವರ್ಷಗಳ ಹಿಂದೆ ಕುರ್‌ಆನ್‌ನಲ್ಲಿ ಪ್ರಸ್ತಾಪವಾಗಲು ಹೇಗೆ ಸಾಧ್ಯವಾಯಿತು? ಸೃಷ್ಟಿಕರ್ತನಲ್ಲಿ ವಿಶ್ವಾಸವಿಡದ ಜನರು ಈ ಪ್ರಶ್ನೆಗೆ ಉತ್ತರಿಸಬೇಕು!

* ವೈಜ್ಞಾನಿಕ ವಿಷಯಗಳ ಬಗ್ಗೆ ಜ್ಞಾನ ಅವುಗಳನ್ನು ಸೃಷ್ಟಿಸಿದವನಿಗೆ ಮಾತ್ರ ತಿಳಿದಿರಲು ಸಾಧ್ಯ. ಈ ವಿಶ್ವದ ಸೃಷ್ಟಿಕರ್ತನ ಅಸ್ತಿತ್ವಕ್ಕೆ ಇದು ಪ್ರಬಲ ಪುರಾವೆಯಾಗಿದೆ. ಪವಿತ್ರ ಕುರ್‌ಆನ್‌ನನ್ನು ಸೃಷ್ಟಿಕರ್ತನು ಅವತೀರ್ಣಗೊಳಿಸಿರುವನು. ಆದುದರಿಂದಲೇ ಈ ವೈಜ್ಞಾನಿಕ ವಿವರಗಳು ಕುರ್‌ಆನ್‌ನಲ್ಲಿ ಉಲ್ಲೇಖವಾಗಲು ಸಾಧ್ಯವಾಯಿತು. ಈ ಸಂಪೂರ್ಣ ವಿಶ್ವದ ಸೃಷ್ಟಿಕರ್ತನು ಇರುವನು. ಆತನು ಏಕೈಕನಾಗಿರುವನು. ಆತನು ಆದಿಯಿಂದಲೂ ಇರುವನು. ಆತನು ಚಿರಂತನನು. ಆತನೇ ಕುರ್‌ಆನ್‌ನನ್ನು ಅವತೀರ್ಣಗೊಳಿಸಿರುವನು ಮತ್ತು ಆತನೇ ಅಂತಿಮ ಪ್ರವಾದಿ ಮುಹಮ್ಮದ್(ಸ)ರನ್ನು ತನ್ನ ಸಂದೇಶವಾಹಕನಾಗಿ ಕಳುಹಿಸಿರುವನು.

************

# ೯. ಪ್ರವಾದಿಗಳು ಯಾರು?

ಅಲ್ಲಾಹನು ಕುರ್‌ಆನಿನಲ್ಲಿ ಹೇಳಿರುವನು:

'ನಾವು ಮನುಷ್ಯರನ್ನು ಮತ್ತು ಜಿನ್ನ್‌ಗಳನ್ನು ನಮ್ಮ ಆರಾಧನೆಗಾಗಿ ಸೃಷ್ಟಿಸಿದ್ದೇವೆ' (ಪವಿತ್ರ ಕುರ್‌ಆನ್ 51:56)

.................

(ಮನುಷ್ಯರನ್ನು ಒಂದು ಉದ್ದೇಶಕ್ಕಾಗಿ ಸೃಷ್ಟಿಸಲಾಗಿದೆ. ಯಾರನ್ನೂ ಪರೀಕ್ಷೆಗೆ ಒಳಪಡಿಸದೇ ಸ್ವರ್ಗದಲ್ಲಿ ಪ್ರವೇಶವನ್ನು ನೀಡಲಾಗದು)

* ಅಲ್ಲಾಹನು ನುಡಿದಿರುವನು: " ನಿಮ್ಮ ದೇವನು ಇಚ್ಛಿಸುತ್ತಿದ್ದರೆ ನಿಮ್ಮೆಲ್ಲರನ್ನೂ ಒಂದೇ ಸಮುದಾಯವನ್ನಾಗಿ ಮಾಡಲು ಸಾಧ್ಯವಿತ್ತು. ಆದರೆ ಅವನು ನಿಮಗೆ ಏನು ನೀಡಿರುವನೋ ಅದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಹೀಗೆ ಮಾಡಿದನು. ಆದುದರಿಂದ ಸತ್ಕರ್ಮಗಳಲ್ಲಿ ಪರಸ್ಪರ ಸ್ಪರ್ಧಿಸಲು ಪ್ರಯತ್ನಿಸಿರಿ. (ಕುರ್‌ಆನ್ 5:48)

(ಇಹಲೋಕವು ಒಂದು ಪರೀಕ್ಷೆಯಾಗಿರುವುದು. ಈ ಪರೀಕ್ಷೆಯಲ್ಲಿ ಯಶಸ್ಸು ಹೊಂದಲು ನಾವು ಒಳಿತಿನ ಕಾರ್ಯಗಳನ್ನು ಮಾಡಬೇಕು)

* ಶೈತಾನನು ಅಲ್ಲಾಹನಿಗೆ ಈ ರೀತಿ ಪಂಥಾಹ್ವಾನ ನೀಡಿದನು.

"ನೀನು ನನಗೆ ಪುನರುತ್ಥಾನದ ದಿನದವರೆಗೆ ಕಾಲಾವಕಾಶ ಕೊಟ್ಟರೆ ನಾನು ಇವರ ಸಂಪೂರ್ಣ ಸಂತತಿಯನ್ನೇ ಮೂಲೋತ್ಪಾಟನೆಗೊಳಿಸಿ ಬಿಡುವೆನು. ಕೇವಲ ಕೆಲವರು ಮಾತ್ರ ನನ್ನಿಂದ ಪಾರಾಗ ಬಲ್ಲರು." (ಕುರ್‌ಆನ್ 17:62)

(ಶೈತಾನನು ಜನರಿಗೆ ಒಳಿತಿನ ಕಾರ್ಯಗಳಿಂದ ದೂರ ಸರಿಯುವಂತೆ ಮಾಡಲು ಪ್ರಯತ್ನಿಸುವನು)

* ಅಲ್ಲಾಹನು ಕುರ್‌ಆನ್‌ನಲ್ಲಿ ನುಡಿದಿರುವನು:

"ಪ್ರತಿಯೊಂದು ಸಮುದಾಯಕ್ಕೆ ಓರ್ವ ಸಂದೇಶವಾಹಕನಿದ್ದಾನೆ. ಒಂದು ಸಮುದಾಯದ ಬಳಿಗೆ ಅದರ ರಸೂಲ್ ಬಂದಾಗ ಅದರ ತೀರ್ಮಾನವನ್ನು ನ್ಯಾಯ ಪೂರ್ಣವಾಗಿ ಮಾಡಿ ಬಿಡಲಾಗುತ್ತದೆ ಮತ್ತು ಅದರ ಮೇಲೆ ಕಿಂಚಿತ್ತೂ ಅಕ್ರಮ ಎಸಗಲಾಗುವುದಿಲ್ಲ" (ಕುರ್‌ಆನ್ 10:47)

* ಮೇಲಿನ ಕುರ್‌ಆನಿನ ಸೂಕ್ತಗಳ ಸಾರಾಂಶ ಈ ರೀತಿ ಇದೆ. ಅಲ್ಲಾಹ್ ಮನುಷ್ಯರನ್ನು ತನ್ನ ಆರಾಧನೆಗಾಗಿ ಸೃಷ್ಟಿಸಿದನು. ಆತನು ಮನುಷ್ಯರನ್ನು ವಿವಿಧ ಪರೀಕ್ಷೆಗಳಿಗೆ ಗುರಿಪಡಿಸುತ್ತಾನೆ. ಯಾರು ಈ ಪರೀಕ್ಷೆಯಲ್ಲಿ ಜಯಪ್ರದರಾಗುವರೋ, ಅವರಿಗೆ ಸ್ವರ್ಗವನ್ನು ನೀಡುವನು. ಶೈತಾನನು ಮನುಷ್ಯರನ್ನು ಸತ್ಯ ಪಥದಿಂದ ದೂರ ಸರಿಸಲು ಸದಾ ಪಯತ್ನಿಸುತ್ತಿರುತ್ತಾನೆ. ಆದುದರಿಂದ ಜನರಿಗೆ ಮಾರ್ಗದರ್ಶನ ಮಾಡಲು ಜನರು ಸೃಷ್ಟಿಕರ್ತನ ಕಡೆಗೆ ಪುನಃ ಮರಳುವಂತೆ ಮಾಡಲು ಜಗತ್ತಿಗೆ ಅನೇಕ ಪ್ರವಾದಿಗಳು ಕಳುಹಿಸಲ್ಪಟ್ಟರು. ಪ್ರವಾದಿಗಳು ಪ್ರತಿಯೊಂದು ಸಮುದಾಯದಲ್ಲೂ ಬಂದಿರುವರು.

ಪ್ರವಾದಿಗಳು ಅಲ್ಲಾಹನ

ಪ್ರತಿನಿಧಿಗಳಾಗಿರುವರು. ಅವರು ಅಲ್ಲಾಹನ ಪರೀಕ್ಷೆಯಲ್ಲಿ ಜನರು ವಿಜಯಿಗಳಾಗುವಂತೆ ಜನರಿಗೆ ಮಾರ್ಗದರ್ಶನ ಮಾಡುತ್ತಾರೆ.

ಪ್ರವಾದಿಗಳನ್ನೂ ಯಾರು ನೇಮಿಸುತ್ತಾರೆ?

* ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳಿರುವನು:

" ನಾವು ನಿಮ್ಮ ಸೃಷ್ಟಿಯನ್ನು ಆರಂಭಿಸಿದೆವು. ಅನಂತರ ನಾವು ನಿಮಗೆ ರೂಪ ಕೊಟ್ಟೆವು" (ಕುರ್‌ಆನ್ 7:11)

ಅಲ್ಲಾಹನು ಆರಂಭದಲ್ಲಿ ಆತ್ಮಗಳನ್ನು ಸೃಷ್ಟಿಸಿದನು. ನಂತರ ಈ ಆತ್ಮಗಳಿಗೆ ದೇಹವನ್ನು ಸೃಷ್ಟಿಸಿದನು.

* ಅಲ್ಲಾಹ್ ಕುರ್‌ಆನ್‌ನಲ್ಲಿ ಹೇಳಿರುವನು:

"ಓ ಪೈಗಂಬರರೇ, ನಿಮ್ಮ ಪ್ರಭು ಆದಮರ ಪೀಳಿಗೆಯಿಂದ ಅವರ ಸಂತತಿಯನ್ನು ಹೊರ ತಂದಿದ್ದ ಹಾಗೂ ಅವರನ್ನು ಸ್ವತಃ ಅವರ ಮೇಲೆ ಸಾಕ್ಷಿಗಳಾಗಿ ಮಾಡುತ್ತಾ "ನಾನು ನಿಮ್ಮ ಪ್ರಭುವಲ್ಲವೇ?" ಎಂದು ಕೇಳಿದ್ದ ಸಂದರ್ಭವನ್ನು ಜನರಿಗೆ ನೆನಪಿಸಿರಿ. ಆಗ ಅವರು "ಹೌದು, ಖಂಡಿತವಾಗಿಯೂ ನೀನೇ ನಮ್ಮ ಪ್ರಭು ನಾವು ಇದಕ್ಕೆ ಸಾಕ್ಷ್ಯ ವಹಿಸುತ್ತೇವೆ." ಎಂದರು. ನೀವು ಪುನರುತ್ಥಾನ ದಿನದಂದು 'ನಾವು ಈ ಬಗ್ಗೆ ಅಜ್ಞರಾಗಿದ್ದೆವು' ಎಂದು ಹೇಳಿ ಬಿಡಬಾರದೆಂದು ಅಥವಾ 'ಶಿರ್ಕ್' (ದೇವ ಸಹ ಭಾಗಿತ್ವ) ಅನ್ನು ನಮಗಿಂತ ಮುಂಚೆ ನಮ್ಮ ಪೂರ್ವಿಕರು ಪ್ರಾರಂಭಿಸಿದ್ದರು, ನಾವು ಅವರ ತರುವಾಯ ಅವರ ಸಂತತಿಯಲ್ಲಿ ಜನಿಸಿದವರು, ಹೀಗಿರುವಾಗ ದುರಾಚಾರಿಗಳು ಮಾಡಿದ ಅಪರಾಧಕ್ಕಾಗಿ ನೀನು ನಮ್ಮನ್ನು ಹಿಡಿಯುವಿಯಾ?" ಎಂದು ಕೇಳಿ ಬಿಡಬಾರದೆಂದು ನಾವು ಹೀಗೆ ಮಾಡಿದ್ದೆವು. (ಕುರ್‌ಆನ್ 7:173)

* ಸೃಷ್ಟಿಕರ್ತನು ಮನುಷ್ಯರನ್ನು ಸೃಷ್ಟಿಸುವ ಮೊದಲು ಆತ್ಮಗಳನ್ನು ಸೃಷ್ಟಿಸಿರುವಂತೆ, ಆತನು ಮನುಷ್ಯರ ಸೃಷ್ಟಿಯ ಮೊದಲು ಪ್ರವಾದಿಗಳನ್ನು, ಸಂದೇಶವಾಹಕರನ್ನೂ ಸೃಷ್ಟಿಸಿದನು. ಕುರ್‌ಆನಿನ ಈ ಆಯತ್ ಇದನ್ನು ದೃಢೀಕರಿಸುತ್ತದೆ.

"ಮತ್ತು(ಪೈಗಂಬರರೇ) ನಾವು ಎಲ್ಲ ಪ್ರವಾದಿಗಳಿಂದ ಪಡೆದಿರುವ ಕರಾರನ್ನು ನೆನಪಿಡಿರಿ. ನಿಮ್ಮಿಂದಲೂ, ನೂಹ್, ಇಬ್ರಾಹೀಮ್, ಮೂಸಾ ಮತ್ತು ಮರ್ಯಮರ ಪುತ್ರ ಈಸಾರಿಂದಲೂ ಎಲ್ಲರಿಂದಲೂ ನಾವು ಬಲವಾದ ಕರಾರನ್ನು ಪಡೆದಿರುತ್ತೇವೆ." (ಕುರ್‌ಆನ್ 33:7)

ವಿಶ್ವವನ್ನು ಸೃಷ್ಟಿಸುವ ಮೊದಲು, ಸೃಷ್ಟಿಕರ್ತನು ಪ್ರಳಯದ ದಿನದವರೆಗೆ ಹುಟ್ಟುವ ಎಲ್ಲಾ ಮನುಷ್ಯರ ಆತ್ಮಗಳನ್ನು ಸೃಷ್ಟಿಸಿದನು ನಂತರ ಎಲ್ಲಾ ಪ್ರವಾದಿಗಳ ಆತ್ಮಗಳನ್ನು ಸೃಷ್ಟಿಸಿದನು. ಕಾಲಾನುಕಾಲದಲ್ಲಿ ಜಗತ್ತಿನ ವಿವಿಧ ಕಾಲಗಳಲ್ಲಿ ಆತನು ಜನರ ಮಾರ್ಗದರ್ಶನಕ್ಕಾಗಿ ಪ್ರವಾದಿಗಳನ್ನು ಕಳುಹಿಸಿದನು.

* ಮನುಷ್ಯರು ಧರ್ಮದ ಮಾರ್ಗವನ್ನ ಅನುಸರಿಸಿ ಸಂತರು, ಋಷಿಗಳು ಆಗಬಹುದು. ಆದರೆ ಇದೇ ರೀತಿಯಲ್ಲಿ ಓರ್ವ ಮನುಷ್ಯ ಪ್ರವಾದಿಯಾಗಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಾಹನು ಸ್ವತಃ ಪ್ರವಾದಿಗಳನ್ನೂ ನೇಮಿಸುತ್ತಾನೆ.

* ಎಲ್ಲಾ ಪ್ರವಾದಿಗಳು ಅತ್ಯಂತ ಕುಲೀನ ಮನೆತನಗಳಲ್ಲಿ ಜನಿಸಿದರು. ಅವರು ಅತ್ಯಂತ ಶ್ರೇಷ್ಠ ಗುಣಗಳನ್ನು, ನಡವಲಿಕೆಯನ್ನು ಹೊಂದಿದ್ದರು. ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದರು. ಬುದ್ಧಿವಂತರೂ, ಜ್ಞಾನಿಗಳೂ ಆಗಿದ್ದರು. ಯಾವ ಮನುಷ್ಯನೂ ಪ್ರವಾದಿಗಳ

ನಡವಳಿಕೆಯು ಬಗ್ಗೆ ಬೆರಳು ತೋರುವಂತಿರಲಿಲ್ಲ

ಪಾಪ ಕಾರ್ಯದಿಂದ ಪ್ರವಾದಿಗಳಿಗೆ ದೈವಿಕ ರಕ್ಷಣೆ: ಪ್ರವಾದಿಗಳು ಯಾವ ತಪ್ಪು ಮಾಡದಂತೆ ಸೃಷ್ಟಿಕರ್ತನು ಅವರ ಮಾರ್ಗದರ್ಶನ ಮಾಡುತ್ತಿರುತ್ತಾನೆ.

ಪವಿತ್ರ ಕುರ್‌ಆನ್‌ನಲ್ಲಿ ಪ್ರವಾದಿ ಹ. ಮುಹಮ್ಮದ್(ಸ)ರ ಜೀವನದ ಒಂದು ಘಟನೆಯ ವಿವರವನ್ನೂ ನೀಡಲಾಗಿದೆ.

"ಅವರು ತಮ್ಮ ತುಂಬು ಯೌವನಕ್ಕೆ ತಲುಪಿದಾಗ ನಾವು ಅವರಿಗೆ ತೀರ್ಮಾನದ ಶಕ್ತಿ ಮತ್ತು ಜ್ಞಾನ ನೀಡಿದೆವು. ಸಜ್ಜನರಿಗೆ ನಾವು ಈ ಪ್ರತಿಫಲ ನೀಡುತ್ತೇವೆ.

ಯೂಸುಫರು ವಾಸಿಸುತ್ತಿದ್ದ ಮನೆಯೊಡತಿ ಅವರ ಮೇಲೆ ಪ್ರೇಮ ಜಾಲ ಬೀಸತೊಡಗಿದಳು. ಒಂದು ದಿನ ಕದ ಮುಚ್ಚಿ 'ಇತ್ತ ಬಾ' ಎಂದಳು ಆಗ ಯೂಸುಫರು 'ಅಲ್ಲಾಹನು ರಕ್ಷಿಸಲಿ ನನ್ನ ಪ್ರಭು ನನಗೆ ಉತ್ತಮ ಸ್ಥಾನವನ್ನು ದಯಪಾಲಿಸಿದ್ದಾನೆ. ಹೀಗಿರುವಾಗ ನಾನು ಈ ನೀಚ ಕಾರ್ಯ ವೆಸಗುವುದೇ? ಇಂತಹ ಅಕ್ರಮಿಗಳು ಎಂದೂ ಯಶಸ್ವಿಗಳಾಗುವುದಿಲ್ಲ" ಎಂದರು.

ಅವಳು ಅವರ ಕಡೆಗೆ ಮುಂದುವರಿದಳು. ಯೂಸುಫರೂ ತಮ್ಮ ಪ್ರಭುವಿನ ನಿದರ್ಶನವನ್ನು ಕಾಣದಿದ್ದರೆ ಅವಳ ಕಡೆಗೆ ಮುಂದಾಗುತ್ತಿದ್ದರು." (ಪವಿತ್ರ ಕುರ್‌ಆನ್ 12:22–25)

ಪ್ರವಾದಿಗಳ ಮಾರ್ಗದರ್ಶನ:

* ಬುಡಕಟ್ಟುಗಳ ನಾಯಕರು, ಮುಖಂಡರು ಮತ್ತು ಸಮಾಜದ ಪ್ರಭಾವಿ ವ್ಯಕ್ತಿಗಳು ಜನರ ಮೇಲೆ ಪ್ರಭಾವ ಬೀರುತ್ತಾರೆ.

ಒಮ್ಮೆ ಅನೇಕ ಗೋತ್ರಗಳ, ಬುಡಕಟ್ಟುಗಳ ಮುಖಂಡರು ಪ್ರವಾದಿ(ಸ)ರನ್ನು ಭೇಟಿ ಮಾಡಲು ಬಂದರು. ಪ್ರವಾದಿ(ಸ) ಅವರಿಗೆ ಇಸ್ಲಾಮಿನ ಬಗ್ಗೆ ವಿವರಿಸುತ್ತಿದ್ದರು. ಅದೇ ಸಮಯದಲ್ಲಿ ಪ್ರವಾದಿ(ಸ)ರ ಓರ್ವ ಅಂಧ ಮತ್ತು ಬಡ ಅನುಯಾಯಿ ಹ. ಅಬ್ದುಲ್ಲಾ ಬಿನ್ ಉಮ್ಮೆ ಮಖ್ತೂಮ್(ರ) ಪ್ರವಾದಿ(ಸ)ರನ್ನು ಭೇಟಿ ಮಾಡಲು ಬಂದರು ಮತ್ತು ಇಸ್ಲಾಮಿನ ಬಗ್ಗೆ ಪ್ರವಾದಿ(ಸ)ರಿಗೆ ಕೆಲ ಪ್ರಶ್ನೆಗಳನ್ನು ಕೇಳಿದರು. ಪ್ರವಾದಿ(ಸ) ಮುಖಂಡರ ಜೊತೆ ಮಾತುಕತೆಯಲ್ಲಿ ನಿರತರಾಗಿದ್ದರಿಂದ ಹ. ಅಬ್ದುಲ್ಲಾ ಬಿನ್ ಉಮ್ಮೆ ಮಖ್ತೂಮ್(ರ)ರ ಕಡೆಗೆ ಗಮನ ಹರಿಸಲಿಲ್ಲ.

ಸಭೆಯಲ್ಲಿ ಹಾಜರಿದ್ದ ಮುಖಂಡರು ಇಸ್ಲಾಮಿನ ಬಗ್ಗೆ ಆಸಕ್ತರಿರಲಿಲ್ಲ. ಆದರೆ ಹ. ಅಬ್ದುಲ್ಲಾ ಬಿನ್ ಉಮ್ಮೆ ಮಖ್ತೂಮ್(ರ) ಇಸ್ಲಾಮಿನ ಕುರಿತು ಆಸಕ್ತಿ ಹೊಂದಿದ್ದರು. ಇಸ್ಲಾಮಿನ ಬಗ್ಗೆ ಹ. ಅಬ್ದುಲ್ಲಾ ಬಿನ್ ಉಮ್ಮೆ ಮಖ್ತೂಮ್(ರ) ಉತ್ಸುಕರಾಗಿದ್ದು, ಅವರೋರ್ವ ಅಂಧರಾಗಿದ್ದು ಮುಖಂಡರ ನಡುವೆ ಮಾತುಕತೆಯಲ್ಲಿ ಅವರ ಕಡೆಗೆ ಪ್ರವಾದಿ(ಸ) ಗಮನ ನೀಡದಿರುವುದನ್ನು ಅಲ್ಲಾಹ್ ಆಕ್ಷೇಪಿಸುತ್ತಾ ಈ ಆಯತ್‌ಗಳನ್ನು ಅವತೀರ್ಣಗೊಳಿಸಿದರು.

" ಅವರು ಮುಖ ಸಿಂಡರಿಸಿ ಕೊಂಡರು ಮತ್ತು ನಿರ್ಲಕ್ಷಿಸಿದರು. ಅವರ ಬಳಿಗೆ ಆ ಅಂಧನು ಬಂದುದಕ್ಕಾಗಿ." (ಕುರ್‌ಆನ್ 80: 1–11)

ಪ್ರವಾದಿಗಳು ಪ್ರಮಾದವಶಾತ್ ತಪ್ಪು ಮಾಡಿದರೆ ಅಲ್ಲಾಹ್ ಅವರನ್ನು ತಿದ್ದುವನು.

* ಹ. ಯೂನುಸ್(ಅ) ನೈನವಾ ಸಮುದಾಯಕ್ಕೆ ಪ್ರವಾದಿಯಾಗಿ

ನಿಯೋಜಿಸಲ್ಪಟ್ಟಿದ್ದರು. ನೈನವಾ ಪಟ್ಟಣವು ಬಾಗ್ದಾದ್‌ನಿಂದ ಸುಮಾರು 250 ಕಿ. ಮೀ. ದೂರದಲ್ಲಿದೆ. ಹ. ಯೂನುಸ್(ಅ) ದೀರ್ಘ ಕಾಲದವರೆಗೆ ಜನರಿಗೆ ಅಲ್ಲಾಹನ ಸಂದೇಶವನ್ನು ತಲುಪಿಸುವ ಕಾರ್ಯವನ್ನು ಅಲ್ಲಾಹ್ ಮಾಡಿದರು. ಆದರೆ ಜನರು ಅವರ ಬೋಧನೆಗೆ ಕಿವಿಗೊಡಲಿಲ್ಲ. ಕೊನೆಗೆ ಹ. ಯೂನುಸ್(ಅ) ಕೋಪಗೊಂಡು, ಜನರಿಗೆ ಶಾಪ ಹಾಕಿ ನೈನವಾ ಪಟ್ಟಣವನ್ನು ತ್ಯಜಿಸಿದರು.

ಹ. ಯೂನುಸ್(ಅ)ರಿಗೆ ಪ್ರವಾದಿತ್ವದ ಹೊಣೆಗಾರಿಕೆಯ ನಡುವೆ ನೈನವಾ ಪಟ್ಟಣವನ್ನು ತ್ಯಜಿಸಲು ಅಲ್ಲಾಹ್ ಅನುಮತಿ ನೀಡಿರಲಿಲ್ಲ. ಆದುದರಿಂದ ಅಲ್ಲಾಹ್ ಹ. ಯೂನುಸ್(ಅ)ರನ್ನು ಶಿಕ್ಷಿಸ ಬಯಸಿದನು. ಹ. ಯೂನುಸ್(ಅ) ಒಚಿದು ಹಡಗಿನಲ್ಲಿ ಕುಳಿತು ಪ್ರಯಾಣ ಬೆಳೆಸಿದ್ದರು. ದಾರಿಯಲ್ಲಿ ಚಂಡ ಮಾರುತವು ಎದ್ದಿತು. ಹಡಗಿನ ನಾವಿಕರು ಹ. ಯೂನುಸ್(ಅ)ರನ್ನು ಸಮುದ್ರದಲ್ಲಿ ಎಸೆದರು. ಒಂದು ತಿಮಿಂಗಿಲವು ಹ. ಯೂನುಸ್(ಅ)ರನ್ನು ನುಂಗಿತು.

ಹ. ಯೂನುಸ್(ಅ)ರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರು ಅಲ್ಲಾಹನಲ್ಲಿ ಕ್ಷಮೆ ಯಾಚಿಸಿದರು. ಅಲ್ಲಾಹ್ ಅವರನ್ನು ಕ್ಷಮಿಸಿ ತಿಮಿಂಗಿಲದ ಹೊಟ್ಟೆಯಿಂದ ಹೊರ ಬರುವಂತೆ ಮಾಡಿದನು. (ಪವಿತ್ರ ಕುರ್‌ಆನ್ 11:87)

* ಅಲ್ಲಾಹ್ ಏಕೈಕನಾಗಿರುವನೆಂದೂ, ಆತನಿಗೆ ಯಾರೂ ಭಾಗೀದಾರರಿಲ್ಲವೆಂದೂ, ಮರಣದ ಬಳಿಕ ಎಲ್ಲರಿಗೂ ಒಂದು ದಿನ ಅಲ್ಲಾಹನೆದುರು ಹಾಜರಾಗಲಿಕ್ಕಿದೆ ಎಂಬುದು ಪ್ರವಾದಿ ಮುಹಮ್ಮದ್(ಸ)ರ ಬೋಧನೆಯ ತಿರುಳಾಗಿತ್ತು.

ಕುರೈಶರು ವಿಶ್ವಾಸವುಳ್ಳವರಾಗಿದ್ದರು. ಆದರೆ ಅವರು ಅಲ್ಲಾಹನೊಂದಿಗೆ ಅನೇಕ ವಿಗ್ರಹಗಳನ್ನು, ದೇವಿ–ದೇವತೆಗಳನ್ನು ಪೂಜಿಸುತ್ತಿದ್ದರು. ಈ ದೇವಿ–ದೇವತೆಗಳು ಅಲ್ಲಾಹನ ಸಹಾಯಕರೆಂದು ಅವರು ನಂಬಿದ್ದರು.

ಕುರೈಶರು, ಹ. ಮುಹಮ್ಮದ್(ಸ)ರವರಿಗೆ, ಕುರೈಶರ ದೇವಿ–ದೇವತೆಗಳನ್ನು ಒಪ್ಪಿಕೊಂಡಲ್ಲಿ, ಅವರೂ ಹ. ಮುಹಮ್ಮದ್(ಸ) ಬೋಧಿಸುತ್ತಿದ್ದ ಇಸ್ಲಾಮ್ ಧರ್ಮವನ್ನು ಪಾಲಿಸುವುದಾಗಿ ಷರತ್ತು ವಿಧಿಸಿದ್ದರು. ಈ ಸಂದರ್ಭದಲ್ಲಿ ಅಲ್ಲಾಹ್ ಕುರ್‌ಆನಿನ ಈ ಕೆಳಗಿನ ಆಯತ್‌ಗಳನ್ನು ಅವತೀರ್ಣಗೊಳಿಸಿದನು.

"ಓ ಪೈಗಂಬರರೇ, ನೀವು ನಮ್ಮ ಹೆಸರಲ್ಲಿ ನಿಮ್ಮ ಕಡೆಯಿಂದ ಏನನ್ನಾದರೂ ಕೃತಕವಾಗಿ ಸೃಷ್ಟಿಸಿ ಮಾಡಲೆಂದು, ನಿಮ್ಮನ್ನು ಗೊಂದಲಕ್ಕೆ ಸಿಲುಕಿಸಿ, ನಾವು ನಿಮಗೆ ಅವತೀರ್ಣಗೊಳಿಸುತ್ತಿರುವುದರಿಂದ ನಿಮ್ಮನ್ನು ತಿರುಗಿಸಿ ಬಿಡಬೇಕೆಂದು ಅವರು ತಮ್ಮಿಂದಾದಷ್ಟು ಪ್ರಯತ್ನಿಸಿದ್ದಾರೆ. ನೀವು ಹಾಗೆ ಮಾಡುತ್ತಿದ್ದರೆ ಅವರು ನಿಮ್ಮನ್ನು ಆಪ್ತ ಮಿತ್ರನಾಗಿ ಮಾಡಿಕೊಳ್ಳುತ್ತಿದ್ದರು. ನಾವು ನಿಮ್ಮನ್ನು ಸ್ಥಿರಚಿತ್ತರನ್ನಾಗಿ ಮಾಡದಿರುತ್ತಿದ್ದರೆ ನೀವು ಅವರ ಕಡೆಗೆ ಅಲ್ಪ ಸ್ವಲ್ಪವಾದರೂ ವಾಲಿ ಬಿಡುತ್ತಿದ್ದಿರಿ. ನೀವು ಹಾಗೆ ಮಾಡುತ್ತಿದ್ದರೆ ನಾವು ನಿಮಗೆ ಇಹಲೋಕದಲ್ಲೂ, ಪರಲೋಕದಲ್ಲೂ ಇಮ್ಮಡಿ ಯಾತನೆಯ ಸವಿಯನ್ನುಣಿಸುತ್ತಿದ್ದೆವು. ಅನಂತರ ನೀವು ನಮ್ಮ ವಿರುದ್ಧ ಯಾವ ಸಹಾಯಕನನ್ನೂ ಪಡೆಯುತ್ತಿರಲಿಲ್ಲ". (ಪವಿತ್ರ ಕುರ್‌ಆನ್ 17:73–25)

ಸಾರಾಂಶ:

ಅಲ್ಲಾಹನು ಮನುಷ್ಯರನ್ನು ಸೃಷ್ಟಿಸುವ ಮೊದಲೇ ಪ್ರವಾದಿಗಳನ್ನು ಸೃಷ್ಟಿಸಿದನು. ಪ್ರವಾದಿಗಳು ಕುಲೀನ ಮನೆತನಕ್ಕೆ ಸೇರಿದವರಾಗಿದ್ದರು. ಪ್ರವಾದಿಗಳು ಬುದ್ಧಿವಂತರು, ಶ್ರೇಷ್ಟ ಮಟ್ಟದ ನಡವಳಿಕೆ, ಚಾರಿತ್ರ್ಯ ಹೊಂದಿದವರಾಗಿದ್ದರು.

ಪ್ರವಾದಿಗಳು ಸಕಲ ದೋಷಗಳಿಂದ ಮುಕ್ತರಾಗಿದ್ದರು. ಅದುದರಿಂದ ಯಾವುದೇ ತಪ್ಪು ಆಗದಂತೆ ಸೃಷ್ಟಿಕರ್ತನು ರಕ್ಷಿಸುತ್ತಿದ್ದನು. ಈ ಜಗತ್ತಿಗೆ ಸುಮಾರು 1,24,000 ಪ್ರವಾದಿಗಳು ಬಂದಿರುವರು. ಪ್ರವಾದಿಗಳು ಜನರಿಗೆ ಅಲ್ಲಾಹನ ಸಂದೇಶವನ್ನು ತಲುಪಿಸಿ, ಜನರನ್ನು ಸಂಸ್ಕರಿಸುವ ಕಾರ್ಯವನ್ನು ಮಾಡಿದರು.

************

- ऋतस्य पन्था न तरन्ति दुष्कृत

(Rig veda 8:73:6)

सत्य के मार्ग को दुष्कर्मी कभी पार नहीं कर पाते। अर्थात, जिसके क्रम ग़लत होंगे वह कभी सफल न होगा।

# ಪ್ರವಾದಿಗಳ ಶತ್ರುಗಳು

ಹ. ಝುಕರಿಯ್ಯಾ(ಅ)

ಹ. ಝುಕರಿಯ್ಯಾ(ಅ) ಓರ್ವ ಹೆಸರಾಂತ ಪ್ರವಾದಿಯಾಗಿದ್ದರು. ಜನರು ಅವರ ಬೋಧನೆಯನ್ನು ಸ್ವೀಕರಿಸಲು ನಿರಾಕರಿಸಿದರು. ಕೊನೆಗೆ ಜನರು ಹ. ಝುಕರಿಯ್ಯಾ(ಅ)ರವರನ್ನು ಹತ್ಯೆ ಮಾಡಲು ನಿರ್ಧರಿಸಿದರು. ಹ. ಝುಕರಿಯ್ಯಾ(ಅ) ತಮ್ಮ ಪ್ರಾಣ ಉಳಿಸಲು, ಊರು ಬಿಟ್ಟು ಹೊರಟರು. ಆದರೆ ಪ್ರಾಣ ಉಳಿಸಿಕೊಳ್ಳಲು ಯಾವುದೇ ತಾಣ ಅವರಿಗೆ ದೊರಕಲಿಲ್ಲ. ಸನಿಹದಲ್ಲಿ ಒಂದು ಮರವಿತ್ತು. ಹ. ಝುಕರಿಯ್ಯಾ(ಅ) ತನಗೆ ರಕ್ಷಣೆ ಒದಗಿಸುವಂತೆ ಮರವನ್ನು ಕೊಂದರು. ಮರವು ತನ್ನ ಕಾಂಡವನ್ನು ತೆರೆದು ಹ. ಝುಕರಿಯ್ಯಾ(ಅ)ರಿಗೆ ರಕ್ಷಣೆ ನೀಡಿತು. ಶೈತಾನನು ಇದನ್ನೆಲ್ಲವನ್ನೂ ಗಮನಿಸುತ್ತಿದ್ದನು.

ಅಷ್ಟರಲ್ಲಿ ಜನರು ಹ. ಝುಕರಿಯ್ಯಾ(ಅ)ರನ್ನು ಹುಡುಕುತ್ತಾ ಮರದ ಬಳಿಗೆ ತಲುಪಿದರು. ಶೈತಾನನು ಹ. ಝುಕರಿಯ್ಯಾ(ಅ) ಮರದ ಕಾಂಡದಲ್ಲಿ ಅಡಗಿರುವುದನ್ನು ಜನರಿಗೆ ತಿಳಿಸಿದನು. ಜನರು ಹ. ಝುಕರಿಯ್ಯಾ(ಅ)ರೊಂದಿಗೆ ಮರದ ಕಾಂಡವನ್ನು ಗರಗಸದಿಂದ ಕೊಯ್ದರು. ಈ ರೀತಿ ಹ. ಝುಕರಿಯ್ಯಾ(ಅ)ರ ಅಂತ್ಯವಾಯಿತು.

ಹ. ಯಾಹ್ಯಾ(ಅ): ಹ. ಯಾಹ್ಯಾ(ಅ) ಸಹ ಪ್ರಖ್ಯಾತ ಪ್ರವಾದಿಯಾಗಿದ್ದರು. ಹ. ಯಾಹ್ಯಾ(ಅ)ರವರ ಪ್ರಾಂತ್ಯದ ರಾಜ ಊಚುಡಿಠ ಂಚಿಣುಠಿಛಿ ತನ್ನ ಸಹೋದರ ಸಂಬಂಧಿಯನ್ನು ವಿವಾಹವಾಗ ಬಯಸಿದ್ದನು. ಇದು ಕಾನೂನಿಗೆ ವಿರುದ್ಧವಾಗಿದ್ದುದರಿಂದ ಯಾಹ್ಯಾ(ಅ) ಇದನ್ನು ವಿರೋಧಿಸಿದರು. ರಾಜನು ವಿವಾಹವಾಗ ಬಯಸಿದ್ದ ಸಹೋದರ ಸಂಬಂಧಿ ಮತ್ತು ಆಕೆಯ ತಾಯಿಗೆ ಹ. ಯಾಹ್ಯಾ(ಅ)ರ ವಿರೋಧ ಅರೋಚಕವೆನಿಸಿತು. ಅವರು ರಾಜನ ಕಿವಿ ತುಂಬಿ, ಹ. ಯಾಹ್ಯಾ(ಅ)ರ ತಲೆ ದಂಡಕ್ಕೆ ಬೇಡಿಕೆ ಇಟ್ಟರು. ರಾಜನು ಅವರನ್ನು ಸಂತುಷ್ಟಗೊಳಿಸಲು ಹ. ಯಾಹ್ಯಾ(ಅ)ರ ತಲೆಯನ್ನು ದೇಹದಿಂದ ಬೇರ್ಪಡಿಸಿ ಕಾಣಿಕೆಯಾಗಿ ನೀಡಿದನು.

ಹ. ಈಸಾ(ಅ)

ಹ. ಈಸಾ(ಅ) ಸಹ ಓರ್ವ ಪ್ರಖ್ಯಾತ ಪ್ರವಾದಿಯಾಗಿದ್ದರು. ತಂದೆ ಇಲ್ಲದೆಯೇ ಅವರು ಜನಿಸಿದ್ದರು. ಅವರು ಶಿಶುವಾಗಿರುವಾಗಲೇ ಜನರೊಂದಿಗೆ ಮಾತನಾಡಿ ಸೃಷ್ಟಿಕರ್ತನ ಸಂದೇಶವನ್ನು ನೀಡಿದ್ದರು.

ಅಲ್ಲಾಹನು ನೀಡಿದ ಶಕ್ತಿಯಿಂದಾಗಿ ಹ. ಈಸಾ(ಅ) ಅನೇಕ ಪವಾಡಗಳನ್ನು ಮಾಡಿದ್ದರು. ಕುರುಡರಿಗೆ ಕಣ್ಣು ಬರಿಸುತ್ತಿದ್ದರು, ರೋಗಗಳನ್ನು ವಾಸಿಮಾಡುತ್ತಿದ್ದರು, ಅನೇಕ ಮೃತ ಹೊಂದಿದವರನ್ನು ಪುನಃ ಜೀವಂತಗೊಳಿಸಿದ್ದರು.

" ನಾನು ಈ ಮೊದಲಿನ ಧರ್ಮವನ್ನು ಅಳಿಸಿ ಹೊಸ ಧರ್ಮವನ್ನು ಸ್ಥಾಪಿಸಲು ಬಂದಿರುವುದಿಲ್ಲ . ನಾನು ಹಳೆಯ ಧರ್ಮವನ್ನು ಪುನಃ ಸಂಸ್ಥಾಪಿಸಲು ಬಂದಿರುವೆನು ಎಂದು ಹ. ಈಸಾ(ಅ) ನುಡಿದಿರುವರು. (ಬೈಬಲ್, ಸೇಂಟ್ ಮ್ಯಾಥ್ಯೂ 5:7)

ಹ. ಈಸಾ(ಅ) 32 ವರ್ಷ ಪ್ರಾಯದವರೆಗೆ ಜನರಿಗೆ ಧರ್ಮದ ಬೋಧನೆಯನ್ನು ನೀಡಿದರು. ಆದರೆ ಕೆಲ ಜನರಿಗೆ ಹ. ಈಸಾ(ಅ)ರ ಕಾರ್ಯಗಳು ಹಿಡಿಸಲಿಲ್ಲ. ಅವರು ಸಂಚು ರೂಪಿಸಿ, ರಾಜ ದ್ರೋಹದ ಆಪಾದನೆಯನ್ನು ಹೊರಿಸಿ ಅವರನ್ನು ಸೆರೆ ಹಿಡಿಯುವಂತೆ ಮಾಡಿದರು. ಆದರೆ ಅಲ್ಲಾಹನು ಅವರನ್ನು ಜೀವಂತ ಮೇಲಕ್ಕೆತ್ತಿಕೊಂಡನು.

ಪ್ರವಾದಿಗಳ ಶತ್ರುಗಳು ಯಾರು?

* ಮೇಲೆ ಕೇವಲ ಮೂರು ಪ್ರವಾದಿಗಳಿಗೆ ಸಂಬಂಧಿಸಿದ ಘಟನೆಗಳನ್ನು ನೀಡಲಾಗಿದೆ. ಆದರೆ ಇತಿಹಾಸದಲ್ಲಿ ಅನೇಕ ಪ್ರವಾದಿಗಳು ಹತ್ಯೆಗೆ ಈಡಾಗಿರುವರು.

ಪ್ರವಾದಿಗಳು ಯಾವ ಕಾರಣಕ್ಕಾಗಿ ಕೊಲ್ಲಲ್ಪಟ್ಟರು? ಅವರು ಮಾಡಿದ ತಪ್ಪು ಏನಾಗಿತ್ತು?

ಜನಸಾಮಾನ್ಯರು ಎಲ್ಲಾ ಕಾಲಗಳಲ್ಲೂ ಶೋಷಣೆಗೆ ಒಳಗಾಗುತ್ತಾ ಬಂದಿದ್ದಾರೆ. ಜನ ಸಾಮಾನ್ಯರ ಶೋಷಣೆ ರಾಜಕೀಯವಾಗಿಯೂ ನಡೆಯುತ್ತಿದೆ. ಧಾರ್ಮಿಕವಾಗಿಯೂ ನಡೆಯುತ್ತಿದೆ. ಪ್ರವಾದಿಗಳು ಸಮಾಜದಲ್ಲಿ ಶೋಷಣೆ ನಡೆಯಲು ಆಸ್ಪದ ನೀಡುವುದಿಲ್ಲ. ಈ ಕಾರಣದಿಂದಾಗಿ ಸಮಾಜದ ರಾಜಕೀಯ ಶಕ್ತಿಗಳು ಮತ್ತು ಹಣ ಬಲ ವುಳ್ಳವರು ಪ್ರವಾದಿಗಳನ್ನು ವಿರೋಧಿಸುತ್ತಿದ್ದರು. ಪ್ರವಾದಿಗಳ ಅಸ್ತಿತ್ವವನ್ನೇ ಅಳಿಸಲು ಪ್ರಯತ್ನಿಸುತ್ತಿದ್ದರು.

ಪ್ರವಾದಿಗಳ ವಿರೋಧ ಅವರ ಜೀವಿತಾವಧಿಗಷ್ಟೇ ಸೀಮಿತವಾಗಿರಲಿಲ್ಲ. ಪ್ರವಾದಿಗಳ ನಿಧನ ನಂತರವೂ ವಿರೋಧ ಮುಂದುವರಿಯುತ್ತಿತ್ತು. ಈ ವಿರೋಧ ಎರಡು ರೀತಿಯಲ್ಲಿ ಆಗುತ್ತಿತ್ತು. ಒಂದು ಧಾರ್ಮಿಕ ಗ್ರಂಥಗಳನ್ನು ತಿರುಚಲಾಗುತ್ತಿತ್ತು. ಮತ್ತೊಂದು ಪ್ರವಾದಿಯವರ ಬಗ್ಗೆ ಕಪೋಲಕಲ್ಪಿತ ವಿಷಯಗಳನ್ನು ಹರಡಲಾಗುತ್ತಿತ್ತು.

ಉದಾಹರಣೆಗೆ ಬೈಬಲ್ ಅನ್ನು ಹ. ಈಸಾ(ಅ)ರ 100ವರ್ಷಗಳ ನಂತರ ಲಿಖಿತ ರೂಪದಲ್ಲಿ ತರಲಾಯಿತು. ಬೈಬಲ್‌ನಲ್ಲಿ ಕೆಲವು ಕಡೆ ಊಹಿಸಲಾಗದಂತಹ ವಿಷಯಗಳನ್ನು ಸೇರಿಸಲಾಗಿದೆ. ಹ. ಲೂತ್(ಅ)ರನ್ನು ಸಲಿಂಗ ಕಾಮಿಗಳ ಪ್ರವಾದಿ ಎಂದು ಉಲ್ಲೇಖಿಸಿದೆ. ಮುಂದುವರೆದು ಹ. ಲೂತ್(ಅ) ತಮ್ಮ ಪುತ್ರಿಯರೊಂದಿಗೆ ಲೈಂಗಿಕ ಕ್ರಿಯೆ ನಡೆಸಿದರು ಎಂದೂ ಹೇಳಲಾಗಿದೆ!

ಇದೇ ರೀತಿ ಹ. ಈಸಾ(ಅ) ಜೀವನದಲ್ಲಿ ವಿವಾಹವಾಗದಿದ್ದರೂ, ಅವರು ರಹಸ್ಯವಾಗಿ ............... ರವರನ್ನು ವಿವಾಹವಾಗಿದ್ದರೆಂದೂ, ಅವರಿಗೆ ಸೇಂಟ್ ಮೈಕಲ್ ಹೆಸರಿನ ಪುತ್ರನು ಇದ್ದನೆಂದೂ ಪ್ರಚಾರ ನಡೆಸಲಾಗಿದೆ.

ಪ್ರವಾದಿ ದಾವೂದ್(ಅ)ರ ಬಗ್ಗೆಯೂ ಬೈಬಲ್‌ನಲ್ಲಿ ಅಪಮಾನಕರ ವಿಷಯಗಳಿವೆ. ಹ. ದಾವೂದ್(ಅ) ಓರ್ವ ಸೇನಾಧಿಪತಿಯ ಪತ್ನಿಯ ಮೇಲೆ ಮೋಹಿತರಾದರೆಂದೂ, ಆಕೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಸೇನಾಧಿಪತಿಯನ್ನು ರಣರಂಗಕ್ಕೆ ಕಳುಹಿಸಿದ್ದನೆಂದು ತಿಳಿಸಲಾಗಿದೆ.

ಹ. ದಾವೂದ್(ಅ) ಓರ್ವ ಶ್ರೇಷ್ಠ ಪ್ರವಾದಿಯಾಗಿದ್ದರು. ದಿನ ಬಿಟ್ಟು ದಿನ ಉಪವಾಸ ಆಚರಿಸುತ್ತಿದ್ದರು. 'ಝಬೂರ್' ದಿವ್ಯ ಗ್ರಂಥ ಅವರ ಮೇಲೆ ಅವತೀರ್ಣಗೊಂಡಿತ್ತು. ಅವರಿಗೆ ಅಲ್ಲಾಹನು ಸುಂದರ ಕಂಠವನ್ನು ನೀಡಿದ್ದನು. ಅವರು 'ಝಬೂರ್' ಪಠಿಸುತ್ತಿದ್ದರೆ ಪರ್ವತಗಳು ಸಹ ಪಠಿಸುತ್ತಿದ್ದವು. ಅವರ ಪುತ್ರ ಹ. ಸುಲೈಮಾನ್(ಅ) ಓರ್ವ ಪ್ರವಾದಿಯಾಗಿದ್ದರು.

ಹ. ದಾವೂದ್(ಅ)ರಿಗೆ 99 ಪತ್ನಿಯರಿದ್ದರು. ಅವರು ಇಚ್ಛಿಸುತ್ತಿದ್ದರೆ ಇನ್ನೂ 200 ಪತ್ನಿಯರನ್ನೂ ಹೊಂದಬಹುದಾಗಿತ್ತು. ಓರ್ವ ಪ್ರವಾದಿ, ತನ್ನ ಸೇನಾಧಿಕಾರಿಯ ಪತ್ನಿಯನ್ನು ಮೋಹಿಸಲು ಸಾಧ್ಯವೇ? ಆದರೆ ಈ ರೀತಿಯ ಮಾತುಗಳನ್ನು ಬೈಬಲ್‌ನಲ್ಲಿ ಬರೆಯಲಾಗಿದೆ.

************

# ಹ. ಮುಹಮ್ಮದ್(ಸ) ಹಿಂಸೆಯನ್ನು ಬೋಧಿಸಿದ್ದರೇ?

* ಕೆಲ ಜನರು ಹ. ಮುಹಮ್ಮದ್(ಸ) ಹಿಂಸೆಯನ್ನು ಬೋಧಿಸಿದ್ದರು ಎಂದು ಆಪಾದಿಸುತ್ತಾರೆ. ಹ. ಮುಹಮ್ಮದ್(ಸ) ಹಿಂಸೆಯನ್ನು ಬೋಧಿಸಿದ್ದರೋ ಅಥವಾ ಸ್ವಯಂ ಹಿಂಸೆಗೆ ಗುರಿಯಾಗಿಯೂ, ಅಹಿಂಸೆಯನ್ನು ಬೋಧಿಸಿದ್ದರೋ ಎಂಬುದನ್ನು ಈ ಅಧ್ಯಾಯದಲ್ಲಿ ಪರಿಶೀಲಿಸೋಣ.

* ಅಲ್ಲಾಹ್ ಹ. ಮುಹಮ್ಮದ್(ಸ)ರನ್ನು 40ನೇ ವರ್ಷ ವಯಸ್ಸಿನಲ್ಲಿ ಪ್ರವಾದಿ ಹೊಣೆಗಾರಿಕೆಯನ್ನು ವಹಿಸಿದ್ದನು. ಅವರು 63ನೇ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದ್ದರು. ಪ್ರವಾದಿತ್ವದ ಆರಂಭಿಕ 15 ವರ್ಷಗಳಲ್ಲಿ ಯಾವುದೇ ರೀತಿಯ ರಕ್ಷಣೆ ಮಾಡಲು ಮುಸ್ಲಿಮರಿಗೆ ಅನುಮತಿ ಇರಲಿಲ್ಲ. ಹ. ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳು ಅವರ ಮೇಲಿನ ಹಿಂಸೆ ಮತ್ತು ದೌರ್ಜನ್ಯವನ್ನು ಅತ್ಯಂತ ತಾಳ್ಮೆಯಿಂದ ಸಹಿಸಿದರು. ಹಿಂಸೆಯು ಮಿತಿ ಮೀರಿದಾಗ ಕೆಲ ಅನುಯಾಯಿಗಳು ಅಬಿಸೀನಿಯಾಕ್ಕೆ ವಲಸೆ ಹೋದರು. ಪ್ರವಾದಿತ್ವದ 13ನೇ ವರ್ಷದಲ್ಲಿ ಹ. ಮುಹಮ್ಮದ್(ಸ) ತಮ್ಮ ಅನುಯಾಯಿಗಳೊಂದಿಗೆ ಮದೀನಾ ಹಿಜ್ರತ್(ವಲಸೆ) ಮಾಡಲು ನಿರ್ಬಂಧಿತರಾದರು.

* ಪ್ರವಾದಿ ಮುಹಮ್ಮದ್(ಸ), ಪ್ರವಾದಿತ್ವದ ಆರಂಭದ ಮೂರು ವರ್ಷಗಳಲ್ಲಿ ರಹಸ್ಯವಾಗಿ ಸಂದೇಶ ಪ್ರಚಾರ ಮಾಡಿದರು. ಈ ಅವಧಿಯಲ್ಲಿ ಜನರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಧರ್ಮದ ಬೋಧನೆ ನೀಡಿದರು. ನಾಲ್ಕನೇಯ ವರ್ಷದಲ್ಲಿ ಸಾರ್ವಜನಿಕವಾಗಿ ಅಲ್ಲಾಹನ ಕಡೆಗೆ ಕರೆ ನೀಡುವಂತೆ ಅವರಿಗೆ ಆದೇಶ ನೀಡಲಾಯಿತು.

* ಪ್ರವಾದಿತ್ವದ ನಾಲ್ಕನೇಯ ವರ್ಷದಲ್ಲಿ, ಹ. ಮುಹಮ್ಮದ್(ಸ) ಕಅಬಃದ ಬಳಿ ಪ್ರವಚನ ನೀಡಿದಾಗ ಜನರು ಅವರ ಸುತ್ತ ಸೇರಿ ಅವರ ಮೇಲೆ ಆಕ್ರಮಣ ನಡೆಸಿದರು. ಹ. ಹಾರಿಸ್ ಬಿನ್ ಹಾಲ್, ಹ. ಖದೀಜ(ರ)ರ ಹಿರಿಯ ಪುತ್ರ ಹ. ಮುಹಮ್ಮದ್(ಸ)ರನ್ನು ರಕ್ಷಿಸುತ್ತಾ ಹುತಾತ್ಮರಾದರು.

* ಅಬೂ ಲಹಬ್ ಮತ್ತು ಉಕ್ಬ ಬಿನ್ ಅಬು ಮುಯಿತ್ ಪ್ರವಾದಿ(ಸ)ರ ನೆರೆ ಹೊರೆಯವರಾಗಿದ್ದರು. ಪ್ರವಾದಿ(ಸ)ರ ಮನೆಯೊಳಗೆ ಅವರು ಕಸವನ್ನು ಎಸೆಯುತ್ತಿದ್ದರು. ಅಬು ಲಹಬ್‌ನ ಪತ್ನಿ ಪ್ರವಾದಿ(ಸ) ಹಾದು ಹೋಗುತ್ತಿದ್ದ ದಾರಿಯಲ್ಲಿ ಮುಳ್ಳು ಕಂಬಿಗಳನ್ನು ಹಾಸುತ್ತಿದ್ದಳು.

* ಅಬೂ ಲಹಬ್ ಮುಹಮ್ಮದ್(ಸ)ರ ಚಿಕ್ಕಪ್ಪನಾಗಿದ್ದನು. ಹ. ಮುಹಮ್ಮದ್(ಸ)ರ ಎರಡು ಪುತ್ರಿಯರನ್ನು ಆತನ ಎರಡು ಪುತ್ರರು ವಿವಾಹವಾಗಿದ್ದರು. ಪ್ರವಾದಿತ್ವದ ನಂತರ ಅಬು ಲಹಬ್‌ನ ಒತ್ತಾಯದ ಮೇರೆಗೆ ಆತನ ಇಬ್ಬರು ಪುತ್ರರೂ, ತಮ್ಮ ಪತ್ನಿಯರಿಗೆ ವಿಚ್ಛೇದನ ನೀಡಿದರು. ಅರಬ್ ಸಂಪ್ರದಾಯದಲ್ಲಿ ಪತ್ನಿಗೆ ವಿಚ್ಛೇದನ ನೀಡುವುದು ಅತ್ಯಂತ ಅಪಮಾನಕರ ವಿಷಯವಾಗಿತ್ತು.

* ಪ್ರವಾದಿತ್ವದ 5ನೇ ವರ್ಷದಲ್ಲಿ ಹ. ಮುಹಮ್ಮದ್(ಸ) ಕಅಬಃದ ಬಳಿ ನಮಾಝ್ ಮಾಡುತ್ತಿದ್ದಾಗ ಉಕ್ಬ ಬಿನ್ ಅಬಿ ಮುಐತ್ ಹ. ಮುಹಮ್ಮದ್(ಸ)ರ ಕೊರಳ ಮೇಲೆ ಒಂಟೆಯ ಕರುಳುಗಳನ್ನು ಹಾಕಿದನು. ಅವು ಎಷ್ಟು ಭಾರವಿತ್ತೆಂದರೆ ಪ್ರವಾದಿ(ಸ)ರಿಗೆ ತಲೆಯನ್ನೂ ಎತ್ತಲಾಗಲಿಲ್ಲ. ಕೊನೆಗೆ ಈ ವಿಷಯವು ಹ. ಫಾತಿಮ(ರ)ರಿಗೆ ತಿಳಿದು, ಅವರು ಓಡೋಡಿ ಬಂದು ಒಂಟೆಯ ಕರುಳುಗಳನ್ನು ತೆಗೆದು ಹಾಕಿದರು.

* ಒಮ್ಮೆ ಮುಹಮ್ಮದ್(ಸ) ಕಅಬದಲ್ಲಿ ಪ್ರಾರ್ಥಿಸುತ್ತಿದ್ದಾಗ ಉಕ್ಬ ಬಿನ್ ಮುಐತ್ ಅವರ ಕುತ್ತಿಗೆಯ ಸುತ್ತ ಬಟ್ಟೆಯನ್ನು ಹಾಕಿ ಎಳೆಯಲಾರಂಭಿಸಿದನು. ಪ್ರವಾದಿ(ಸ)ರ ಉಸಿರುಗಟ್ಟಿಸಲಾರಂಭಿಸಿತು. ಅಷ್ಟರಲ್ಲಿ ಹ. ಅಬೂಬಕ್ಕರ್ ಸಿದ್ದೀಕ್(ರ) ಆಗಮಿಸಿ ಪ್ರವಾದಿ(ಸ)ರನ್ನು ಬಿಡಿಸಿದರು. ಉಕ್ಬ, ಅಬೂಬಕ್ಕರ್ ಸಿದ್ದೀಕ್(ರ)ರ ಮೇಲೆ ಆಕ್ರಮಣ ಮಾಡಿ ಅವರನ್ನು ಹೊಡೆದರು.

* ಪ್ರವಾದಿ(ಸ)ರ ಅನುಯಾಯಿಯೋರ್ವರು ವರದಿ ಮಾಡಿರುವರು.

"ನನ್ನ ಇಸ್ಲಾಮ್ ಸ್ವೀಕಾರದ ಮೊದಲು ನಡೆದ ಘಟನೆ. ಮಕ್ಕಾದಲ್ಲಿ ಓರ್ವ ಸ್ಫುರ ದ್ರೂಪಿ ಯುವಕ ಜನರಿಗೆ ಇಸ್ಲಾಮಿನ ಬಗ್ಗೆ ವಿವರಣೆ ನೀಡುತ್ತಿದ್ದರು. ಆ ಯುವಕ ಯಾರು? ನಾನು ವಿಚಾರಿಸಿದೆ. ಆ ಯುವಕ ಕುರೈಶ್ ಪಂಗಡದವನೆಂದೂ, ಆತನು ಧರ್ಮಭ್ರಷ್ಟನಾಗಿರುವನೆಂದೂ ಜನರು ತಿಳಿಸಿದರು. ಯುವಕನು ಮುಂಜಾನೆಯಿಂದ ಮಧ್ಯಾಹ್ನದ ತನಕ ಧರ್ಮವನ್ನು ಬೋಧಿಸಿದರು. ಅಷ್ಟರಲ್ಲಿ ಒಬ್ಬ ವ್ಯಕ್ತಿಯು ಯುವಕನ ಮೇಲೆ ಉಗುಳಿದನು. ಮತ್ತೊಬ್ಬನು ಯುವಕನ ಉಡುಪನ್ನು ಹರಿದನು. ಮೂರನೆಯವನು ಅವರ ಮುಖದ ಮೇಲೆ ಮಣ್ಣನ್ನು ಎರಚಿದನು. ನಾಲ್ಕನೆಯವನು ಯುವಕನ ಕೆನ್ನೆಗೆ ಹೊಡೆದನು. ಇಷ್ಟೆಲ್ಲಾ ನಡೆದರೂ ಯುವಕನು ಯಾವ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ. ಅಷ್ಟರಲ್ಲಿ ಒಬ್ಬಳು ಹುಡುಗಿ ಅಳುತ್ತಾ ಅಲ್ಲಿಗೆ ಬಂದು ನೀರಿನಿಂದ ಮುಖವನ್ನು, ತಲೆಯನ್ನು ಸ್ವಚ್ಛಗೊಳಿಸಿದಳು. ಯುವಕನು ಹುಡುಗಿನ್ನು ಸಾಂತ್ವನಗೊಳಿಸುತ್ತಾ ಹೇಳಿದರು.

"ಮಗಳೇ, ನಿನ್ನ ತಂದೆಯ ಬಗ್ಗೆ ದುಃಖಿಸದಿರು. ಅಲ್ಲಾಹ್ ರಕ್ಷಿಸುವನು. ಒಂದು ದಿನ ನಿಸ್ಸಂಶಯವಾಗಿಯೂ ಇಸ್ಲಾಮ್ ಪ್ರತಿ ಮನೆಯಲ್ಲಿ ದಾಖಲಾಗುವುದು".

* ಹ. ಝೈನಬ್(ರ) ಪ್ರವಾದಿ(ಸ)ರ ಪುತ್ರಿ, ಒಂಟೆಯ ಮೇಲೆ ಮಕ್ಕಃದಿಂದ ಮದೀನಾಕ್ಕೆ ಹೊರಟ್ಟಿದ್ದರು. ಅವರು ಆಗ ಗರ್ಭಿಣಿಯಾಗಿದ್ದರು. ದಾರಿಯಲ್ಲಿ ಇಕ್ರಿಮ ಬಿನ್ ಅಬು ಜಹಲ್ ಮತ್ತು ಆತನ ಅನುಚರರು ಹ. ಝೈನಬ್(ರ)ರ ಒಂಟೆಯನ್ನು ತಡೆದು ಅದರ ಮೇಲೆ ಆಕ್ರಮಣ ಮಾಡಿದರು. ಇದರ ಪರಿಣಾಮವಾಗಿ ಹ. ಝೈನಬ್(ರ) ಒಂಟೆಯಿಂದ ಕೆಳಗೆ ಬಿದ್ದರು. ಅವರಿಗೆ ಗರ್ಭಪಾತವಾಯಿತು. ಈ ಘಟನೆಯ ಕೆಲ ವರ್ಷಗಳಲ್ಲಿ ಅವರು ನಿಧನವೂ ಆಯಿತು.

* ಪ್ರವಾದಿತ್ವದ 7ನೇ ವರ್ಷದಲ್ಲಿ ಕುರೈಶರು ಬನೂ ಹಾಶಿಮ್ ಗೋತ್ರವನ್ನು ಬಹಿಷ್ಕರಿಸಿದರು. ಪ್ರವಾದಿ(ಸ) ಅವರ ಕುಟುಂಬ ಮತ್ತು ಸಂಬಂಧಿಕರು ಮೂರು ವರ್ಷಗಳನ್ನು ಕಣಿವೆಯಲ್ಲಿ ಕಳೆದನು. ಬನೂ ಹಾಶಿಮ್ ಗೋತ್ರದವರೊಂದಿಗೆ ವ್ಯವಹರಿಸುವುದನ್ನು ಅವರಿಗೆ ಆಹಾರ ಸಾಮಗ್ರಿಗಳನ್ನು ನೀಡುವುದನ್ನು

ವಿರೋಧಿಸಲಾಗಿತ್ತು. ಹಸಿವೆಯಿಂದ ಪುಟ್ಟ ಮಕ್ಕಳ ರೋದನವು ಮುಗಿಲು ಮುಟ್ಟಿತ್ತು. ಹಸಿವೆಯನ್ನು ತಾಳಲಾರದೇ ಎಲೆಗಳನ್ನು ಮತ್ತು ಒಣಗಿದ ಚರ್ಮವನ್ನು ಬೇಯಿಸಿ ಕೆಲವರು ತಿಂದರು. ಇಡಿಯ ಬನೂ ಹಾಶಿಮ್ ಗೋತ್ರ ಬಹಳಷ್ಟು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಹ. ಖದೀಜ(ರ)ರಿಗೆ 65 ವರ್ಷ ಮತ್ತು ಪ್ರವಾದಿ(ಸ)ರ ಚಿಕ್ಕಪ್ಪ ಅಬೂ ತಾಲಿಬ್‌ರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಅವರು 3 ವರ್ಷಗಳಲ್ಲಿ ಎಷ್ಟು ಬಳಲಿದರೆಂದರೆ, ಬಹಿಷ್ಕಾರ ಕೊನೆಗೊಂಡ ಒಂದು ವರ್ಷದಲ್ಲಿ ಅವರಿಬ್ಬರೂ ನಿಧನ ಹೊಂದಿದರು.

* ಪ್ರವಾದಿತ್ವದ 10ನೇ ವರ್ಷದಲ್ಲಿ ಹ. ಮುಹಮ್ಮದ್(ಸ) ಇಸ್ಲಾಮಿನ ಸಂದೇಶವನ್ನು ನೀಡಲು ತಾಯಿಫ್ ಪಟ್ಟಣಕ್ಕೆ ತೆರಳಿದರು. ತಾಯಿಫ್‌ನ ಮುಖಂಡರು ಅಬ್‌ದಿಯಾ ಲೈಲ್, ಮಸೂದ್ ಮತ್ತು ಹಬೀಬ್, ಹ. ಮುಹಮ್ಮದ್(ಸ)ರ ಮಾತಿಗೆ ಉಗ್ರವಾಗಿ ಪ್ರತಿಕ್ರಿಯಿಸಿದರು. ಅವರು ಹ. ಮುಹಮ್ಮದ್(ಸ)ರ ತಿರಸ್ಕರಿಸಿದರಷ್ಟೇ ಅಲ್ಲ, ತಾಯಿಫ್ ಪಟ್ಟಣದ ಪೋಲಿ, ಪುಂಡರನ್ನು ಹ. ಮುಹಮ್ಮದ್(ಸ)ರ ಮೇಲೆ ತಿರುಗಿ ಬೀಳಲು ಹುರಿದುಂಬಿಸಿದರು. ಇವರು ಹ. ಮುಹಮ್ಮದ್(ಸ)ರನ್ನು ಹೀಯಾಳಿಸಿದರು, ಗೇಲಿ ಮಾಡಿದರು ಮತ್ತು ಅವರ ಮೇಲೆ ಕಲ್ಲೆಸೆದರು. ಪ್ರವಾದಿ(ಸ) ತಾಯಿಫ್‌ನಿಂದ ತೆರಳುವಾಗ ಅವರನ್ನು ಹಿಂಬಾಲಿಸಿದರು. ಪ್ರವಾದಿ(ಸ) ಕಲ್ಲಿನ ಏಟುಗಳಿಂದ ಗಾಯಗೊಂಡರು. ಅವರ ಕಾಲುಗಳು ರಕ್ತಸಿಕ್ತಗೊಂಡವು. ಅವರ ಚಪ್ಪಲಿಯಲ್ಲಿ ರಕ್ತವು ಹರಿದು ಚಪ್ಪಲಿ ಪಾದಕ್ಕೆ ಅಂಟಿಕೊಂಡಿತು.

ಹ. ಮುಹಮ್ಮದ್(ಸ) ಬಳಲಿ, ದಾರಿಯಲ್ಲಿ ಕುಸಿದಾಗ, ಪುಂಡರು ಅವರನ್ನು ಎತ್ತಿ ಮುಂದೆ ನಡೆಯುವಂತೆ ಮಾಡುತ್ತಿದ್ದರು. ಪ್ರವಾದಿ(ಸ) ಈ ರೀತಿ ನಡೆಯುತ್ತಾ ತಾಯಿಫ್ ಪಟ್ಟಣದ ಹೊರಭಾಗದಲ್ಲಿ ಪ್ರಜ್ಞಾಹೀನರಾಗಿ ಬಿದ್ದು ಬಿಟ್ಟರು.

* ಹ. ಮುಹಮ್ಮದ್(ಸ) ತಾಯಿಫ್‌ನಿಂದ ಮಕ್ಕಾಕ್ಕೆ ಹಿಂತಿರುಗಿದ ನಂತರ ಅವರ ಮೇಲೆ ದೌರ್ಜನ್ಯ ಮತ್ತಷ್ಟು ಹೆಚ್ಚಿದವು. ಪ್ರವಾದಿತ್ವದ ನಿರಂತರ 13 ವರ್ಷ ಪ್ರವಾದಿ(ಸ) ಮತ್ತು ಅವರ ಅನುಯಾಯಿಗಳು ಮಕ್ಕ ಪಟ್ಟಣದಲ್ಲಿ ಹಿಂಸೆಯನ್ನು, ಮರ್ದನವನ್ನು ಎದುರಿಸಬೇಕಾಯಿತು. ಕೆಲ ಅನುಯಾಯಿಗಳು ಇಸ್ಲಾಮಿನ ದಾರಿಯಲ್ಲಿ ಪ್ರಾಣ ಬಿಡಬೇಕಾಯಿತು.

* ಹ. ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳ ವಿರುದ್ಧ ವರೋಧವು ಮಕ್ಕಕ್ಕೆ ಸೀಮಿತವಾಗಿರಲಿಲ್ಲ. ಹ. ಮುಹಮ್ಮದ್(ಸ)ಮದೀನಾಕ್ಕೆ ಹಿಜ್ರತ್ ಮಾಡಿದ ನಂತರವೂ ಕುರೈಶರ ವಿರೋಧವು ಮುಂದುವರಿಯಿತು. ಇಸ್ಲಾಮಿನ ಮೂಲೋತ್ಪಾಟನೆ ಮಾಡುವ ಉದ್ದೇಶದಿಂದ ಕುರೈಶರು ಅನೇಕ ಸಲ ಸಕಲ ಸಿದ್ಧತೆಗಳೊಂದಿಗೆ ಮದೀನಾದ ಮೇಲೆ ಆಕ್ರಮಣ ಮಾಡಿದರು.

* ಉಹುದ್ ಯುದ್ಧದಲ್ಲಿ ಹ. ಮುಹಮ್ಮದ್(ಸ) ತೀವ್ರವಾಗಿ ಗಾಯಗೊಂಡರು. ಅವರು ಧರಿಸಿದ್ದ ಶಿರಕವಚದಿಂದ ಅವರ ಕೆನ್ನೆಗಳು ರಕ್ತ ಸಿಕ್ತವಾದವು. ಪ್ರವಾದಿ(ಸ)ರ ಎರಡು ಹಲ್ಲುಗಳೂ ಶಹೀದ್ ಆದವು.

* ಹ. ಮುಹಮ್ಮದ್(ಸ) ಇಷ್ಟು ಹಿಂಸೆಯನ್ನು, ದೌರ್ಜನ್ಯವನ್ನು ಎದುರಿಸ ಬೇಕಾದರೂ ಅವರು ಎಂದೂ ಕುರೈಶರ

ಮೇಲೆ ಪ್ರತಿಕಾರದ ಕ್ರಮ ಕೈಗೊಳ್ಳಲಿಲ್ಲ. 10,000 ಸೈನಿಕರೊಂದಿಗೆ ಮಕ್ಕ ಪಟ್ಟಣದ ಮೇಲೆ ಏರಿ ಹೋಗಿ ಅದನ್ನು ವಶಪಡಿಸಿಕೊಂಡಾಗ ಇಸ್ಲಾಮಿನ ಶತ್ರುಗಳ ಮೇಲೆ ಸುಲಭವಾಗಿ ಸೇಡು ತೀರಿಸಬಹುದಾಗಿತ್ತು. ಅವರನ್ನು ತಡೆಯುವವರಾರೂ ಇರಲಿಲ್ಲ. ಆದರೆ ಹ. ಮುಹಮ್ಮದ್(ಸ) ಒಬ್ಬ ವ್ಯಕ್ತಿಯ ಮೇಲೂ ಪ್ರತಿಕಾರದ ಕ್ರಮ ವಹಿಸಲಿಲ್ಲ. ಇಸ್ಲಾಮಿನ ಕಡು ವೈರಿಗಳನ್ನು ಕ್ಷಮಿಸಿದರು. ಹ. ಮುಹಮ್ಮದ್(ಸ)ರವರು ಶತ್ರುಗಳೊಂದಿಗೆ ವರ್ತಿಸಿದ ರೀತಿ, ಶತ್ರುಗಳಿಗೆ ತೋರಿದ ಔದಾರ್ಯಕ್ಕೆ ಇತಿಹಾಸದಲ್ಲಿ ಸರಿಸಾಟಿಯಿಲ್ಲ!

* ಅಹಿಂಸೆಗೆ ಸಂಬಂಧಿಸಿದಂತೆ ಇಸ್ಲಾಮಿ ಬೋಧನೆಗಳು:

ಹ. ಅಬೂ ಹುರೈರ(ರ) ಪ್ರವಾದಿ(ಸ) ಈ ರೀತಿ ನುಡಿದಿರುವುದಾಗಿ ವರದಿ ಮಾಡಿರುವರು: "ಶತ್ರುಗಳೊಂದಿಗೆ ಹೋರಾಡುವ ಅಭಿಲಾಷೆಯನ್ನು ಹೊಂದ ಬೇಡಿರಿ. ಶತ್ರುಗಳೊಂದಿಗೆ ಹೋರಾಡುವಾಗ ತಾಳ್ಮೆ ಹೊಂದಿರಿ."

* ಹ. ಅಬ್ದುಲ್ಲಾ ಬಿನ್ ಔಫ್(ರ) ವರದಿ ಮಾಡಿರುವರು: ಒಮ್ಮೆ ಯುದ್ಧ ಭೂಮಿಯಲ್ಲಿ ಪ್ರವಾದಿ(ಸ) ಶತ್ರುಗಳ ಆಕ್ರಮಣಕ್ಕಾಗಿ ಸಂಜೆಯ ತನಕ ಕಾಯ್ದರು. ಆದರೆ ಶತ್ರುಗಳು ಆಕ್ರಮಣ ಮಾಡಲಿಲ್ಲ. ಪ್ರವಾದಿ(ಸ) ಸಹ ಶತ್ರುಗಳ ಮೇಲೆ ಆಕ್ರಮಣ ಮಾಡಲಿಲ್ಲ. ನಂತರ ಪ್ರವಾದಿ(ಸ) ಮುಸ್ಲಿಮ್ ಯೋಧರನ್ನು ಉದ್ದೇಶಿಸಿ ಭಾಷಣ ಮಾಡಿದರು " ಯುದ್ಧವನ್ನು ಎದುರು ನೋಡಬೇಡಿ. ಶಾಂತಿ ಮತ್ತು ಸಮೃದ್ಧಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ಆದರೆ ನಿಮ್ಮ ಮೇಲೆ ಆಕ್ರಮಣ ಮಾಡಲಾದಾಗ ತಾಳ್ಮೆಯಿಂದ ಮತ್ತು ಧೈರ್ಯದಿಂದ ಶತ್ರುಗಳು ಶತ್ರುಗಳೊಂದಿಗೆ ಹೋರಾಡಿರಿ".

* ಹ. ಅಬೂ ಸಈದ್(ರ) ವರದಿ ಮಾಡಿರುವರು: ಓರ್ವ ವ್ಯಕ್ತಿ ಪ್ರವಾದಿ(ಸ)ರಿಗೆ, ಅತ್ಯುತ್ತಮ ವ್ಯಕ್ತಿ ಯಾರು? ಮತ್ತು ನಿರ್ಣಾಯಕ ದಿನದಂದು ಯಾರಿಗೆ ಅತ್ಯುನ್ನತ ಸ್ಥಾನವನ್ನು ನೀಡಲಾಗುದೆಂದು ಪ್ರಶ್ನಿಸಿದರು. ಪ್ರವಾದಿ(ಸ) ಉತ್ತರಿಸಿದರು. "ಯಾವ ಸ್ತ್ರೀ, ಪುರುಷರು ಅಲ್ಲಾಹನನ್ನು ಅತಿ ಹೆಚ್ಚಾಗಿ ಸ್ಮರಿಸುತ್ತಾರೋ ಅವರು".

ಪ್ರವಾದಿ(ಸ)ರನ್ನು ಪುನಃ ಪ್ರಶ್ನಿಸಲಾಯಿತು. ಅಲ್ಲಾಹನ ಸಂದೇಶವಾಹಕರೇ, ಈ ಸ್ಥಾನವು ಹುತಾತ್ಮರಿಗೆ ದೊರೆಯುವ ಸ್ಥಾನಕ್ಕಿಂತ ಉನ್ನತವಾಗಿರುವುದೋ?

ಪ್ರವಾದಿ(ಸ) ಉತ್ತರಿಸಿದರು. "ಓರ್ವ ವ್ಯಕ್ತಿಯು ಅಲ್ಲಾಹನಿಗಾಗಿ ಶತ್ರುಗಳೊಂದಿಗೆ ಹೋರಾಡುವಾಗ ಆತನ ಖಡ್ಗವು ತುಂಡಾಗಿ, ಹುತಾತ್ಮನಾಗುವನೋ, ಆತನಿಗೆ ದೊರಕುವಂತಹ ಸ್ಥಾನಕ್ಕಿಂತ ಅಲ್ಲಾಹನನ್ನು ಹೆಚ್ಚು ಸ್ಮರಿಸುವ ವ್ಯಕ್ತಿಗೆ ಹೆಚ್ಚಿನ ಉನ್ನತ ಸ್ಥಾನವನ್ನು ನೀಡಲಾಗುವುದು.

(ಅಹ್ಮದ್, ತಿರ್ಮಿದಿ ಭಾಗ–1, ಮುಂತಖಬ್ ಅಹ್ವಾಬ್ ಹದೀಸ್ 429)

* ಹ. ಅಬೂಬಕ್ಕರ್ ಸಿದ್ದೀಕ್(ರ) ವರದಿ ಮಾಡಿರುವರು: ಓರ್ವ ವ್ಯಕ್ತಿಯು ಪ್ರವಾದಿ(ಸ)ರಿಗೆ, "ಅತ್ಯಂತ ಗೌರವಾನ್ವಿತ ವ್ಯಕ್ತಿ ಯಾರು? ಎಂದು ಪ್ರಶ್ನಿಸಿದನು". ಪ್ರವಾದಿ(ಸ) ಉತ್ತರಿಸಿದರು. "ಯಾರಿಗೆ ದೀರ್ಘ ಆಯುಷ್ಯವನ್ನು ನೀಡಲಾಗಿದ್ದು ಆತನು ಒಳಿತಿನ ಕಾರ್ಯಗಳನ್ನು ಮಾಡುವನೋ, ಆತನು ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿರುವನು".

ಆ ವ್ಯಕ್ತಿಯು ಪ್ರವಾದಿ(ಸ)ರನ್ನು ಪುನಃ ಪ್ರಶ್ನಿಸಿದನು. "ಅತ್ಯಂತ ಕೆಟ್ಟ ವ್ಯಕ್ತಿ ಯಾರು?". ಪ್ರವಾದಿ(ಸ) ಉತ್ತರಿಸಿದರು. "ಯಾರಿಗೆ ದೀರ್ಘ ಆಯುಷ್ಯವನ್ನು ನೀಡಲಾಗಿದ್ದು, ಆತನು ಅತ್ಯಂತ ಕೆಟ್ಟ ವ್ಯಕ್ತಿಯಾಗಿರುವನು".

* ಹ. ಉಬೈದ್ ಬಿನ್ ಖಾಲಿದ್(ರ) ವರದಿ ಮಾಡಿರುವರು.

"ಇಬ್ಬರು ವ್ಯಕ್ತಿಗಳು ಮದೀನಾಕ್ಕೆ ಆಗಮಿಸಿ ಇಸ್ಲಾಮ್ ಸ್ವೀಕರಿಸಿದರು. ಪ್ರವಾದಿ(ಸ) ಅವರಿಗೆ ಓರ್ವ ಅನ್ಸಾರಿಯವರೊಂದಿಗೆ ತಂಗಲು ವ್ಯವಸ್ಥೆ ಮಾಡಿದರು. ಹೀಗಿರುವಾಗ ಒಂದು ಯುದ್ಧದಲ್ಲಿ ಇವರೀರ್ವರಲ್ಲಿ ಒಬ್ಬರು ಯುದ್ಧದಲ್ಲಿ ಹುತಾತ್ಮರಾದರು. ಮತ್ತೋರ್ವ ವ್ಯಕ್ತಿ ಸಂದರ್ಭವಶಾತ್ ಕೆಲವೇ ದಿನಗಳಲ್ಲಿ ನಿಧನ ಹೊಂದಿದರು. ಪ್ರವಾದಿ(ಸ)ರ ಅನುಯಾಯಿಗಳು ಮರಣ ಹೊಂದಿದ ವ್ಯಕ್ತಿಯ ಜನಾಝ ನಮಾಝ್ ನಿರ್ವಹಿಸಿ, ದಫನ ಮಾಡಿದರು. ಪ್ರವಾದಿ(ಸ) ತಮ್ಮ ಅನುಯಾಯಿಗಳಿಗೆ, ಮರಣ ಹೊಂದಿದ ವ್ಯಕ್ತಿಗಾಗಿ ಏನೆಂದು ಪ್ರಾರ್ಥಿಸಿರುವಿರಿ? ಎಂದು ಪ್ರಶ್ನಿಸಿದರು. ಅನುಯಾಯಿಗಳು ಪ್ರವಾದಿಯವರೇ, ವ್ಯಕ್ತಿಯ ಮುಕ್ತಿಗಾಗಿ, ವ್ಯಕ್ತಿಯ ಮೇಲೆ ಅಲ್ಲಾಹನ ಕರುಣೆಗಾಗಿ ಮತ್ತು ಈ ವ್ಯಕ್ತಿ ಹುತಾತ್ಮನಾದ ತನ್ನ ಸಹೋದರನೊಂದಿಗೆ ಸ್ವರ್ಗದಲ್ಲಿ ಜೊತೆಯಲ್ಲಿ ಇರುವಂತೆ ಪ್ರಾರ್ಥಿಸಿದೆವು" ಎಂದು ಉತ್ತರಿಸಿದರು.

ಇದನ್ನು ಕೇಳಿ ಪ್ರವಾದಿ(ಸ) "ಹಾಗಾದರೆ ಮೃತ ಹೊಂದಿದ ವ್ಯಕ್ತಿ ಹುತಾತ್ಮನಾದ ಸಹೋದರನ ನಂತರ ಒಳಿತಿನ ಕಾರ್ಯಗಳು ಪ್ರಾರ್ಥನೆಗಳ ಪ್ರತಿಫಲ ಏನಾಗುತ್ತದೆ?" ಎಂದು ಕೇಳಿದರು. ಮುಂದುವರಿದು ಪ್ರವಾದಿ(ಸ), "ಅವರಿಬ್ಬರ ಪ್ರತಿಫಲದಲ್ಲಿ ಭೂಮಿ ಆಕಾಶದ ನಡುವೆ ಇರುವ ವ್ಯತ್ಯಾಸಕ್ಕಿಂತಲೂ ಹೆಚ್ಚಿನ ವ್ಯತ್ಯಾಸವಿದೆ" ಎಂದು ನುಡಿದರು.

ಪ್ರವಾದಿ(ಸ)ರ ಅನುಯಾಯಿಗಳು ಈ ಇಬ್ಬರು ವ್ಯಕ್ತಿಗಳಲ್ಲಿ ನಿಧನ ಹೊಂದಿದ ವ್ಯಕ್ತಿಯ ಸ್ಥಾನಮಾನವನ್ನು ಹುತಾತ್ಮನಾದ ವ್ಯಕ್ತಿಯ ಸ್ಥಾನಕ್ಕಿಂತ ಕಡಿಮೆಯದಾಗಿದೆ ಎಂದು ಭಾವಿಸಿದ್ದರು. ಆದುದರಿಂದಲೇ ಅವರು ನಿಧನ ಹೊಂದಿದ ವ್ಯಕ್ತಿ ಹುತಾತ್ಮನಾದ ಸಹೋದರನೊಂದಿಗೆ ಸ್ವರ್ಗದಲ್ಲಿ ಇರುವಂತಾಗಲಿ ಎಂದು ಪ್ರಾರ್ಥಿಸಿದ್ದರು. ಆದರೆ ಅವರು ನಿಧನ ಹೊಂದಿದ ವ್ಯಕ್ತಿ ತನ್ನ ಸಹೋದರ ನಿಧನ ನಂತರ ಮಾಡಿದ ಒಳಿತಿನ ಕಾರ್ಯಗಳನ್ನು, ಪ್ರಾರ್ಥನೆಗಳನ್ನು ನಿರ್ಲಕ್ಷಿಸಿದ್ದರು. ಪ್ರವಾದಿ(ಸ) ನಿಧನ ಹೊಂದಿದ ವ್ಯಕ್ತಿಯು ಸಹೋದರನ ಹುತಾತ್ಮತೆಯ ನಂತರ ಮಾಡಿದ ಒಳಿತಿನ ಕಾರ್ಯಗಳ ಕಾರಣದಿಂದಾಗಿ, ಸಹೋದರನಿಗಿಂತಲೂ ಉನ್ನತ ಸ್ಥಾನವನ್ನು ಸ್ವರ್ಗದಲ್ಲಿ ಪಡೆಯುವವನೆಂದು ತಿಳಿಸಿದರು.

ಮೇಲಿನ ಘಟನೆಗಳಿಂದ ತಿಳಿದು ಬರುವುದೇನೆಂದರೆ ಇಸ್ಲಾಮ್ ಶತ್ರುಗಳ ನಿರ್ನಾಮಕ್ಕೆ ಒತ್ತು ನೀಡುವುದಿಲ್ಲ. ಇಸ್ಲಾಮ್ ಕೇವಲ ರಕ್ಷಣಾತ್ಮಕ ಕ್ರಮಗಳನ್ನು ಮಾತ್ರ ಉತ್ತೇಜಿಸುತ್ತವೆ. ಮುಂದುವರೆದು, ವ್ಯಕ್ತಿಯು ಒಳಿತಿನ ಕಾರ್ಯಗಳಲ್ಲಿ ಮತ್ತು ಅಲ್ಲಾಹನ ಆರಾಧನೆಯಲ್ಲಿ ನಿರತನಾಗುವುದರಿಂದ ಸ್ವರ್ಗದಲ್ಲಿ ಹುತಾತ್ಮನಿಗಿಂತ ಉನ್ನತ ಸ್ಥಾನವನ್ನು ಪಡೆಯಬಹುದು.

* ಪ್ರವಾದಿ(ಸ) ಹೀಗೆ ನುಡಿದಿರುವುದಾಗಿ ಹ. ಇಬ್ನ್ ಮಸೂದ್(ರ) ವರದಿ ಮಾಡಿರುವರು.

"ಎಲ್ಲಾ ಮಾನವರು ಅಲ್ಲಾಹನ ಕುಟುಂಬದವರಾಗಿರುವರು. ಯಾರು

ಅಲ್ಲಾಹನ ಸೃಷ್ಟಿಗಳೊಂದಿಗೆ ಅತ್ಯತ್ತಮವಾಗಿ ನಡೆದುಕೊಳ್ಳುವರೋ, ಅಲ್ಲಾಹನ ದೃಷ್ಟಿಯಲ್ಲಿ ಅವರೇ ಅತ್ಯುತ್ತಮರು".

(ಮಿಷ್ಕಾತ್, ತರ್ಜುಮಾನುಲ್ ಹದೀಸ್ ಭಾಗ–2 ಪುಟ 139)

* ಹ. ಅಬೂ ಹುರೈರಃ(ರ) ಪ್ರವಾದಿ(ಸ) ಹೀಗೆ ನುಡಿದಿರುವುದಾಗಿ ವರದಿ ಮಾಡಿರುವರು.

"ನಿರ್ಣಾಯಕ ದಿನದಂದು ಅಲ್ಲಾಹನು ವ್ಯಕ್ತಿಯನ್ನು ಪ್ರಶ್ನಿಸುವನು ಓ ಆದಮನ ಪುತ್ರನೇ, ನಾನು ರೋಗಗ್ರಸ್ತನಾಗಿದ್ದೆ, ಹಸಿದಿದ್ದೆ ಮತ್ತು ಬಾಯಾರಿದ್ದೆ. ಆದರೆ ನೀನು ನನ್ನನ್ನು ವಿಚಾರಿಸಲಿಲ್ಲ, ಉಣಬಡಿಸಲಿಲ್ಲ ಮತ್ತು ಕುಡಿಯಲು ನೀರು ಕೊಡಲಿಲ್ಲ.

ವ್ಯಕ್ತಿಯು ಉತ್ತರಿಸುವನು 'ಓ ಅಲ್ಲಾಹ್! ನೀನು ಸಂಪೂರ್ಣ ವಿಶ್ವದ ಒಡೆಯನಾಗಿರುವೆ. ನಾನು ನಿನ್ನನ್ನು ವಿಚಾರಿಸುವುದೇ?' ಅಲ್ಲಾಹನು ನುಡಿಯುವನು 'ನಿರ್ದಿಷ್ಟ ವ್ಯಕ್ತಿ ರೋಗಗ್ರಸ್ತನಾಗಿದ್ದನು, ಹಸಿದಿದ್ದನು ಮತ್ತು ಬಾಯಾರಿದ್ದನು. ನೀನು ಆತನ ಆರೈಕೆ ಮಾಡಿದ್ದರೆ, ಆತನಿಗೆ ಅನ್ನ ಪಾನೀಯ ನೀಡಿದ್ದರೆ, ನನಗೇ ನೀಡಿದಂತಾಗುತ್ತಿತ್ತು". (ತರ್ಜುಮಾನುಲ್ ಹದೀಸ್ ಭಾಗ–2 ಪುಟ 245)

* ಪ್ರವಾದಿ(ಸ) ನುಡಿದಿರುವರು: "ಓರ್ವ ಪ್ರಯಾಣಿಕನಿಗೆ ಬಹಳ ನೀರಡಿಕೆಯಾಯಿತು. ಆತನು ಒಂದು ಬಾವಿಯನ್ನು ತಲುಪಿದನು. ಬಾವಿಯಿಂದ ನೀರು ಎತ್ತಲು ಹಗ್ಗ ವಿಲ್ಲದಿದ್ದುದರಿಂದ, ಪ್ರಯಾಣಿಕನು ಬಾವಿಯೊಳಗೆ ಇಳಿದು ನೀರು ಕುಡಿದು, ತನ್ನ ದಾಹವನ್ನು ಇಂಗಿಸಿದನು. ಬಾವಿಯಿಂದ ಹೊರ ಬಂದಾಗ, ಅಲ್ಲೊಂದು ನಾಯಿಯು ತೇವವಾಗಿರುವ ಮಣ್ಣನ್ನು ನೆಕ್ಕುತ್ತಿರುವುದು ಕಂಡು ಬಂತು. ನಾಯಿಗೂ ಬಾಯಾರಿಕೆ ಆಗಿರಬಹುದೆಂದು ಪ್ರಯಾಣಿಕನು ಪುನಃ ಬಾವಿಯಲ್ಲಿ ಇಳಿದು ತನ್ನ ಬೂಟಿನಲ್ಲಿ ನೀರು ತುಂಬಿ ನಾಯಿಗೆ ಕುಡಿದನು. ಪ್ರಯಾಣಿಕನ ಈ ಕೃತ್ಯದಿಂದ ಅಲ್ಲಾಹ್ ಸಂತುಷ್ಟಗೊಂಡು ಪ್ರಯಾಣಿಕನ ಪಾಪಗಳನ್ನು ಕ್ಷಮಿಸಿದನು."

ಜನರು ಪ್ರಶ್ನಿಸಿದರು: ಓ ಅಲ್ಲಾಹನ ಪ್ರವಾದಿಗಳೇ, ನಾವು ಪ್ರಾಣಿಗಳ ಮೇಲೆ ದಯೆ ತೋರಿದರೂ ಅಲ್ಲಾಹ್ ಅದರ ಪ್ರತಿಫಲವನ್ನು ನೀಡುವನೋ?

ಪ್ರವಾದಿ(ಸ) ಉತ್ತರಿಸಿದರು: " ನೀವು ಪ್ರತಿಯೊಂದು ಸೃಷ್ಟಿಯೊಂದಿಗೆ ಮಾಡುವ ಸದ್ವರ್ತನೆಗೆ ಅಲ್ಲಾಹ್ ಪ್ರತಿಫಲವನ್ನು ನೀಡುವನು."

(ಬುಖಾರಿ ಭಾಗ–3 ಕಿತಾಬ್ 646 ಸಂಖ್ಯೆ 43)

* ಹ. ಅನಸ್(ರ) ಪ್ರವಾದಿ(ಸ) ಅವರಿಗೆ ಈ ರೀತಿ ಹೇಳಿರುವುದಾಗಿ ವರದಿ ಮಾಡಿರುವರು.

" ನನ್ನ ಪ್ರೀತಿಯ ಪುತ್ರನೇ, ನಿನ್ನ ಹೃದಯದಲ್ಲಿ ಯಾರ ಬಗ್ಗೆಯೂ ಕೆಟ್ಟ ಭಾವನೆಗಳು ಇಲ್ಲದ ರೀತಿಯಲ್ಲಿ ಬಾಳುವ ಸಾಧ್ಯವಿದ್ದರೆ, ಖಂಡಿತವಾಗಿಯೂ ಬಾಳುವೆ ಮಾಡು. ಏಕೆಂದರೆ ಇದು ನನ್ನ ಜೀವನ ಶೈಲಿಯಾಗಿದೆ. ಯಾರು ನನ್ನ ಜೀವನದ ಶೈಲಿಯಂತೆ ಜೀವನ ನಡೆಸುವವರೋ, ಸ್ವರ್ಗದಲ್ಲಿ ಅವರು ನನ್ನೊಂದಿಗಿರುವರು. (ಮುಸ್ಲಿಮ್)

* ಪ್ರವಾದಿ(ಸ) ನುಡಿದಿರುವರು.

" ಇಸ್ಲಾಮಿ ಆಡಳಿತದಲ್ಲಿ, ಆಡಳಿತಗಾರರು ಮುಸ್ಲಿಮೇತರ ಪ್ರಜೆಗಳ ಪ್ರಾಣ, ಸಂಪತ್ತು ಮತ್ತು ಘನತೆಯನ್ನು ರಕ್ಷಿಸಬೇಕಾಗುವುದು ಅವರ ಕರ್ತವ್ಯ ವಾಗಿದೆ. ಯಾವನೇ

ಮುಸ್ಲಿಮನು ಮುಸ್ಲಿಮೇತರನ ಸ್ವತ್ತನ್ನು ಸ್ವಾಧೀನ ಪಡಿಸಿಕೊಂಡಲ್ಲಿ ಅಥವಾ ಮುಸ್ಲಿಮೇತರನಿಗೆ ಕಿರುಕುಳ ನೀಡಿದಲ್ಲಿ ಅಥವಾ ಆತನ ಶೋಷಣೆ ಮಾಡಿದಲ್ಲಿ, ನಿರ್ಣಾಯಕ ದಿನದಂದು ಮನುಷ್ಯನ ವಿರುದ್ಧ ವಾದಿಸುವೆನು". (ಅಬೂ ದಾವೂದ್, ಸಫೀನ ನಜಾತ್151)

* ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳಿರುವನು.

" ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ." (ಪವಿತ್ರ ಕುರ್‌ಆನ್ 5:32)

ಕುರ್‌ಆನ್‌ನಲ್ಲಿ ಯುದ್ಧಕ್ಕೆ ಸಂಬಂಧಿಸಿದ ಬೋಧನೆಗಳು:

* ಮೇಲಿನ ಅಂಶಗಳಿಂದ ಇಸ್ಲಾಮಿನಲ್ಲಿ ಹಿಂಸೆಯನ್ನು ಪ್ರಚೋದಿಸುವ ಬೋಧನೆಗಳಿಲ್ಲದಿರುವುದು ಸ್ಪಷ್ಟವಾಗುತ್ತದೆ. ಹಾಗಿದ್ದಲ್ಲಿ ಕುರ್‌ಆನ್‌ನಲ್ಲಿ ಸತ್ಯನಿಷೇಧಿಗಳ ವಿರುದ್ಧ ಹೋರಾಡಲು ಆದೇಶಿಸುವ ಸೂಕ್ತಗಳು ಏಕಿವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ ಇದಕ್ಕೆ ನಾಲ್ಕು ಕಾರಣಗಳಿವೆ.

1. ನ್ಯಾಯದ ಪರಿಪಾಲನೆ: ಈ ಮೊದಲು ವಿವರಿಸುವಂತೆ ಇಸ್ಲಾಮ್ ಸ್ವೀಕರಿಸಿದವರ ಮೇಲೆ ಸತ್ಯನಿಷೇಧಿಗಳು ಬಹಳ ದೌರ್ಜನ್ಯ ನಡೆಸಿದ್ದರು. ಅನೇಕರನ್ನು ಕ್ರೂರವಾಗಿ ಹಿಂಸಿಸಿ ಹತ್ಯೆಗೈಯ್ಯಲಾಯಿತು. ಕೆಲ ಘಟನೆಗಳನ್ನು ಇಲ್ಲಿ ಉಲ್ಲೇಖಿಸಿದೆ.

* ಹ. ಸುಮಯ್ಯ, ಅವರ ಪತಿ ಯಾಸಿರ್ ಬಿನ್ ಆಮಿರ್(ರ) ಮತ್ತು ಅವರ ಓರ್ವ ಪುತ್ರನನ್ನು ಹಿಂಸಿಸಿ ಹತ್ಯೆಗೈಯ್ಯಲಾಯಿತು.

* ಓರ್ವ ಮಹಿಳೆಯನ್ನು ಒಂಟೆಯ ಚರ್ಮದಲ್ಲಿ ಸುತ್ತಿ, ಹೊಲಿದು ಬಿಸಿಲಿನಲ್ಲಿ ಹಾಕಲಾಯಿತು. ಮೂರು ದಿನಗಳು ಮಹಿಳೆಯು ವಿಲ ವಿಲನೆ ಒದ್ದಾಡಿ ಅಸುನೀಗಿದಳು.

* ಹ. ಖಬ್ಬಾಬ್(ರ)ರನ್ನು ಉರಿಯುತ್ತಿರುವ ಕೆಂಡದ ಮೇಲೆ ಮಲಗಿಸಲಾಯಿತು. ಅವರ ಬೆನ್ನಿನ ಚರ್ಮ ಮತ್ತು ಮಾಂಸವು ಸುಟ್ಟಿತು. ದೇಹದ ಕೊಬ್ಬು ಕರಗಿ ಕೆಂಡವು ಆರಿತು.

ಈ ರೀತಿ ಸಹಸ್ರಾರು ಮುಸ್ಲಿಮರನ್ನು ಹಿಂಸಿಸಲಾಗಿತ್ತು. ಹಿಂಸೆಯನ್ನು ಎದುರಿಸಿದ ಮುಸ್ಲಿಮರಿಗೆ ಸಂಬಂಧಿಸಿದಂತೆ ಕುರ್‌ಆನಿನ ಈ ಸೂಕ್ತಗಳು ಅವತೀರ್ಣಗೊಂಡವು.

"ತಮ್ಮ ಮೇಲೆ ಅಕ್ರಮವಾದ ಬಳಿಕ ಪ್ರತೀಕಾರ ವೆಸಗಿದವರನ್ನು ಆಕ್ಷೇಪಿಸಲಾಗದು. ವಾಸ್ತವದಲ್ಲಿ ಇತರರ ಮೇಲೆ ಅಕ್ರಮ ವೆಸಗುವವರು ಮತ್ತು ಭೂಮಿಯಲ್ಲಿ ಅನ್ಯಾಯವಾಗಿ ಅತಿರೇಕ ವೆಸಗುವವರೇ ಆಕ್ಷೇಪಕ್ಕೆ ಅರ್ಹರು ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ. ಆದರೆ ಯಾರಾದರೂ ಸಹನೆಯಿಂದ ವರ್ತಿಸಿದರೆ ಹಾಗೂ ಕ್ಷಮಿಸಿದರೆ ಇದೊಂದು ಮಹಾ ಸಾಹಸದ ಕಾರ್ಯಗಳಲ್ಲಾಗುವುದು." (ಪವಿತ್ರ ಕುರ್‌ಆನ್ 42: 41–43)

ಮೇಲಿನ ಸೂಕ್ತಗಳಲ್ಲಿ ತಮ್ಮನ್ನು ಹಿಂಸಿಸಿರುವ ಸತ್ಯ ನಿಷೇಧಿಗಳೊಂದಿಗೆ ಕಡ್ಡಾಯವಾಗಿ ಸೇಡು ತೆಗೆದುಕೊಳ್ಳ ಬೇಕೆಂದು ಸೂಚಿಸಲಾಗಿಲ್ಲ. ಬದಲಾಗಿ ಯಾರಾದರೂ ಸೇಡು ತೀರಿಸಿಕೊಳ್ಳ ಬಯಸಿದರೆ, ಅವರು

ಹಾಗೆ ಮಾಡಬಹುದು ಎಂದು ಮಾತ್ರ ತಿಳಿಸಲಾಗಿದೆ. ಸಾಮಾನ್ಯವಾಗಿ ಮುಸ್ಲಿಮರಿಗೆ ಇತರರನ್ನು ಕ್ಷಮಿಸುವಂತೆ ಮತ್ತು ಕ್ಷಮಾ ಗುಣವು ಉತ್ಕೃಷ್ಟ ಗುಣವೆಂದು ತಿಳಿ ಹೇಳಲಾಗಿದೆ.

2. ಆತ್ಮ ರಕ್ಷಣೆ: ಮುಸ್ಲಿಮರು ಮಕ್ಕ ಪಟ್ಟಣದಲ್ಲಿ ನಿರಂತರ 13 ವರ್ಷಗಳ ಕಾಲ ಹಿಂಸೆಗೆ, ದೌರ್ಜನ್ಯಕ್ಕೆ ಗುರಿಯಾಗಿದ್ದರು. ನಂತರ ಮುಸ್ಲಿಮರು ಮದೀನಾ ವಲಸೆ ಹೋದರು. ಮದೀನಾದಲ್ಲಿ ಪುಟ್ಟ ಇಸ್ಲಾಮಿ ಸಾಮ್ರಾಜ್ಯ ಸ್ಥಾಪಿತವಾಯಿತು. ಆದರೆ ಕುರೈಶರು ಇಲ್ಲಿಯೂ ಮುಸ್ಲಿಮರನ್ನು ಶಾಂತಿಯಿಂದ ಜೀವಿಸಲು ಬಿಡಲಿಲ್ಲ. ಶಸ್ತ್ರ ಸಜ್ಜಿತವಾಗಿ ಅನೇಕ ಬಾರಿ ಮದೀನಾದ ಮೇಲೆ ಆಕ್ರಮಣ ನಡೆಸಿದರು.

ಕಂದಕ ಯುದ್ಧದ ಸಂದರ್ಭದಲ್ಲಿ ಕುರೈಶರು ಅನೇಕ ಬುಡಕಟ್ಟುಗಳನ್ನು ಒಗ್ಗೂಡಿಸಿ, 10,000 ಸಂಖ್ಯೆಯಲ್ಲಿ ಮದೀನಾದ ಮೇಲೆ ಆಕ್ರಮಣ ನುಡಿದ್ದರು. ಮುಸ್ಲಿಮರು ಕೇವಲ 3,000 ಸಂಖ್ಯೆಯಲ್ಲಿದ್ದರು. ಮದೀನಾದ ಸುತ್ತ ಕಂದಕವನ್ನು ತೋಡಿ ಮುಸ್ಲಿಮರು ಮದೀನಾದ ರಕ್ಷಣೆ ಮಾಡಿದ್ದರು.

ಕಂದಕ ಯುದ್ಧದ ನಂತರ ಪ್ರವಾದಿ(ಸ) ಒಂದೊಂದು ಬುಡಕಟ್ಟಿನ ಮೇಲೆ ಆಕ್ರಮಣ ಮಾಡಿ ಪುನಃ ಮುಸ್ಲಿಮರ ಮೇಲೆ ಏರಿಬಾರದಂತೆ ಕ್ರಮ ವಹಿಸಿದ್ದರು. ಅವರು ಹಾಗೆ ಮಾಡದಿರುತ್ತಿದ್ದರೆ, ಶತ್ರುಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡಿ ಮುಸ್ಲಿಮರ ಮೇಲೆ ಆಕ್ರಮಣ ಮಾಡಬಹುದಾಗಿತ್ತು.

"ಓ ಸತ್ಯವಿಶ್ವಾಸಿಗಳೇ, ನಿಮ್ಮ ಹತ್ತಿರದಲ್ಲೇ ಇರುವ ಸತ್ಯನಿಷೇಧಿಗಳೊಂದಿಗೆ ಯುದ್ಧ ಮಾಡಿರಿ. ಅವರು ನಿಮ್ಮಲ್ಲಿ ಕಾಠಿಣ್ಯವನ್ನು ಕಾಣಬೇಕು. ಅಲ್ಲಾಹ್ ಧರ್ಮನಿಷ್ಠರೊಂದಿಗೆ ಇದ್ದಾನೆಂಬುದನ್ನು ತಿಳಿದು ಕೊಳ್ಳಿರಿ." (ಪವಿತ್ರ ಕುರ್‌ಆನ್ 9: 123)

ಮೇಲಿನ ಸೂಕ್ತದಲ್ಲಿ ಅಲ್ಲಾಹ್ ಮುಸ್ಲಿಮರನ್ನು ಸತ್ಯನಿಷೇಧಿಗಳೊಂದಿಗೆ ಹೋರಾಡಿ, ಮುಸ್ಲಿಮರು ಅಶಕ್ತರಲ್ಲವೆಂದು ಮನಗಾಣಿಸುವಂತೆ ಮತ್ತು ಪುನಃ ಅವರು ಮುಸ್ಲಿಮರ ಮೇಲೆ ಆಕ್ರಮಣ ಮಾಡದಂತೆ ನಿಷ್ಕ್ರಿಯಗೊಳಿಸಲು ಸೂಚಿಸಿರುವನು. ಇದು ಸಂಪೂರ್ಣವಾಗಿ ಆತ್ಮರಕ್ಷಣಾ ಕ್ರಮವಾಗಿತ್ತು.

ಮೇಲಿನ ಕುರ್‌ಆನ್ ಸೂಕ್ತವು ಮುಸ್ಲಿಮರಿಗೆ ಎಲ್ಲಾ ಸತ್ಯನಿಷೇಧಿಗಳ ವಿರುದ್ಧ ಆಕ್ರಮಣ ಮಾಡುವಂತೆ ಬೋಧಿಸುವುದಿಲ್ಲ. ಮೇಲಿನ ಆದೇಶದ ಜೊತೆಯಲ್ಲಿ ಈ ಕೆಳಗಿನ ಸೂಚನೆಯನ್ನು ನೀಡಲಾಗಿತ್ತು.

"ಓ ಪೈಗಂಬರರೇ, ಸತ್ಯ ನಿಷೇಧಿಗಳಿಗೆ ವೇದನಾಯುಕ್ತ ಯಾತನೆ ಸುವಾರ್ತೆ ತಿಳಿಸಿ ಬಿಡಿರಿ. ನೀವು ಒಪ್ಪಂದ ಮಾಡಿಕೊಂಡಿದ್ದು, ತಮ್ಮ ಒಪ್ಪಂದ ಪಾಲನೆಯಲ್ಲಿ ನಿಮ್ಮೊಂದಿಗೆ ಯಾವತ್ತೂ ಲೋಪವೆಸಗಿದ್ದರೆ ಹಾಗೂ ನಿಮ್ಮ ವಿರುದ್ಧ ಯಾರಿಗೂ ಸಹಾಯ ಮಾಡದಿದ್ದರೆ, ಆ ಮುಶ್ರಿಕರು ಇದಕ್ಕೆ ಹೊರತಾಗಿದ್ದಾರೆ. ಇಂಥವರೊಂದಿಗೆ ನೀವೂ ಅವಧಿಯವರೆಗೆ ಒಪ್ಪಂದವನ್ನು ಪಾಲಿಸಿರಿ. ಏಕೆಂದರೆ ಅಲ್ಲಾಹ್ ಧರ್ಮ ನಿಷ್ಠರನ್ನೇ ಮೆಚ್ಚುತ್ತಾನೆ." (ಪವಿತ್ರ ಕುರ್‌ಆನ್ 9:4)

ಪವಿತ್ರ ಕುರ್‌ಆನ್‌ನಲ್ಲಿ ಇದನ್ನೂ ಹೇಳಿರುವನು:

"ಮುಶ್ರಿಕರ ಪೈಕಿ ಯಾರಾದರೂ (ಅಲ್ಲಾಹನ ವಾಣಿಯನ್ನಾಲಿಸಲಿಕ್ಕಾಗಿ) ನಿಮ್ಮೊಡನೆ ಅಭಯ ಯಾಚಿಸಿ ನಿಮ್ಮ ಬಳಿಗೆ ಬರಲಿಚ್ಛಿಸಿದರೆ, ಅಲ್ಲಾಹನ ವಚನವನ್ನು ಅವನು ಆಲಿಸಿಕೊಳ್ಳುವವರೆಗೆ ಅವನಿಗೆ

ಅಭಯ ನೀಡಿರಿ. ಅನಂತರ ಅವನನ್ನು ಅವನ ಸುರಕ್ಷಾ ಸ್ಥಾನಕ್ಕೆ ತಲುಪಿಸಿ ಬಿಡಿರಿ ಅವರು ತಿಳುವಳಿಕೆಯಿಲ್ಲದವರಾದುದರಿಂದ ಹೀಗೆ ಮಾಡ ಬೇಕಾಗಿದೆ" (ಕುರ್‌ಆನ್ 9:6)

ಮುಂದುವರೆದು ಅಲ್ಲಾಹ್ ಹೇಳಿರುವನು:

" ನಿಮ್ಮೊಡನೆ ಯುದ್ಧ ಮಾಡುವವರೊಂದಿಗೆ ನೀವೂ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿಕ್ರಮಿಸಬೇಡಿರಿ. ಅಲ್ಲಾಹ್ ಅತಿಕ್ರಮಿಸುವವರನ್ನು ಮೆಚ್ಚುವುದಿಲ್ಲ." (ಪವಿತ್ರ ಕುರ್‌ಆನ್ 2:190)

* ಪ್ರವಾದಿ(ಸ), ಶಸ್ತ್ರಾಸ್ತ್ರಗಳನ್ನು ಹಿಡಿಯುವವರು, ವಯೋವೃದ್ಧರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಆಕ್ರಮಣ ಮಾಡಬಾರದೆಂದು ತಮ್ಮ ಅನುಯಾಯಿಗಳನ್ನು ಆಜ್ಞಾಪಿಸಿದ್ದರು. ಮುಂದುವರೆದು, ಪ್ರಾರ್ಥನಾ ಸ್ಥಳಗಳನ್ನು ಹಾಳು ಗೆಡವುದನ್ನು, ತೋಟಗಳನ್ನು ನಾಶಗೊಳಿಸುವುದನ್ನು ಫಲಭರಿತ ಗಿಡ, ಮರಗಳನ್ನು ಕಡಿಯುವುದು ನಿಷೇಧಿಸಿದ್ದರು. (ಇಬ್ನ್ ಕಸೀರ್)

3. ಸಮಾಜದಲ್ಲಿ ಕಾನೂನು ವ್ಯವಸ್ಥೆಯನ್ನು ಸ್ಥಾಪಿಸುವುದು:

ಸಮಾಜದಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಸಮಾಜದಲ್ಲಿ ಏನಾದರೂ ದೊಂಬಿ, ಗಲಭೆ ನಡೆದರೆ ಮೊದಲು ಕರ್ಫ್ಯೂ ಹೇರಲಾಗುತ್ತದೆ. ಕರ್ಫ್ಯೂ ಇದ್ದೂ ಗಲಭೆ ನಿಯಂತ್ರಣಕ್ಕೆ ಬಾರದಿದ್ದರೆ, ಕಂಡಲ್ಲಿ ಗುಂಡಿಕ್ಕುವ ಆದೇಶ ಹೊರಡಿಸಲಾಗುತ್ತದೆ.

ಇದೇ ರೀತಿ ಅರೇಬಿಯಾ ಪ್ರದೇಶದಲ್ಲಿ ಕೆಲವು ಬುಡಕಟ್ಟುಗಳು ಯಾವುದೇ ಧರ್ಮವನ್ನು, ಕಾನೂನನ್ನು ಪಾಲಿಸುತ್ತಿರಲಿಲ್ಲ. ಸದಾ ವಂಚನೆ, ದ್ರೋಹದಲ್ಲಿ ತೊಡಗುತ್ತಿದ್ದರು.

ಒಮ್ಮೆ ಅಝಲ್ ವಖರಃ ಬುಡಕಟ್ಟಿನ ಜನರು ಪ್ರವಾದಿ(ಸ)ರನ್ನು ಭೇಟಿ ಮಾಡಿ ತಾವು ಇಸ್ಲಾಮ್ ಸ್ವೀಕರಿಸಿರುವುದಾಗಿಯೂ, ಜನರ ತರಬೇತಿಗಾಗಿ ಪ್ರವಾದಿ(ಸ) ತಮ್ಮ ಅನುಯಾಯಿಗಳನ್ನು ಕಳುಹಿಸಿಕೊಡಬೇಕೆಂದು ಕೋರಿದರು. ಪ್ರವಾದಿ(ಸ) 10 ಅನುಯಾಯಿಗಳನ್ನು ಆ ಜನರೊಂದಿಗೆ ಕಳುಹಿಸಿ ಕೊಟ್ಟರು. ಆದರೆ ಈ ಬುಡಕಟ್ಟಿನ ಜನರು ರಾಝಿಯ ಎಂಬ ಸ್ಥಳದಲ್ಲಿ 8 ಅನುಯಾಯಿಗಳನ್ನು ಹತ್ಯೆ ಮಾಡಿದರು ಮತ್ತು ಇನ್ನುಳಿದ ಇಬ್ಬರು ಅನುಯಾಯಿಗಳನ್ನು ಮಕ್ಕಾ ನಿವಾಸಿಗಳಿಗೆ ಮಾರಿದರು. ಈ ಇಬ್ಬರು ಅನುಯಾಯಿಗಳೂ ನಂತರ ಕೊಲ್ಲಲ್ಪಟ್ಟರು.

ಇದೇ ರೀತಿ ಅಬುಬರ್ ಆಮಿರ್ 70 ಮುಸ್ಲಿಮರನ್ನು ನಜ್ದ ಪ್ರದೇಶಕ್ಕೆ ಕರೆದೊಯ್ದು, 69 ಮುಸ್ಲಿಮರ ಹತ್ಯೆ ಮಾಡಿದನು. ಕೇವಲ ಓರ್ವ ಮುಸ್ಲಿಮ್ ಬದುಕುಳಿದರು.

ಈ ರೀತಿಯ ಜನರೊಂದಿಗೆ ವ್ಯವಹರಿಸುವ ಬಗ್ಗೆ ಅಲ್ಲಾಹ್ ಈ ಕೆಳಗಿನ ಆದೇಶ ನೀಡಿದನು:

" ತಮ್ಮ ಶಪಥಗಳನ್ನು ಮುರಿಯುತ್ತಲೇ ಇದ್ದು ಸಂದೇಶವಾಹಕರನ್ನು ದೇಶದಿಂದ ಹೊರ ಹಾಕಲು ನಿರ್ಧರಿಸಿದ ಮತ್ತು ಅತಿರೇಕವನ್ನು ಆರಂಭಿಸಿದವರೊಂದಿಗೆ ನೀವು ಯುದ್ಧ ಮಾಡುವುದಿಲ್ಲವೇ? ನೀವು ಅವರಿಗೆ ಹೆದರುತ್ತೀರಾ? ನೀವು ಸತ್ಯವಿಶ್ವಾಸಿಗಳಾಗಿದ್ದರೆ ನಿಮ್ಮ ಭಯಕ್ಕೆ ಅಲ್ಲಾಹ್ ಹೆಚ್ಚು ಅರ್ಹನು. ಅವರೊಡನೆ ಯುದ್ಧ ಮಾಡಿರಿ ಅಲ್ಲಾಹ್ ನಿಮ್ಮ ಕೈಗಳಿಂದ ಅವರಿಗೆ ಶಿಕ್ಷೆ ಕೊಡಿಸುವನು, ಅವರನ್ನು ಅವಮಾನ ಗೊಳಿಸುವನು, ಅವರ

ವಿರುದ್ಧ ನಿಮಗೆ ಸಹಾಯ ಮಾಡುವನು" (ಪವಿತ್ರ ಕುರ್‌ಆನ್ 9: 13)

"ನಿಷೇಧಿತ ಮಾಸಗಳು ಕಳೆದ ಬಳಿಕ ಮುಶ್ರಿಕರನ್ನು ಸಿಕ್ಕಲ್ಲಿ ವಧಿಸಿರಿ. ಅವರನ್ನು ಸೆರೆ ಹಿಡಿಯಿರಿ. ಮುತ್ತಿಗೆ ಹಾಕಿರಿ. ಬೇಹು ನಡೆಸುವಲ್ಲೆಲ್ಲ ಅವರನ್ನು ಹೊಂಚು ಹಾಕುತ್ತಾ ಕುಳಿತು ಕೊಳ್ಳಿರಿ. ಮುಂದೆ ಅವರು ಪಶ್ಚಾತ್ತಾಪ ಪಟ್ಟರೆ, ನಮಾಝನ್ನು ಸಂಸ್ಥಾಪಿಸಿದರೆ ಮತ್ತು ಝಕಾತ್ ಕೊಟ್ಟರೆ ಅವರನ್ನು ಬಿಟ್ಟು ಬಿಡಿರಿ" (ಪವಿತ್ರ ಕುರ್‌ಆನ್ 9: 5)

ಮೇಲಿನ ಕುರ್‌ಆನಿನ ಸೂಕ್ತಗಳಲ್ಲಿಯೂ ಸತ್ಯ ನಿಷೇಧಿಗಳ ಮೇಲೆ ಆಕ್ರಮಣ ಮಾಡಬೇಕೆಂದು ಅಲ್ಲಾಹ್ ಆದೇಶಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಸತ್ಯನಿಷೇಧಿಗಳು ಆಕ್ರಮಣ ಮಾಡಿದಾಗ ಅಥವಾ ಮುಸ್ಲಿಮರಿಗೆ ಹಾನಿ ಒದಗಿಸಲು ಸಂಚು ರೂಪಿಸುತ್ತಿದ್ದರೆ ಅವರನ್ನು ಬಗ್ಗು ಬಡಿಯಲು ಮಾತ್ರ ಅವರೊಂದಿಗೆ ಹೋರಾಟ ಮಾಡಲು ಮುಸ್ಲಿಮರಿಗೆ ಅನುಮತಿ ನೀಡಲಾಗಿದೆ. ಸತ್ಯ ನಿಷೇಧಿಗಳಿಂದ ಯಾವುದೇ ಆತಂಕವಿಲ್ಲದಿರುವಾಗ ಅವರಿಗೆ ಯಾವುದೇ ಹಾನಿ ತಟ್ಟಬಾರದೆಂದು ಸೂಚಿಸಲಾಗಿದೆ.

4. ಮನುಕುಲದ ಸ್ವಾತಂತ್ರ್ಯಕ್ಕಾಗಿ:

"ಓ ನಮ್ಮ ಪ್ರಭು, ಅಕ್ರಮಿಗಳು ವಾಸಿಸುವ ಈ ನಾಡಿನಿಂದ ನಮ್ಮನ್ನು ಹೊರತೆಗೆ ನೀನು ನಿನ್ನ ಕಡೆಯಿಂದ ನಮಗೊಬ್ಬ ಮೇಲ್ವಿಚಾರಕನನ್ನು ಮತ್ತು ಸಹಾಯಕನನ್ನು ನಿಯೋಜಿಸು" ಎಂದು ಮೊರೆಯಿಡುತ್ತಿರುವ ಮರ್ದನಕ್ಕೊಳಗಾದ ಸ್ತ್ರೀಯರು, ಪುರುಷರು ಮತ್ತು ಮಕ್ಕಳಿಗಾಗಿ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡದಿರಲು ಕಾರಣವೇನು? (ಪವಿತ್ರ ಕುರ್‌ಆನ್ 4: 75)

ಕುರ್‌ಆನಿನ ಈ ಸೂಕ್ತದಲ್ಲಿ ಸತ್ಯವಿಶ್ವಾಸಿಗಳನ್ನು ಸತ್ಯ ನಿಷೇಧಿಗಳ ಶೋಷಣೆಯಿಂದ, ದಬ್ಬಾಳಿಕೆಯಿಂದ ರಕ್ಷಿಸಲಿಕ್ಕಾಗಿ ಯುದ್ಧ ಮಾಡಲು ಅನುಮತಿ ನೀಡಲಾಗಿದೆ.

ಈ ರೀತಿ ಯುದ್ಧ ಮಾಡಲು ಅನುಮತಿ ನೀಡುವ ಸೂಕ್ತಗಳು ಕುರ್‌ಆನ್‌ನಲ್ಲಿ ಇವೆ. ಯಾವ ಸಂದರ್ಭದಲ್ಲಿ ಈ ಸೂಕ್ತಗಳು ಅವತೀರ್ಣಗೊಂಡಿವೆ, ಈ ಸೂಕ್ತಗಳ ಉದ್ದೇಶವೇನು? ಮೊದಲಾದ ಅಂಶಗಳನ್ನು ಅಧ್ಯಯನದ ವೇಳೆ ಪರಿಗಣಿಸಬೇಕು. ಯಾವುದೇ ಸಂದರ್ಭದಲ್ಲಿ ನಿರಪರಾಧಿ ಜನರಿಗೆ ಯಾವುದೇ ಹಾನಿ, ಆತಂಕ ಆಗಬಾರದೆಂದು ಆದೇಶಿಸಲಾಗಿದೆ.

* ಮೊದಲನೆ ಜಾಗತಿಕ ಯುದ್ಧದಲ್ಲಿ 20 ಮಿಲಿಯನ್ ಜನರು ಸಾವನ್ನಪ್ಪಿದ್ದರು. ಎರಡನೆ ಜಾಗತಿಕ ಯುದ್ಧದಲ್ಲಿ 60 ಮಿಲಿಯನ್ ಜನರು ಸಾವನ್ನಪ್ಪಿದ್ದರು. ಕ್ರಿ.ಶ. 2000ರಲ್ಲಿ ಅಮೇರಿಕ ಇರಾಕ್ ದೇಶದ ಮೇಲೆ ಆಕ್ರಮಣ ಮಾಡಿದಾಗ 20 ಲಕ್ಷ ಜನರು ಹತರಾಗಿದ್ದರು.

ಮಹಾರಾಷ್ಟ್ರದಲ್ಲಿ ಪ್ರತಿವರ್ಷ 1,500 ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಮುಂಬಯಿಯಲ್ಲಿ ಪ್ರತಿ ತಿಂಗಳು 450 ಜನರು ರೈಲಿನ ಅಡಿಯಲ್ಲಿ ಸಿಲುಕಿ ಸಾವನ್ನಪ್ಪುತ್ತಾರೆ.

ಹ. ಮುಹಮ್ಮದ್(ಸ) ಜೀವಿತಾವಧಿಯಲ್ಲಿ ನಡೆದ ಯುದ್ಧಗಳಲ್ಲಿ ಹತರಾದವರ ಸಂಖ್ಯೆ 1018. ಇದರಲ್ಲಿ 50% ವ್ಯಕ್ತಿಗಳು ಮುಸ್ಲಿಮರು. ವಾಸ್ತವಿಕಾಂಶ ಹೀಗಿರುವಾಗ ಹ. ಮುಹಮ್ಮದ್(ಸ) ಮಾಡಿದ ಹೋರಾಟಕ್ಕೆ ಯುದ್ಧವೆಂದು ಹೆಸರಿಸ ಬಹುದೇ?

* ಅಲ್ಲಾಹನು ಹ. ಮುಹಮ್ಮದ್(ಸ)ರಿಗೆ 40ನೇ ವರ್ಷದಲ್ಲಿ ಪ್ರವಾದಿತ್ವದ

ಹೊಣೆಗಾರಿಕೆಯನ್ನು ವಹಿಸಿದನು. 23 ವರ್ಷ ಪ್ರವಾದಿತ್ವದ ಹೊಣೆಗಾರಿಕೆಯನ್ನು ನಿರ್ವಹಿಸಿದರು. ಪ್ರವಾದಿತ್ವದ ಮೊದಲ 15 ವರ್ಷಗಳಲ್ಲಿ ಮುಸ್ಲಿಮರಿಗೆ ಸತ್ಯ ನಿಷೇಧಿಗಳ ವಿರುದ್ಧ ಶಸ್ತ್ರಾಸ್ತ್ರ ಎತ್ತುವ ಅನುಮತಿ ನೀಡಲಾಗಿರಲಿಲ್ಲ.

ಅಲ್ಲಾಹನು ಮುಸ್ಲಿಮರಿಗೆ ಇನ್ನುಳಿದ ಅವಶೇಷಗಳಲ್ಲಿ ಸತ್ಯ ನಿಷೇಧಿಗಳ ವಿರುದ್ಧ ಶಸ್ತ್ರಾಸ್ತ್ರ ಎತ್ತುವ ಅನುಮತಿ ನೀಡಿದಿರುತ್ತಿದ್ದರೆ. ಭೂಮಿಯ ಮೇಲೆ ಅಲ್ಲಾಹನ ಹೆಸರನ್ನು ಹೇಳುವ ಒಬ್ಬ ವ್ಯಕ್ತಿಯೂ ಇರುತ್ತಿರಲಿಲ್ಲ.

ಶ್ರೀ ಕೃಷ್ಣನ ಬೋಧನೆಗಳು: ಮಹಾ ಭಾರತದ ಕರ್ಣ ಓರ್ವ ಸಜ್ಜನನಾಗಿದ್ದನು. ಕರ್ಣ, ಅರ್ಜುನನ ಹಿರಿಯ ಸಹೋದರನಾಗಿದ್ದನು. ಕರ್ಣ, ಶ್ರೀ ಕೃಷ್ಣರಿಗೆ ಬಹಳ ಗೌರವಿಸುತ್ತಿದ್ದನು. ಆದರೆ ಮಹಾ ಭಾರತ ಯುದ್ಧದಲ್ಲಿ ಕರ್ಣನು ದುರ್ಯೊಧನನ ಪರವಾಗಿ ಯುದ್ಧ ಮಾಡಿದನು. ಎಲ್ಲರಿಗೂ ತಿಳಿದಿರುವಂತೆ ದುರ್ಯೊಧನನು ಕೆಡುಕಿನ ದಾರಿಯಲ್ಲಿ ಸಾಗುತ್ತಿದ್ದನು.

ಯುದ್ಧದ ಸಂದರ್ಭದಲ್ಲಿ ಕರ್ಣನ ರಥದ ಚಕ್ರವು ನೆಲದ ಒಳಗೆ ಹೂತು ಹೋಗುತ್ತದೆ. ಕರ್ಣ ಶಸ್ತ್ರಾಸ್ತ್ರಗಳನ್ನು ಬದಿಗಿರಿಸಿ, ರಥದ ಚಕ್ರಗಳನ್ನು ಎತ್ತಲು ಪ್ರಯತ್ನಿಸುತ್ತಾನೆ. ಶ್ರೀ ಕೃಷ್ಣನು ಅರ್ಜುನನಿಗೆ ಕರ್ಣನನ್ನು ಕೊಲ್ಲಲು ಆಜ್ಞಾಪಿಸುತ್ತಾನೆ.

ಕರ್ಣನು ಅರ್ಜುನನಿಗೆ ಯುದ್ಧದ ನಿಯಮಗಳಿಗನುಸಾರ ಹೋರಾಡುವಂತೆ ತಿಳಿಸುತ್ತಾನೆ. (ಯುದ್ಧದ ನಿಯಮದಂತೆ ಶಸ್ತ್ರಾಸ್ತ್ರ ಹೊಂದಿರದ ವ್ಯಕ್ತಯ ಮೇಲೆ ಆಕ್ರಮಣ ಮಾಡುವುದು ನಿಷಿದ್ಧವಾಗಿದೆ). ಅರ್ಜುನನು, ಶ್ರೀ ಕೃಷ್ಣ ಬಹುಶಃ ತಪ್ಪಾಗಿ ನಿರಾಯುಧನಾದ ಕರ್ಣನ ಹತ್ಯೆ ಮಾಡಲು ಹೇಳಿರಬಹುದೆಂದು. ಭಾವಿಸಿ ಯೋಚನಾ ಮಗ್ನನಾದನು. ಇದನ್ನು ಗಮನಿಸಿ ಶ್ರೀ ಕೃಷ್ಣನು ಅರ್ಜುನನಿಗೆ ಹೀಗೆ ನುಡಿದನು.

"ಯಾವುದು ಧಾರ್ಮಿಕ ಮತ್ತು ಯಾವುದು ಅಧಾರ್ಮಿಕವೆಂದು ನಿರ್ಧರಿಸುವವರು ಯಾರು? ಸ್ವತಃ ತಪ್ಪು ದಾರಿಯಲ್ಲಿ ನಡೆಯುತ್ತಿರುವ ವ್ಯಕ್ತಿ ಇದನ್ನು ಮಾಡಲಾರ. ಸತ್ಯದ ಮಾರ್ಗದಲ್ಲಿ ಸಾಗುತ್ತಿರುವ ವ್ಯಕ್ತಿ ಈ ಕಾರ್ಯವನ್ನು ಮಾಡಬಲ್ಲನು. ನೈಜ ಧರ್ಮವನ್ನು ಸಂಸ್ಥಾಪಿಸಲು ಹೊರಟಿರುವವರೂ ಈ ಕಾರ್ಯವನ್ನು ಮಾಡುತ್ತಾರೆ. ಯುದ್ಧದಲ್ಲಿ ಶತ್ರುವನ್ನು ಕೊಲ್ಲುವುದು ನ್ಯಾಯ ಸಮ್ಮತವಾಗಿದೆ. ಆದುದರಿಂದ ನೀನು ಇದನ್ನು ಮಾಡಲೇ ಬೇಕು."

ಯೋಧನ ಕರ್ತವ್ಯವನ್ನು ನೆನಪಿಡು. ಸತ್ಯ ಧರ್ಮವನ್ನು ಸಂಸ್ಥಾಪಿಸಲು ಹೋರಾಟ ಮಾಡುವುದು ನಿನ್ನ ಅತ್ಯುತ್ತಮ ಕಾರ್ಯವೆಂಬುದನ್ನು ನೀನು ಅರ್ಥ ಮಾಡಿಕೋ. ಆದುದರಿಂದ ಓ ಅರ್ಜುನ!, ಈ ಕಾರ್ಯವನ್ನು ಮಾಡಲು ಹಿಂಜರಿಯ ಬೇಡ" (ಗೀತೆ, ಅಧ್ಯಾಯ2– ಶ್ಲೋಕ 31)

ಅದರಂತೆ ಅರ್ಜುನನು ನಿರಾಯುಧನಾದ ತನ್ನ ಹಿರಿಯ ಸಹೋದರನನ್ನು ಹತ್ಯೆ ಮಾಡಿದನು.

'ಸತ್ಯ ಧರ್ಮದ ಸಂಸ್ಥಾಪನೆಗಾಗಿ ಹೋರಾಟ ಮಾಡಿರಿ" ಎಂದು ಅನೇಕ ಧರ್ಮಗಳು ಬೋಧಿಸಿವೆ. ಸತ್ಯ ಧರ್ಮದ ಸಂಸ್ಥಾಪನೆಗಾಗಿ ಹೋರಾಡುವುದು ಭಯೋತ್ಪಾದನೆಯಲ್ಲ. ಜನರು ತಮ್ಮ ಮೇಲೆ ಅನ್ಯಾಯ, ಅಕ್ರಮ, ಶೋಷಣೆಯಾದಾಗ ಭಯೋತ್ಪಾದನೆಯ ಕಾರ್ಯದಲ್ಲಿ ಇಳಿಯುತ್ತಾರೆ.

ಭಯೋತ್ಪಾದನೆಯು ಇತ್ತೀಚಿನ ದಿನಗಳಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ಪ್ರಾರಂಭವಾಯಿತು. ಬ್ರಿಟಿಷರು ತಮ್ಮೊಂದಿಗೆ ನ್ಯಾಯೋಚಿತವಾಗಿ ವರ್ತಿಸುತ್ತಿಲ್ಲವೆಂದು ಸ್ಕಾಟ್‌ಲ್ಯಾಂಡ್‌ನ ಜನತೆಗೆ ಅನಿಸಿತು. ಇದರ ನಂತರ ಫೆಲೆಸ್ತೀನಿಯರು ಭಯೋತ್ಪಾದನಾ ಚಟುವಟಿಕೆಗಳಲ್ಲಿ ನಿರತರಾದರು. ಅಮೇರಿಕ, ಇಂಗ್ಲೆಂಡ್ ಮತ್ತು ಇಸ್ರೇಲ್ ತಮಗೆ ಅನ್ಯಾಯ ಮಾಡುತ್ತಿರುವರು ಎಂದು ಅವರು ಭಾವಿಸಿದರು. ಫೆಲೆಸ್ತೀನಿಯರ ನಂತರ ಶ್ರೀಲಂಕಾದ ತಮಿಳರು ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿದರು. ಶ್ರೀಲಂಕಾದ ಸಿಂಹಳೀಯ ಸರ್ಕಾರದ ಬಗ್ಗೆ ಅವರಿಗೆ ದೂರು ಇತ್ತು.

ಸಮಾಜದಲ್ಲಿ ಭಯೋತ್ಪಾದನೆಯು ನಿರ್ಮೂಲನೆಯಾಗ ಬೇಕಾದರೆ ಎಲ್ಲಾ ಜನರಿಗೂ ನ್ಯಾಯ ಸಿಗುವಂತಾಗಬೇಕು. ಯಾವ ಧರ್ಮಗಳೂ ಭಯೋತ್ಪಾದನೆಯನ್ನು ಬೋಧಿಸುವುದಿಲ್ಲ. ಅನ್ಯಾಯ, ಅಕ್ರಮಗಳಿಗಾಗಿ ಭಯೋತ್ಪಾದನೆಯು ಆರಂಭವಾಗುತ್ತದೆ.

ಕಾಫಿರ್ ಯಾರು? ಯಾವುದೇ ವಿಷಯವನ್ನು ನಿರಾಕರಿಸುವವರನ್ನು ಕಾಫಿರ್ ಎನ್ನುತ್ತಾರೆ. ಸೃಷ್ಟಿಕರ್ತನ ಸಂದೇಶವನ್ನು ನಿರಾಕರಿಸುವವನನ್ನೂ ಕಾಫಿರ್ ಎನ್ನುತ್ತಾರೆ. ಇಸ್ಲಾಮಿನ ಯಾವುದೇ ಆದೇಶವನ್ನು ಓರ್ವ ಮುಸ್ಲಿಮನು ನಿರಾಕರಿಸಿದರೆ ಆತನೂ ಕಾಫಿರ್ ಎಂದು ಕರೆಯಲ್ಪಡುವವನು. ಪಾಕಿಸ್ತಾನದ ಮುಸ್ಲಿಮರ ಒಂದು ಗುಂಪು ಗುಲಾಮ್ ಅಹ್ಮದ್ ಕಾದಿಯಾನಿಯನ್ನು ಪ್ರವಾದಿಯೆಂದು ನಂಬುತ್ತಾರೆ. ಈ ಜನರನ್ನು ಜಗತ್ತಿನ ಮುಸ್ಲಿಮರೆಲ್ಲರೂ ಕಾಫಿರ್ ಎಂದು ಕರೆಯುತ್ತಾರೆ.

ಮುಶ್ರಿಕ್ ಯಾರು? ಬಹುದೇವ ಆರಾಧನೆ): ಅಲ್ಲಾಹನ ಜೊತೆಗೆ ಇತರ ವಸ್ತುಗಳನ್ನು ವ್ಯಕ್ತಿಗಳನ್ನು ದೇವರೆಂದು ಒಗೆದು, ಅವುಗಳನ್ನು ಆರಾಧಿಸುವವರಿಗೆ ಮುಶ್ರಿಕ್ (ಬಹು ದೇವ ಆರಾಧಕರು) ಎನ್ನುತ್ತಾರೆ. ಅಲ್ಲಾಹನ ಗುಣಗಳು (ಎಲ್ಲಾ ಅಥವಾ ಕೆಲವು) ಇತರ ವಸ್ತುಗಳಲ್ಲಿಯೂ, ವ್ಯಕ್ತಿಗಳಲ್ಲಿಯೂ ಇವೆ ಎಂದು ನಂಬುವವರಿಗೂ ಮುಶ್ರಿಕ್ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿಯಲ್ಲಿ ನಮ್ಮ ಸಂಕಷ್ಟಗಳನ್ನೂ ದೂರ ಮಾಡುವ ಶಕ್ತಿ ಇದೆ ಅಥವಾ ಒಬ್ಬ ವ್ಯಕ್ತಿಯಲ್ಲಿ ಬೇಡಿಕೊಂಡರೆ ನಮ್ಮ ಇಷ್ಟಾರ್ಥಗಳು ಪೂರ್ಣಗೊಳ್ಳುತ್ತವೆ ಎಂದು ಭಾವಿಸುವುದು.

ಆದುದರಿಂದ ಕುರ್‌ಆನ್‌ನಲ್ಲಿ ತಿಳಿಸಿರುವ 'ಕಾಫಿರ್' ಮತ್ತು 'ಮುಶ್ರಿಕ್' ಯಾವುದೇ ನಿರ್ದಿಷ್ಟ ಧರ್ಮಕ್ಕೆ ಸೇರಿದವರಲ್ಲ. ಯಾವುದೇ ಧರ್ಮಕ್ಕೆ ಸೇರಿದವನಾಗಿರಲಿ ಯಾರು ಏಕೈಕ ಸೃಷ್ಟಿಕರ್ತನ ಜೊತೆ ಇತರರನ್ನು, ಆರಾಧಿಸುತ್ತಾರೋ, ಅವರು ಮುಶ್ರಿಕರು. ಪ್ರವಾದಿಗಳು ತಂದ ಧರ್ಮವನ್ನು ಅವರ ಬೋಧನೆಗಳನ್ನು ಯಾರು ನಿರಾಕರಿಸುತ್ತಾರೋ, ಅವರೇ ಕಾಫಿರ್.

ಹ. ಮುಹಮ್ಮದ್(ಸ)ರ ನಿಧನ ನಂತರ ಹ. ಅಬೂಬಕ್ಕರ್ ಸಿದ್ದೀಕ್(ರ) ಮತ್ತು ಹ. ಉಮರ್(ರ), ಝಕಾತ್ ನೀಡಲು ನಿರಾಕರಿಸಿದ ಮತ್ತು ಕಪಟ ಪ್ರವಾದಿಗಳ ಮೇಲೆ ವಿಶ್ವಾಸವಿಟ್ಟಿದ್ದ ಸಹಸ್ರಾರು ಮುಸ್ಲಿಮರ ವಿರುದ್ಧ ಯುದ್ಧ ಘೋಷಿಸಿದ್ದರು. ಈ ಮುಸ್ಲಿಮರು ಕಾಫಿರ್ ಆಗಿದ್ದರು. ಕಾಫಿರ್ ಪದವನ್ನು ಯಾವುದೇ ಧರ್ಮದ ಅನುಯಾಯಿಗಳನ್ನು ಹೀಯಾಳಿಸಲು ಬಳಸುವಂತಹದ್ದಲ್ಲ.

● ಜಿಹಾದ್: ಜಿಹಾದ್ ಪದದ ಅರ್ಥ

ಹೋರಾಟವಾಗಿದೆ. ಓರ್ವ ವ್ಯಕ್ತಿಯು ತನ್ನಲ್ಲಿರುವ ಕೆಡುಕುಗಳನ್ನು ದೂರೀಕರಿಸಲು, ತನ್ನ ಇಚ್ಛೆಗಳನ್ನು ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತಿದ್ದರೆ, ಇದೂ ಜಿಹಾದ್ ಆಗಿದೆ. ಜಿಹಾದ್ ಎಂದರೆ ಮುಸ್ಲಿಮೇತರರ ವಿರುದ್ಧ ಹೋರಾಡುವ ಧರ್ಮ ಯುದ್ಧವಲ್ಲ. ಕೆಡುಕಿನ ವಿರುದ್ಧ ಒಳಿತಿನ ಹೋರಾಟಕ್ಕೆ ಜಿಹಾದ್ ಎನ್ನುತ್ತಾರೆ.

************

# ಹ. ಮುಹಮ್ಮದ್(ಸ)ರ ಬಹು ವಿವಾಹಗಳು

ಹ. ಮುಹಮ್ಮದ್(ಸ)ರ ಮೇಲೆ ಕೆಲ ಜನರ ಆಕ್ಷೇಪಣೆ ಅವರ ಬಹು ವಿಹಾಹಗಳಿಗೆ ಸಂಬಂಧಿಸಿದೆ. ಪ್ರವಾದಿ(ಸ) 12 ವಿವಾಹಗಳನ್ನು ಏಕೆ ಆದರು? ಎಂದು ಅವರು ಪ್ರಶ್ನಿಸುತ್ತಾರೆ.

ಸಾಮಾನ್ಯವಾಗಿ ಜಗತ್ತಿ ಎಲ್ಲಾ ಧರ್ಮಗಳೂ ಬಹು ಪತ್ನಿತ್ವವನ್ನು ಅನುಮತಿಸುತ್ತವೆ. ಇತಿಹಾಸದಲ್ಲಿ ಪ್ರವಾದಿಗಳು ಧಾರ್ಮಿಕ ಮುಖಂಡರು ಬಹು ಪತ್ನಿಯರನ್ನು ಹೊಂದಿರುವುದನ್ನು ನಾವು ಕಾಣುತ್ತೇವೆ.

* ಶ್ರೀ ಕೃಷ್ಣ 1,600 ಪತ್ನಿಯರನ್ನು ನಾವು ಕಾಣುತ್ತೇವೆ.

* ಹ. ಸುಲೈಮಾನ್(ಅ) 99 ಪತ್ನಿಯರನ್ನು ಹೊಂದಿದ್ದರು.

* ಶ್ರೀ ರಾಮನ ಪಿತಾಮಹ ದಶರಥರಿಗೆ ಮೂವರು ಮಡದಿಯರಿದ್ದರು.

ಹ. ಮುಹಮ್ಮದ್(ಸ) 12 ಪತ್ನಿಯರನ್ನು ಹೊಂದುವುದು ವಿಧಿ ಲಿಖಿತವಾಗಿತ್ತು. 4000 ವರ್ಷಗಳ ಹಿಂದೆಯೇ ಅಥರ್ವ ವೇದದಲ್ಲಿ ಉಲ್ಲೇಖವಿದೆ.

**उष्टा यस्य प्रवाहिणो वधुमन्तों द्विर्दश।**
**वर्ष्मा रथस्य नि जिहीडते दिव ईषमाण उपस्पृशः।**

(अथर्ववेद, कुन्ताप सूक्तः २०-२)

(ಅಥರ್ವ ವೇದ ಕುಂತಬ್ ಸೂಕ್ತ: 20–2)

ಅನುವಾದ: ಯಾರ ರಥಕ್ಕೆ ಎರಡು ಸುಂದರ ಹೆಣ್ಣು ಒಂಟೆಗಳಿವೆಯೋ, ಅಥವಾ ಯಾರು ತನ್ನ ಒಂಟೆಗಳನ್ನು 12 ಪತ್ನಿಯರೊಂದಿಗೆ ಸವಾರಿ ಮಾಡುತ್ತಾನೋ, ಆತನ ಮಹಾನತೆಯು ಹಹನವನ್ನು ಮುಟ್ಟಿ ಧರೆಗೆ ಇಳಿಯುವುದು.

(ಹರ್ಝುತ್. ಮುಹಮ್ಮದ್ ಔರ್ ಬಾರತೀಯ ಧರ್ಮ– ಅನುವಾದ ಡಾ॥ ಎಮ್. ಎ. ಶ್ರೀ ವಾತ್ಸವ)

ಓರ್ವ ವ್ಯಕ್ತಿಯು ವಿಷಯಾಸಕ್ತನಾಗಿದ್ದಾರೆ, ಆತನು ಯುವಕನಾಗಿರುವಾಗ ಆತನ ಹಾವಭಾವಗಳಲ್ಲಿ ಇದು ಪ್ರಕಟಿತವಾಗುತ್ತದೆ. ಹ. ಮುಹಮ್ಮದ್(ಸ)ರ ನಡವಳಿಕೆ, ಅವರ ಚಾರಿತ್ರ್ಯದ ಬಗ್ಗೆ ಇಲ್ಲಿಯವರೆಗೆ ಯಾವನೇ ವ್ಯಕ್ತಿಯು ಚಕಾರವೆತ್ತಿಲ್ಲ! ಹ. ಮುಹಮ್ಮದ್(ಸ)ರ ಕಡು ವೈರಿಗಳು ಸಹಾ ಅವರ ಚಾರಿತ್ರ್ಯದ ಬಗ್ಗೆ ಒಂದೂ ಆಕ್ಷೇಪಾರ್ಹ ಮಾತು ಹೇಳಿಲ್ಲ. ಹ. ಮುಹಮ್ಮದ್(ಸ)ರ ಪ್ರವಾದಿತ್ವದ ಮೊದಲಿನ ಜೀವನವೂ ನಿಷ್ಕಳಂಕವಾಗಿತ್ತು.

ಹ. ಮುಹಮ್ಮದ್(ಸ) ಮಕ್ಕಾ ಪಟ್ಟಣದಲ್ಲಿಯೇ ಹುಟ್ಟಿ ಬೆಳೆದಿದ್ದರು. ಅವರು ಪ್ರವಾದಿಯಾದಾಗ 40 ವರ್ಷ ಪ್ರಾಯವಾಗಿದ್ದು, ಅವರ ಜೀವನದ 40 ವರ್ಷಗಳೂ ಕುರೈಶರ ಕಣ್ಣೆದುರೇ ಇತ್ತು. ಪ್ರವಾದಿತ್ವದ ಮೊದಲೂ ಹ. ಮುಹಮ್ಮದ್(ಸ) ಸತ್ಯತೆಗೆ, ಪ್ರಾಮಾಣಿಕತೆಗೆ ಇಡಿ ಅರಬ್ ಪ್ರದೇಶದಲ್ಲಿ ಪ್ರಖ್ಯಾತರಾಗಿದ್ದರು. ಜನರು ಅವರನ್ನು ಅಮೀನ್(ಸತ್ಯಸಂಧ), ಸಾದಿಕ್(ಪ್ರಾಮಾಣಿಕ) ಎಂಬ ಬಿರುದುಗಳಿಂದ ಕರೆಯುತ್ತಿದ್ದರು. ಓರ್ವ ವ್ಯಕ್ತಿಯು

ವಿಷಯಾಸಕ್ತನಾಗಿದ್ದರೆ, ಅವನು ಸತ್ಯಸಂಧನೂ, ಪ್ರಾಮಾಣಿಕನು ಮತ್ತು ಚಾರಿತ್ರ್ಯದಲ್ಲಿ ನಿಷ್ಕಳಂಕನಾಗಿರಲು ಸಾದ್ಯವೇ?

ಹ. ಮುಹಮ್ಮದ್(ಸ)ರ ಎರಡನೇ ವಿವಾಹ:
ಹ. ಮುಹಮ್ಮದ್(ಸ), ಹ. ಖದೀಜ(ರ)ರನ್ನೂ 25ನೇ ವರ್ಷ ಪ್ರಾಯದಲ್ಲಿ ವಿವಾಹವಾಗಿದ್ದರು. ಹ. ಖದೀಜ(ರ)ರೊಂದಿಗೆ 25 ವರ್ಷಗಳ ವೈವಾಹಿಕ ಜೀವನವನ್ನೂ ನಡೆಸಿದ್ದರು. ದಂಪತಿಗಳಿಗೆ ಇರ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರಿದ್ದರು.

ಹ. ಮುಹಮ್ಮದ್(ಸ)ರ 50ನೇ ವಯಸ್ಸಿನಲ್ಲಿ ಹ. ಖದೀಜ(ರ) ನಿಧನ ಹೊಂದಿದರು. ಅವರ ನಿಧನ ನಂತರ ದೀರ್ಘ ಅವಧಿಯವರೆಗೆ ಪ್ರವಾದಿ(ಸ) ಮರು ವಿವಾಹವಾಗಿರಲಿಲ್ಲ. ಹ. ಝೈನಬ್(ರ) ಪ್ರವಾದಿ(ಸ)ರ ಹಿರಿಯ ಪುತ್ರಿಯ ವಿವಾಹವಾಗಿ ಅವರು ಪತಿಯ ಮನೆಯಲ್ಲಿದ್ದರು. ಹ. ಮುಹಮ್ಮದ್(ಸ)ರ ಎರಡನೆ ಪುತ್ರಿ ಹ. ರುಕಿಯ್ಯ(ರ)ರ ವಿವಾಹ ಹ. ಉಸ್ಮಾನ್(ರ)ರೊಂದಿಗೆ ಆಗಿತ್ತು. ಅವರು ತಮ್ಮ ಪತಿಯೊಂದಿಗೆ ಅಬಿಸೀನಿಯಾ ವಲಸೆ ಹೋಗಿದ್ದರು. ಹ. ಝೈದ್ ಬಿನ್ ಹಾರಿಸ್(ರ) ಪ್ರವಾದಿ(ಸ)ರ ಸಾಕು ಪುತ್ರ ವಿವಾಹವಾಗಿ ಪತ್ನಿಯೊಂದಿಗೆ ಪ್ರತ್ಯೇಕವಾಗಿ ಜೀವನ ನಡೆಸುತ್ತಿದ್ದರು.

ಹ. ಮುಹಮ್ಮದ್(ಸ)ರೊಂದಿಗೆ ಇಬ್ಬರು ಕಿರಿಯ ಪುತ್ರಿಯರು ಮಾತ್ರ ಇದ್ದರು. ಇಡಿಯ ಮಕ್ಕಾ ಪಟ್ಟಣ ಹ. ಮುಹಮ್ಮದ್(ಸ)ರ ಶತ್ರುವಾಗಿತ್ತು. ಈ ಕಾರಣದಿಂದ ಪ್ರವಾದಿ(ಸ)ರ ಅನುಯಾಯಿಗಳು ಪ್ರವಾದಿ(ಸ)ರನ್ನು ಮರು ವಿವಾಹವಾಗಲು ಸಲಹೆ ನೀಡಿದರು. ಅನುಯಾಯಿಗಳ ಸಲಹೆ ಮೇರೆಗೆ ಪ್ರವಾದಿ(ಸ) 65 ವರ್ಷ ಪ್ರಾಯದ ಸ್ಥೂಲಕಾಯದ ವಿಧವೆ ಹ. ಸೌದ(ರ)ರನ್ನು ವಿವಾಹವಾದರು. ಇವರೊಂದಿಗೆ 4 ವರ್ಷ ಬಾಳುವೆ ನಡೆಸಿದರು.

ಹ. ಮುಹಮ್ಮದ್(ಸ) ವಿಷಯಾಸಕ್ತರಾಗಿದ್ದರೆ, ಹ. ಖದೀಜ(ರ)ರ ನಿಧನದ ದೀರ್ಘ ಕಾಲದ ನಂತರ ಏಕೆ ಮರು ವಿವಾಹವಾದರು? ಹ. ಖದೀಜ(ರ)ರ ನಿಧನದ ಕೂಡಲೇ ವಿವಾಹವಾಗ ಬಹುದಿತ್ತು. ಅಲ್ಲದೇ, ಹ. ಮುಹಮ್ಮದ್(ಸ) 65 ವರ್ಷದ ಸ್ಥೂಲ ಕಾಯದ ವಿಧವೆಯನ್ನು ಏಕೆ ವಿವಾಹವಾದರು? ಕಡಿಮೆ ಪ್ರಾಯದ ಯುವತಿಯನ್ನೇ ವಿವಾಹವಾಗ ಬಹುದಿತ್ತು.

ಹ. ಆಯಿಶಾ(ರ)ರೊಂದಿಗೆ ವಿವಾಹ:

ಹ. ಮುಹಮ್ಮದ್(ಸ), ಹ. ಆಯಿಶಾ(ರ)ರೊಂದಿಗೆ ವಿವಾಹವಾದಾಗ ಹ. ಆಯಿಶಾ(ರ)ರಿಗೆ ಆರು ವರ್ಷ ವಯಸ್ಸಾಗಿತ್ತೆಂದು ಆರೋಪಿಸಲಾಗುತ್ತಿದೆ. ವಿವಾಹವಾಗುವಾಗ ಹ. ಆಯಿಶಾ(ರ)ರಿಗೆ ಆರು ವರ್ಷ ವಯಸ್ಸಾಗಿತ್ತೆಂದು ಹದೀಸ್ ಗ್ರಂಥಗಳಲ್ಲಿ ವರದಿಯಾಗಿರುವುದು ಈ ಆರೋಪಕ್ಕೆ ಕಾರಣವಾಗಿದೆ.

ಪ್ರವಾದಿಯು ತಪ್ಪು ಕಾರ್ಯ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಾಹನು ಸದಾ ಅವರ ಮಾರ್ಗದರ್ಶನ ಮಾಡುತ್ತಿರುತ್ತಾನೆ. ಆದುದರಿಂದ ಹದೀಸ್ ಗ್ರಂಥದಲ್ಲಿ ವಿವಾಹದ ಸಮಯದಲ್ಲಿ ಹ. ಆಯಿಶಾ(ರ) ವಯಸ್ಸು ಆರು ವರ್ಷವಾಗಿರುತ್ತೆಂದು ವರದಿಯಾಗಿದ್ದರು, ಅದು ಸರಿಯಲ್ಲ. ಹ. ಆಯಿಶಾ(ರ) ವಂಶಾವಳಿಯ ನಿರೂಪಣೆಯಲ್ಲಿ ಪರಿಣಿತರಾಗಿದ್ದರು. ಇದಲ್ಲದೆ ಸಾಹಿತ್ಯದಲ್ಲೂ ಅವರಿಗೆ ಸಾಕಷ್ಟು ಜ್ಞಾನವಿತ್ತು. 6 ವರ್ಷದ ಪ್ರಾಯದ ಬಾಲಕಿಗೆ ಇದು ಸಾಧ್ಯವಿಲ್ಲ.

ಹ. ಆಯಿಶಾ(ರ) ಅವರ ಸಹೋದರಿ ಹ. ಅಸ್ಮಾ(ರ)ಗಿಂತ 10 ವರ್ಷ ಕಿರಿಯರಾಗಿದ್ದರು. ಹಿಜ್ರತ್‌ನ ಸಂದರ್ಭದಲ್ಲಿ ಹ. ಅಸ್ಮಾ(ರ)ರ ಪ್ರಾಯ 27 ವರ್ಷವಾಗಿತ್ತು ಮತ್ತು ಹ. ಆಯಿಶಾ(ರ)ರ ಪ್ರಾಯ 17 ವರ್ಷವಾಗಿತ್ತು. ಹ. ಆಯಿಶಾ(ರ) 16ನೇ ಪ್ರಾಯದಲ್ಲಿ ಪ್ರವಾದಿ(ಸ)ರನ್ನು ವಿವಾಹವಾಗಿದ್ದರು.

ಪ್ರವಾದಿ(ಸ) ತಮ್ಮ ಕನಸಿನಲ್ಲಿ ಹ. ಆಯಿಶಾ(ರ)ರೊಂದಿಗೆ ವಿವಾಹವಾಗುತ್ತಿರುವುದಾಗಿ ಕಂಡಿದ್ದರು. ಪ್ರವಾದಿಗಳ ಕನಸುಗಳು ಬರಿಯ ಕನಸುಗಳಾಗಿರದೆ ಅಲ್ಲಾಹನ ಆದೇಶವಾಗಿರುತ್ತವೆ. ಅಲ್ಲಾಹನ ಆದೇಶದ ಪಾಲನೆ ಪ್ರವಾದಿಗಳ ಕರ್ತವ್ಯ ವಾಗಿರುತ್ತದೆ. ಈ ಕಾರಣದಿಂದ ಹ. ಆಯಿಶಾ(ರ)ರ ವಿವಾಹದ ಪ್ರಸ್ತಾಪ ಪ್ರವಾದಿ(ಸ)ರ ಮುಂದೆ ಬಂದಾಗ, ಪ್ರವಾದಿ(ಸ) ಅದಕ್ಕೆ ಸಮ್ಮತಿಸಿದ್ದರು.

ಹ. ಆಯಿಶಾ(ರ)ರಿಗೆ ಅಮೋಘ ಜ್ಞಾಪನಾ ಶಕ್ತಿ ಇತ್ತು. ಹದೀಸ್ ಗ್ರಂಥಗಳಲಿರುವ ಸುಮಾರು 30% ಹದೀಸ್‌ಗಳು ಹ. ಆಯಿಶಾ(ರ)ರಿಂದ ವರದಿ ಮಾಡಲ್ಪಟ್ಟಿವೆ. ಪ್ರವಾದಿ(ಸ)ರ ನಿಧನದ ನಂತರ ಕ್ಲಿಷ್ಟಕರ ಸಮಸ್ಯೆಗಳನ್ನು ಬಗೆಹರಿಸಲು ಸಹಾಬಿಗಳು ಹ. ಆಯಿಶಾ(ರ)ರವರನ್ನು ಸಂಪರ್ಕಿಸುತ್ತಿದ್ದರು. ಈ ರೀತಿ ಹ. ಆಯಿಶಾ(ರ) ಮತ್ತು ಹ. ಮುಹಮ್ಮದ್(ಸ)ರ ವಿವಾಹ ಅಲ್ಲಾಹನ ಇಚ್ಛೆಯಿಂದಲೇ ನೆರವೇರಿಸಲ್ಪಟ್ಟಿತ್ತು.

ಹ. ಝೈನಬ್(ರ)ರೊಂದಿಗೆ ವಿವಾಹ:

ಹ. ಮುಹಮ್ಮದ್(ಸ), ಹ. ಝೈನಬ್(ರ)ರನ್ನು ಒಮ್ಮೆ ನೋಡಿ ಮೋಹಿತರಾದರೆಂದು, ನಂತರ ಅವರಿಗೆ ಹ. ಝೈದ್ ಬಿನ್ ಹಾರಿಸ್(ರ)ರಿಂದ ವಿಚ್ಛೇದನ ಕೊಡಿಸಿ, ವಿವಾಹವಾದರೆಂದೂ ಹ. ಮುಹಮ್ಮದ್(ಸ)ರನ್ನು ಆಪಾದಿಸಲಾಗುತ್ತದೆ.

ಹ. ಝೈನಬ್(ರ) ಪ್ರವಾದಿ(ಸ)ರ ತಂದೆಯ ಸಹೋದರಿಯ ಪುತ್ರಿಯಾಗಿದ್ದರು. ಹೀಗೆ ಹ. ಝೈದ್ ಬಿನ್ ಹಾರಿಸ್(ರ) ಓರ್ವ ಗುಲಾಮರಾಗಿದ್ದರು. ಬಾಲಕರಾಗಿರುವಾಗಲಿಂದ ಹ. ಝೈದ್ ಬಿನ್ ಹಾರಿಸ್(ರ) ಹ. ಮುಹಮ್ಮದ್(ಸ)ರ ಸೇವಕರಾಗಿದ್ದರು. ಹ. ಮುಹಮ್ಮದ್(ಸ) ನಂತರ ಹ. ಝೈದ್ ಬಿನ್ ಹಾರಿಸ್(ರ) ಬೆಳೆದು ಯುವಕರಾದಾಗ ಅವರನ್ನು ಹ. ಝೈನಬ್(ರ)ರೊಂದಿಗೆ ವಿವಾಹ ಮಾಡಿಸಿದರು. ಹ. ಮುಹಮ್ಮದ್(ಸ), ಹ. ಝೈನಬ್(ರ)ರನ್ನು ಮೋಹಿಸಿದ್ದರೆ, ತಾವೇ ಅವರೊಂದಿಗೆ ವಿವಾಹ ಮಾಡಿಕೊಳ್ಳ ಬಹುದಿತ್ತು.

ಹ. ಝೈನಬ್(ರ) ಕುರೈಶ್‌ನ ಕುಲೀನ ಗೋತ್ರಕ್ಕೆ ಸೇರಿದ್ದರು. ಹ. ಮುಹಮ್ಮದ್(ಸ)ರ ಹತ್ತಿರದ ಸಂಬಂಧಿಯಾಗಿದ್ದರು. ಆ ದಿನ ಕಾಲದಲ್ಲಿ ಸ್ವತಂತ್ರ ಗೊಂಡ ಗುಲಾಮರಾಗಿದ್ದರೆಂದು, ಪತಿ ಪತ್ನಿಯರ ನಡುವೆ ಸಾಮರಸ್ಯವಿರಲಿಲ್ಲ. ಕೊನೆಗೆ ಹ. ಝೈದ್ ಬಿನ್ ಹಾರಿಸ್(ರ) ಹ. ಝೈನಬ್(ರ)ರಿಗೆ ವಿಚ್ಛೇದನ ನೀಡಿದರು.

ದತ್ತು ಪುತ್ರನ ನೈಜ ತಂದೆಯನ್ನು ಬಿಟ್ಟು ಆತನನ್ನು ದತ್ತು ತೆಗೆದು ಕೊಂಡಿರುವ ವ್ಯಕ್ತಿಯನ್ನೇ ತಂದೆಯೆಂದು ಅರಬರು ಪರಿಗಣಿಸಿ, ದತ್ತು ಪುತ್ರನಿಗೂ ನೈಜ ಪುತ್ರನಂತೆಯೇ ವಾರಿಸು ಹಕ್ಕು ನೀಡುತ್ತಿದ್ದರು. ಇದು ಕೆಟ್ಟ ಸಂಪ್ರದಾಯವಾಗಿತ್ತು. ಅಲ್ಲಾಹನು ಈ ಸಂಪ್ರದಾಯವಾಗಿತ್ತು. ಅಲ್ಲಾಹನು ಈ ಸಂಪ್ರದಾಯವನ್ನು ಕೊನೆಗೊಳಿಸಿ ದತ್ತು ಪುತ್ರನು ನೈಜ ಪುತ್ರನಿಗೆ ಸಮಾನವಲ್ಲವೆಂದು

ತೋರಿಸ ಬಯಸಿದ್ದನು. ಮುಂದುವರೆದು ವಿವಾಹಕ್ಕೆ ಧರ್ಮ ಸಮ್ಮತ ಸಂಬಂಧಗಳು, ದತ್ತು ಪುತ್ರ ಅಥವಾ ದತ್ತು ಪುತ್ರಿಯನ್ನು ಹೊಂದಿದ ಕೂಡಲೇ ಯಾರೂ ತಮ್ಮ ಸೊಸೆಯನ್ನು ಮಡದಿಯಾಗಿ ಸ್ವೀಕರಿಸುವುದಿಲ್ಲ. ಆದರೆ ದತ್ತು ಪುತ್ರನ ವಿಷಯ ಹಾಗಲ್ಲ. ದತ್ತು ಪುತ್ರನು ಮಡದಿಯನ್ನು ವಿಚ್ಛೇದನ ನೀಡಿದ ನಂತರ ಆಕೆಯನ್ನು ಪತ್ನಿಯಾಗಿ ಸ್ವೀಕರಿಸಲು ಯಾವುದೇ ನಿರ್ಭಂದನೆಗಳು ಇರುವುದಿಲ್ಲ. ಧರ್ಮ ಬಾಹಿರವಾಗುವುದಿಲ್ಲವೆಂದು ಜಗತ್ತಿಗೆ ತೋರಿಸಬೇಕಾಗಿತ್ತು. ಈ ಕಾರಣಕ್ಕಾಗಿ ಅಲ್ಲಾಹ್ ಹ. ಮುಹಮ್ಮದ್(ಸ)ರಲ್ಲಿ ಹ. ಝೈನಬ್(ರ)ರನ್ನು ವಿವಾಹವಾಗಲು ಹೇಳಿದನು.

ಹ. ಮುಹಮ್ಮದ್(ಸ) ಮತ್ತು ಹ, ಝೈನಬ್(ರ) ವಿವಾಹದ ಬಗ್ಗೆ ಕುರ್‌ಆನ್‌ನಲ್ಲಿ ಈ ರೀತಿ ಪ್ರಸ್ತಾಪಿಸಲಾಗಿದೆ.

**"**ಪೈಗಂಬರರೇ, ಅಲ್ಲಾಹನು ನೀವು ಯಾರಿಗೆ ಉಪಕಾರ ಮಾಡಿದ್ದಿರೋ, ಆ ವ್ಯಕ್ತಿಯೊಡನೆ ನೀವು, " ನಿನ್ನ ಪತ್ನಿಯನ್ನು ಬಿಡಬೇಡ ಮತ್ತು ಅಲ್ಲಾಹನನ್ನು ಭಯಪಡು" ಎಂದು ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ಆ ವೇಳೆ ಅಲ್ಲಾಹ್ ಬಹಿರಂಗ ಗೊಳಿಸಲು ಇಚ್ಛಿಸಿದ್ದ ವಿಷಯವನು ನೀವು ನಿಮ್ಮ ಹೃದಯದೊಳಗೆ ಬಚ್ಚಿಟ್ಟಿದ್ದೀರಿ, ನೀವು ಜನರನ್ನು ಹೆದರುತ್ತಿದ್ದೀರಿ. ನಿಜವಾಗಿ ಭಯ ಪಡಲು ಅಲ್ಲಾಹ್ ಅಧಿಕ ಹಕ್ಕುದಾರನಾಗಿದ್ದಾನೆ**"** (ಪವಿತ್ರ ಕುರ್‌ಆನ್ 33:37)

ಹ. ಮುಹಮ್ಮದ್(ಸ) ಆಕಸ್ಮಿಕವಾಗಿ ಹ. ಝೈನಬ್(ರ)ರನ್ನು ಅವರು ಮನೆಯಲ್ಲಿ ನೋಡಿದರು ಎಂಬ ಮಾತು ಸತ್ಯವಲ್ಲ. ಅಲ್ಲಾಹ್ ಕುರ್‌ಆನ್‌ನಲ್ಲಿ ಈ ರೀತಿ ಹೇಳಿರುವನು:

" ಸತ್ಯವಿಶ್ವಾಸಿಗಳೇ, ನಿಮ್ಮ ಮನೆಗಳ ಹೊರತು ಇತರರ ಮನೆಗಳಿಗೆ ಅವರ ಒಪ್ಪಿಗೆ ಪಡೆಯದೆ ಹಾಗೂ ಮನೆಯವರಿಗೆ ಸಲಾಮ್ ಹೇಳದೇ ಪ್ರವೇಶಿಸಬೇಡಿ. ಈ ಕ್ರಮವು ನಿಮ್ಮ ಮಟ್ಟಿಗೆ ಉತ್ತಮ**"** (ಪವಿತ್ರ ಕುರ್‌ಆನ್ 24: 26–27)

ಪ್ರವಾದಿ(ಸ), ಸ್ವಂತ ತಾಯಿಯ ಕೊಠಡಿಯಲ್ಲಿ ಪ್ರವೇಶಿಸ ಬೇಕಿದ್ದರೂ ಅನುಮತಿ ಪಡೆದು ಪ್ರವೇಶಿಸಬೇಕು ಎಂದು ಆದೇಶಿಸಿರುವರು (ಇಮಾಮ್ ಮಾಲಿಕ್, ಮುಂತಖಬ್ ಅಬ್ವಾಬ್ ಭಾಗ–I, ಪುಟ 754). ಯಾವನೇ ವ್ಯಕ್ತಿಯ ಮನೆಗೆ ಹೋದಾಗ, ಬಾಗಿಲಿಗೆ ನೇರವಾಗಿ ನಿಲ್ಲಬಾರದೆಂದು, ಬಾಗಿಲಿನಿಂದ ಸರಿದು ಸ್ವಲ್ಪ ದೂರ ನಿಲ್ಲಬೇಕೆಂದೂ, ಸ್ತ್ರೀ ಬಾಗಿಲು ತೆರೆದರೆ ಆಕೆಯನ್ನು ನೀವು ಕಾಣದಂತಿರಬೇಕು ಎಂದು ಪ್ರವಾದಿ(ಸ) ನುಡಿದಿರುವರು. (ಅಬೂದಾವೂದ್, ಮುಂತಖಬ್ ಅಬ್ವಾಬ್, ಭಾಗ–1 ಪುಟ 753)

ಪ್ರವಾದಿ(ಸ) ಮೇಲಿನ ಆದೇಶಗಳನ್ನು ಸ್ವತಃ ಪಾಲಿಸುತ್ತಿದ್ದರು. ಆದುದರಿಂದ ಹ. ಮುಹಮ್ಮದ್(ಸ) ಹ. ಝೈನಬ್(ರ)ರನ್ನು ಆಕಸ್ಮಿಕವಾಗಿ ಶುದ್ಧ ಸುಳ್ಳಾಗುತ್ತದೆ. ಹ. ಮುಹಮ್ಮದ್(ಸ), ಹ. ಝೈನಬ್(ರ)ನ್ನು ಬಾಲ್ಯದಿಂದಲೇ ಬಲ್ಲವರಾಗಿದ್ದರು. ಅವರೇ ಹ. ಝೈದ್ ಬಿನ್ ಹಾರಿಸ್(ರ)ರ ವಿವಾಹವನ್ನು ಹ. ಝೈನಬ್(ರ)ರೊಂದಿಗೆ ಮಾಡಿಸಿದ್ದರು. ಹ. ಮುಹಮ್ಮದ್(ಸ) ಬಯಸಿದ್ದರೆ, ತಾವೇ ಮೊದಲು ಜೈನಬ್(ರ)ರೊಂದಿಗೆ ವಿವಾಹವಾಗಬಹುದಿತ್ತು.

ಪ್ರವಾದಿ(ಸ)ರ ಮೇಲೆ ಇಸ್ಲಾಮಿನ ಶತ್ರುಗಳು ಮಾಡಿರುವ ಈ ಆರೋಪವು ಸಂಪೂರ್ಣ ನಿರಾಧಾರವಾಗಿದೆ. ಇಸ್ಲಾಮಿನ ಬಗ್ಗೆ ಕೆಲವರು

ಪೂರ್ವಗ್ರಹ ಪೀಡಿತರಾಗಿರುವುದರಿಂದ ಆರೋಪವನ್ನು ಮಾಡಲಾಗಿದೆ.

ಹ. ಉಮ್ಮು ಸಲ್ಮಾ(ರ)ರೊಂದಿಗೆ ವಿವಾಹ: ಹ. ಉಮ್ಮು ಸಲ್ಮಾ(ರ) ಹ. ಅಬೂ ಸಲ್ಮಾ(ರ)ರೊಂದಿಗೆ ವಿವಾಹವಾಗಿದ್ದರು. ಕುರೈಶರ ಕಿರುಕುಳದ ಕಾರಣ ಮದೀನಾಕ್ಕೆ ಹಿಜ್ರತ್ ಮಾಡುವ ಉದ್ದೇಶದೊಂದಿಗೆ ಅವರು ಮಕ್ಕಾದಿಂದ ಹೊರಟ್ಟಿದ್ದರು. ದಾರಿಯಲ್ಲಿ ಹ. ಉಮ್ಮು ಸಲ್ಮಾ(ರ)ರ ಗೋತ್ರದವರು ಅವರನ್ನು ತಡೆದು, " ನೀವು ಬೇಕಾದರೆ ಹೋಗಿ ಆದರೆ ಉಮ್ಮು ಸಲ್ಮಾ ನಮ್ಮ ಗೋತ್ರದವರು. ನಾವು ಅವರನ್ನು ನಿಮ್ಮೊಂದಿಗೆ ಹೋಗಲು ಬಿಡುವುದಿಲ್ಲ." ಹ. ಅಬೂ ಸಲ್ಮಾ(ರ) ಪತ್ನಿ ಮತ್ತು ಪುಟ್ಟ ಕೂಸನ್ನು ಬಿಟ್ಟು ಒಬ್ಬರೇ ತೆರಳಬೇಕಾಯಿತು.

ಹ. ಅಬೂ ಸಲ್ಮಾ(ರ)ರ ಗೋತ್ರದವರಿಗೆ ಈ ವಿಷಯ ತಿಳಿದಾಗ ಕೋಪೋದ್ರಿಕ್ತರಾದರು. ಅವರು ಮಗುವಿನ ಮೇಲೆ ಹಕ್ಕು ತಂದೆಯದಾಗಿರುವುದರಿಂದ ಮಗುವನ್ನು ತಮಗೆ ನೀಡ ಬೇಕೆಂದು ಹೇಳಿ, ತಾಯಿಯಿಂದ ಮಗುವನ್ನು ಕಸಿದು ಕೊಂಡರು.

ಪತಿ ಮತ್ತು ಮಗುವಿನಿಂದ ವಂಚಿತರಾಗಿ ಹ. ಉಮ್ಮು ಸಲ್ಮಾ(ರ) ಒಬ್ಬಂಟಿಯಾದರು. ಅವರು ಪ್ರತಿದಿನ ತಮ್ಮ ಪತಿ ತಮ್ಮಿಂದ ಬೇರ್ಪಟ್ಟ ಸ್ಥಳಕ್ಕೆ ಒಂದು ದಿನವಿಡೀ ಅಳುತ್ತಾ ಕುಳಿತಿರುತ್ತಿದ್ದರು. ಹೀಗೆ ಒಂದು ವರ್ಷ ಕಳೆಯಿತು. ಕೊನೆಗೆ ಜನರಿಗೆ ಕನಿಕರ ಬಂದು, ಮಗುವನ್ನು ಹ. ಉಮ್ಮು ಸಲ್ಮಾ(ರ)ರಿಗೆ ಹಿಂತಿರುಗಿಸಿ, ಅವರನ್ನು ಮದೀನಾ ತೆರಳಲು ಅವಕಾಶ ಮಾಡಿದರು.

ಹ. ಉಮ್ಮು ಸಲ್ಮಾ(ರ) ಮಕ್ಕಾದಿಂದ ಮದೀನಾ 400 ಕಿ.ಮೀ. ದೂರವನ್ನು ನಡೆದು ಕೊಂಡೇ ಕ್ರಮಿಸಿ ಮದೀನಾ ತಲುಪಿದರು. ಅವರು ಮದೀನಾ ಸೇರಿದ ಒಂದು ವರ್ಷದಲ್ಲಿ ಅವರ ಪತಿ ನಿಧನ ಹೊಂದಿದರು. ಹ. ಉಮ್ಮು ಸಲ್ಮಾ(ರ) ಒಬ್ಬಂಟಿಗರಾದರು. ಅವರನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ. ಈ ಕಾರಣದಿಂದ ಹ. ಮುಹಮ್ಮದ್(ಸ) ಅವರನ್ನು ವಿವಾಹವಾಗಿ, ಅವರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡರು.

ಹ. ಉಮ್ಮು ಹಬೀಬ(ರ)ರೊಂದಿಗೆ ವಿವಾಹ: ಹ. ಉಮ್ಮು ಹಬೀಬ(ರ) ಅಬೂ ಸುಫ್‌ಯಾನ್‌ರ ಪುತ್ರಿಯಾಗಿದ್ದರು. ಅಬೂ ಸುಫ್‌ಯಾನ್ ಕುರೈಶರ ನಾಯಕರಾಗಿದ್ದರು. ಇಸ್ಲಾಮಿನ ಕಡು ವೈರಿಯಾಗಿದ್ದರು. ಮುಸ್ಲಿಮರ ವಿರುದ್ಧ ಹೂಡಲಾಗಿದ್ದ ಎಲ್ಲಾ ಯುದ್ಧಗಳನ್ನು ಅವರೇ ಪ್ರೇರೇಪಿಸಿದ್ದರು.

ಹ. ಉಮ್ಮು ಹಬೀಬ(ರ)ರ ಇಸ್ಲಾಮ್ ಸ್ವೀಕಾರ ಅವರನ್ನು ದಿಙ್ಮೂಢರನ್ನಾಗಿಸಿತ್ತು. ಅವರ ವಿರೋಧದ ತಿವ್ರತೆಯ ಕಾರಣ, ಹ. ಉಮ್ಮು ಹಬೀಬ(ರ) ಇಥಿಯೋಪಿಯಾಕ್ಕೆ ತಮ್ಮ ಪತಿ ಉಬೈದುಲ್ಲಾ ಇಬ್ನ್ ಜಹಶ್‌ರೊಂದಿಗೆ ವಲಸೆ ಹೋಗಬೇಕಾಯಿತು. ಕೆಲ ವರ್ಷಗಳ ನಂತರ ಉಬೈದುಲ್ಲಾ ಇಬ್ನ್ ಜಹಶ್‌ರ ನಿಧನವಾಯಿತು. ಅಬೂ ಸುಫ್‌ಯಾನ್‌ರ ಭಯದಿಂದ ಅವರಿಗೆ ಮಕ್ಕಾಕ್ಕೆ ಹಿಂತಿರುಗುವಂತಿರಲಿಲ್ಲ. ಇಥಿಯೋಪಿಯಾದಲ್ಲಿ ಅವರ ಸಹಾಯಕ್ಕೆ ಯಾರೂ ಇರಲಿಲ್ಲ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಹ. ಮುಹಮ್ಮದ್(ಸ) ಹ. ಉಮ್ಮು ಹಬೀಬ(ರ)ರನ್ನು ವಿವಾಹವಾದರು.

ಮೇಲೆ ವಿವರಿಸುವಂತೆ ಹ. ಮುಹಮ್ಮದ್(ಸ)ರ ಬಹು ವಿವಾಹಗಳಿಗೆ ಒಂದಲ್ಲ ಒಂದು ಘನ ಕಾರಣವಿತ್ತು. ವಿಷಯಾಶಕ್ತಿಯ ಕಾರಣದಿಂದಲ್ಲ.

## ಬಹು ವಿಹಾಹ ಸುಖ ಸಂತೋಷಕ್ಕೆ ಮಾರ್ಗವೇ?

ಜೈಪುರದ ರಾಜ ಮಾನ್ ಸಿಂಗ್ 12 ಪತ್ನಿಯರನ್ನು ಹೊಂದಿದ್ದರು. ಅವರ ರಾಜ್ಯದ ಸುತ್ತ ಸಣ್ಣ ಪುಟ್ಟ ಅಧಿಪತ್ಯಗಳಿದ್ದವು. ಅವುಗಳೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಉದ್ದೇಶದಿಂದ ಮಾನ್ ಸಿಂಗ್ ವಿವಿಧ ರಾಜ್ಯಗಳಿಗೆ ಸೇರಿದ 12 ಸ್ತ್ರೀಯರನ್ನು ವಿವಾಹವಾಗಿದ್ದರು.

ಆದರೆ 12 ಪತ್ನಿಯರನ್ನು ನಿಭಾಯಿಸುವುದು ರಾಜ್ಯವನ್ನು ನಡೆಸುವುದಕ್ಕಿಂತ ಕಷ್ಟಕರವಾಗಿತ್ತು. ಪತ್ನಿಂಯುರನ್ನು ನಿಯಂತ್ರಣದಲ್ಲಿಡಲು ಅವರು ನುಡಿಯುತ್ತದ್ದ ಪ್ರತಿಂಯೊಂದು ವಯಾತುಗಳನ್ನು ಬರೆದಿಡಲಾಗುತ್ತಿತ್ತು. ಯಾರಾದರು ತಪ್ಪು ಎಸಗುತ್ತಿದ್ದರೆ, ಅವರಿಗೆ ಬೀಸುವ ಕಲ್ಲನ್ನು ಬೀಸುವ ಶಿಕ್ಷೆಯನ್ನು ನೀಡಲಾಗುತ್ತಿತ್ತು.

ಹೀಗೆ ಬಹು ಪತ್ನಿಯರನ್ನು ನಿಭಾಯಿಸುವುದು ಕಷ್ಟಕರ ಕಾರ್ಯವಾಗಿದೆ. ಪ್ರವಾದಿಗಳು ಬಹು ವಿವಾಹಗಳನ್ನು ಆಗುತ್ತಿದ್ದುದು ನಿರ್ದಿಷ್ಟ ಉದ್ದೇಶಕ್ಕಾಗಿಯೇ ವಿನಹಃ ಸುಖ ಆನಂದಕ್ಕಾಗಿಯಲ್ಲ.

************

# "ಅಗ್ನಿ"ಯ ರಹಸ್ಯ

ಪವಿತ್ರ ವೇದಗಳಲ್ಲಿ 'ಅಗ್ನಿ'ಯ ಬಗ್ಗೆ ಈ ರೀತಿ ಹೇಳಲಾಗಿದೆ.

'ಸಕಲ ಸ್ತುತಿ, ಸ್ತೋತ್ರಗಳು ಅಗ್ನಿಗೆ ಮೀಸಲು' (ಋಗ್ವೇದ 1:1:3)

'ಓ ಅಗ್ನಿಯೇ, ಕೇವಲ ನೀನು ಜನರ ಆಶೋತ್ತರಗಳನ್ನು ಈಡೇರಿಸುವವನಾಗಿರುವೇ. ಆರಾಧನೆಗೆ ಕೇವಲ ನೀನೋರ್ವನೇ ಅರ್ಹನಾಗಿರುವೆ. ನೀನೋರ್ವನೇ ಬ್ರಹ್ಮ, ವಿಷ್ಣು ಮತ್ತು ಭೃಹಸ್ಪತಿಯಾಗಿರುವೆ. (ಋಗ್ವೇದ 2:1:3)

"ಸ್ನೇಹಿತರೇ, ವರುಣ, ಅಗ್ನಿ, ಗುರು, ಯಾಮ್ ಮತ್ತು ವಾಯು ಒಂದೇ ಶಕ್ತಿಯ ಹೆಸರುಗಳಾಗಿರುವವು. ಜ್ಞಾನಿಗಳು ಮತ್ತು ವಿದ್ವಾಂಸರು ಏಕೈಕನಾದ ಸೃಷ್ಟಿಕರ್ತನನ್ನೂ ಆತನ ಗುಣಗಳಿಗೆ ಅನುಗುಣವಾಗಿ ವಿವಿಧ ನಾಮಗಳಿಂದ ಕರೆಯುತ್ತಾರೆ." (ಋಗ್ವೇದ 10:14:5)

ಮೇಲಿನ ಶ್ಲೋಕಗಳಿಂದ 'ಅಗ್ನಿ'ಯು ಏಕೈಕನಾಗಿರುವ ಸೃಷ್ಟಿಕರ್ತನ ಗುಣಕ್ಕೆ ಅನುಗುಣವಾಗಿ ಒಂದು ಹೆಸರು ಎಂಬುದು ಸ್ಪಷ್ಟವಾಗುತ್ತದೆ.

'ನಾವು ಅಗ್ನಿಯನ್ನು ಸಂದೇಶವಾಹಕನಾಗಿ ಆಯ್ಕೆ ಮಾಡಿರುವೆವು'. (ಋಗ್ವೇದ 1:12:1)

'ಓ ಅಗ್ನಿ, ಮನು ನಿನ್ನನ್ನೂ ಸಂದೇಶವಾಹಕನ ರೂಪದಲ್ಲಿ ಸ್ವೀಕರಿಸಿರುವನು.' (ಋಗ್ವೇದ 1:13:4)

ಯಾರು ಸೃಷ್ಟಿಕರ್ತನನ್ನು ಆರಾಧಿಸುತ್ತಾರೋ, ಅಗ್ನಿ ಅವರ ಬಗ್ಗೆ ಸಂಪ್ರೀತನಾಗುತ್ತಾನೆ' (ಋಗ್ವೇದ 1:31:15)

'ಕೇವಲ ತಿಳುವಳಿಕೆಯುಳ್ಳವರು ಮಾತ್ರ ಅಗ್ನಿಯನ್ನು ಗುರುತಿಸುವರು.' (ಋಗ್ವೇದ 10:17:3)

'ಜ್ಞಾನದ ಮಂಥನದಿಂದ ಮಾತ್ರ ಅಗ್ನಿಯನ್ನು ಗುರುತಿಸುವರು. ತಮ್ಮ ಮುಕ್ತಿಯು ಇದರ ಮೇಲೆ ಅವಲಂಬಿತವಾಗಿದೆ. 'ಅಗ್ನಿ'ಯಲ್ಲಿ ವಿಶ್ವಾಸವಿಡುವ ಮೂಲಕ ಮಾತ್ರ ನೀವು ಜಗತ್ತಿನ ನಾಯಕವಾಗಿರುವರಿ. (ಋಗ್ವೇದ 1:31:15)

'ಅಗ್ನಿಯು ರಹಸ್ಯವನ್ನು ಮಾರುತಗನ್(ಮರಳುಗಾಡಿನ ಜನರು) ಭೇದಿಸುವರು.' (ಋಗ್ವೇದ 3:3:5)

'ಕೊನೆಯ ಪಂಜನ್ನು(ಪವಿತ್ರ ಕುರ್‌ಆನ್) ಮೊದಲನೆಯ ಪಂಜಿನ ಮೇಲೆ (ಪವಿತ್ರ ವೇದಗಳು) ಇಟ್ಟಿದಾಗ ಮಾತ್ರ ಅಗ್ನಿಯ ರಹಸ್ಯ ಹೊರಗೆಡವುದು.' (ಋಗ್ವೇದ 3:29:3)

ಪವಿತ್ರ ಕುರ್‌ಆನಿನ ಸೂಕ್ತಗಳು

"ಸಕಲ ಸ್ತುತಿ ಸ್ತೋತ್ರಗಳು ಅಲ್ಲಾಹನಿಗೆ ಮೀಸಲು"

ಈಸಾ ಹೇಳಿದ ಮಾತನ್ನು ಸ್ಮರಿಸಿರಿ, 'ಬನೀ ಇಸ್ರಾಈಲರೇ, ನಾನು ನಿಮ್ಮ ಕಡೆಗೆ ಅಲ್ಲಾಹನಿಂದ ಕಳುಹಿಸಲ್ಪಟ್ಟ ಸಂದೇಶವಾಹಕನಾಗಿರುತ್ತೇನೆ. ನಾನು, ನನಗಿಂತ ಮೊದಲು ಬಂದಿರುವ ತೌರಾತನ್ನು ದೃಢೀಕರಿಸುವವನು ಮತ್ತೂ ನನ್ನ ಬಳಿಕ ಬರಲಿರುವ ಅಹ್ಮದ್ ಎಂಬ ಹೆಸರಿನ ರಸೂಲರ ಕುರಿತು ಸುವಾರ್ತೆ ನೀಡುವವನಾಗಿದ್ದೇನೆ. (ಪವಿತ್ರ ಕುರ್‌ಆನ್ 61:6)

"(ಜನರೇ), ಮುಹಮ್ಮದ್(ಸ) ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ" (ಪವಿತ್ರ ಕುರ್ಆನ್ 33:40)

"ನಿಮ್ಮ ಪ್ರಭು ನಿಮ್ಮನ್ನು ಪ್ರಶಂಸಿತ ಸ್ಥಾನಕ್ಕೆ ತಲುಪಿಸಲೂ ಬಹುದು" (ಪವಿತ್ರ ಕುರ್ಆನ್ 17:79)

"ಪ್ರತಿಯೊಂದು ಜೀವಿಯನ್ನು ನೀರಿನಿಂದ ಸೃಷ್ಟಿಸಿದ್ದನ್ನು ಕಾಣಲಿಲ್ಲವೇ? (ಪವಿತ್ರ ಕುರ್ಆನ್ 21:30)

ಪ್ರವಾದಿ(ಸ) ನುಡಿದರು: ಇಂದು ಹ. ಮೂಸ(ಅ) ಜೀವಂತವಿರುತ್ತಿದ್ದರೆ, ನನ್ನನ್ನೂ ಪ್ರವಾದಿಯಾಗಿ ಒಪ್ಪಿಕೊಳ್ಳುವವರೆಗೆ ಅವರಿಗೂ ಮುಕ್ತಿ ದೊರೆಯುತ್ತಿರಲಿಲ್ಲ. (ತಿರ್ಮಿದಿ 141–3, ಅಹ್ಮದ್ 338–4)

ಸೃಷ್ಟಿಕರ್ತನು ತನ್ನ ಪ್ರವಾದಿಗಳನ್ನು, ತನ್ನ ಗುಣಗಳಿಗೆ ಹೋಲುವ ಹೆಸರಿನಿಂದ ಕರೆದಿರುವನೆಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ಗಮನಿಸಿರುವಿರಿ. ಇದೇ ರೀತಿಯಲ್ಲಿ 'ಅಗ್ನಿ' ಎಂಬುದೂ ಸೃಷ್ಟಿಕರ್ತನ ಗುಣವಾಗಿದ್ದು ಈ ಪ್ರವಾದಿಯೋರ್ವರನ್ನು ಋಗ್ವೇದದಲ್ಲಿ ಕರೆದಿರುವನು. ಈ ಪ್ರವಾದಿ ಯಾರಾಗಿದ್ದರು? ಎಂಬುದನ್ನು ತಿಳಿಯಲು ಈ ಕೆಳಗೆ ನೀಡಿರುವ ಶ್ಲೋಕಗಳನ್ನು ಪರಿಶೀಲಿಸೋಣ.

"ಓ ಅಗ್ನಿ! ನಿನ್ನ ಮೂರು ರೂಪಗಳನ್ನು ನಾವು ಬಲ್ಲೆವು. ನಿನ್ನ ಎಲ್ಲಾ ತಂಗು ದಾಣಗಳನ್ನು ನಾವು ಬಲ್ಲೆವು. ನಿನ್ನ ರಹಸ್ಯ ನಾಮಗಳನ್ನು. ನಿನ್ನ ಜನ್ಮ ಸ್ಥಳವನ್ನು ತಿಳಿದಿರುವೆವು. ನೀನು ಎಲ್ಲಿಂದ ಬಂದಿರುವಿ ಎಂಬುದನ್ನೂ ನಾವು ಅರಿತಿರುವೆವು".

(ಋಗ್ವೇದ 10:45:2)

"ಅಗ್ನಿಯು ಮಿಂಚಿನ ರೂಪದಲ್ಲಿ ಸ್ವರ್ಗದಲ್ಲಿ ಪ್ರಥಮ ಬಾರಿ ಕಾಣಿಸಿಕೊಂಡನು. ಎರಡನೇಯ ಬಾರಿ ಮನುಷ್ಯನ ರೂಪದಲ್ಲಿ ಆತನು ಕಾಣಿಸಿಕೊಂಡನು. ಆಗ ಆತನನ್ನು ಜತ್ವೇದ(ಹುಟ್ಟಿದಾಗಿನಿಂದ ಜ್ಞಾನವನ್ನು ಪಡೆದಿರುವನು) ಎಂದು ಕರೆಯಲಾಯಿತು. ಮೂರನೆಯ ಸಲ ಅಗ್ನಿಯು ನೀರಿನಲ್ಲಿ ಕಾಣಿಸಿಕೊಂಡಿನು. ಮಾನವ ಕುಲದ ಸುಧಾರಣೆಗಾಗಿ ಪರಿಶ್ರಮ ಪಡುವವರು ನಿಸ್ಸಂಶಯವಾಗಿ ಸಫಲರಾಗುವರು. (ಋಗ್ವೇದ 10:45:1)

"ಅಗ್ನಿಯ ರೂಪವನ್ನು ಊಹಾತೀತವಾಗಿರುವುದು. ಇದು ದೇಹವಿಲ್ಲದ ಆತ್ಮವಾಗಿರುವುದು. ಅಗ್ನಿಯು ದೇಹವನ್ನು ಧರಿಸುವಾಗ ಆತನನ್ನು 'ಅಸುರ'ನೆಂದು, 'ನರಶನ್ಸ'ನೆಂದು ಕರೆಯುತ್ತಾರೆ. ಆತನು ವಿಶ್ವವನ್ನು ಬೆಳಕಿಸಿದಾಗ ಆತನನ್ನು 'ಮತರೇಶ್ವರ' ಎಂದು ಕರೆಯಲಾಗುತ್ತದೆ. ಆಗ ಆತನ ಗಾಳಿಯಂತೆ ಎಲ್ಲ ಜನರಿಗೂ ಪ್ರಯೋಜನಕಾರಿಯಾಗುವನು. (ಋಗ್ವೇದ 2:29:11)

ಮೇಲಿನ ಶ್ಲೋಕಗಳನ್ನು ಪರಿಶೀಲಿಸಿದಲ್ಲಿ, 'ಮಹಾಪುರುಷ' ನಾಲ್ಕು ಹಂತಗಳನ್ನು ಅನುಭವಿಸಬಹುದು

1) ಮೊದಲನೆ ಹಂತದಲ್ಲಿ ಆತನು ಮಿಂಚಿನಂತೆ ಜನ್ಮತಾಳುವನು. ಆಗ ಆತನ ಹೆಸರು 'ಅಗ್ನಿ' ಎಂದಾಗುವುದು.

2) ಆತನ ಎರಡನೆಯ ಜನ್ಮವು ಆತ್ಮದ ರೂಪದಲ್ಲಿ ಆಗಿರುವುದು. ಆಗ ಆತನ ಹೆಸರು

'ಜತ್ವೇದ' ಎಂದಾಗಿರುವುದು.

ಮನುಷ್ಯನೂ ವಾಸ್ತವಿಕವಾಗಿ ಆತ್ಮವೇ ಆಗಿರುವನು. ಭೂಮಿಯ ಮೇಲೆ ಆತನು ದೇಹವನ್ನು ಧರಿಸುವನು. ಮರಣ ಹೊಂದಿದ ನಂತರ ಆತನ ಆತ್ಮವು ಪುನಃ ಆಕಾಶಕ್ಕೆ ಮರಳುವುದು. ಈ ಕಾರಣದಿಂದಲೇ, ಯಾರಾದರೂ ನಿಧನ ಹೊಂದಿದರೆ, ನಿರ್ದಿಷ್ಟ ವ್ಯಕ್ತಿಯು ಅಲ್ಲಿ ಮಲಗಿರುವನು ಎಂದು ಯಾರೂ ಹೇಳುವುದಿಲ್ಲ. ಇದಕ್ಕೆ ಬದಲಾಗಿ ನಿರ್ದಿಷ್ಟ ವ್ಯಕ್ತಯ ಶವ ಅಲ್ಲಿದೆ ಎಂದು ಹೇಳುವರು. ಆದುದರಿಂದ ಮನುಷ್ಯ ರೂಪದಲ್ಲಿ ಜನ್ಮ ತಾಳುವುದೆಂದರೆ, ಮಿಂಚಿನ ರೂಪದಿಂದ ಆತ್ಮದ ರೂಪತಾಳುವುದಾಗಿದೆ.

3) ಮಹಾ ಪುರುಷನ ಮೂರನೆಯ ಜನ್ಮವು ನೀರಿನಲ್ಲಿ ಆಗುವುದು. ಆಗ ಆತನ ಹೆಸರು ಅಸುರ ಮತ್ತು ನರಶನ್ಸನಾಗಿರುವುದು.

ನೀರಿನಲ್ಲಿ ಜನ್ಮ ತಾಳುವುದು ಎಂದರೆ ದೇಹದ ರೂಪವನ್ನು ತಡೆಯುದು. ಏಕೆಂದರೆ ಸೃಷ್ಟಿಕರ್ತನು ಸಕಲ ಜೀವಿಗಳನ್ನು ನೀರಿನಿಂದ ಸೃಷ್ಟಿಸಿರುವನು. (ಪವಿತ್ರ ಕುರ್‌ಆನ್ 21:30). ಮನುಷ್ಯನ ದೇಹದಲ್ಲಿ 65% ನೀರು ಇರುವುದು.

4) ಮಹಾಪುರುಷನು ನಾಲ್ಕನೇಯ ಹಂತದಲ್ಲಿ ಸ್ವರ್ಗದಲ್ಲಿ ಕಾಣುವನು. ಆಗ ಆತನ ಹೆಸರು ಮಂತರೇಶ್ವರ ಎಂದಾಗಿರುವುದು. ಆತನು ಎಲ್ಲಾ ಜನರಿಗೂ ಉಪಕಾರಿಯಾಗಿರುವನು.

ಈಗ ಪುನಃ ಇಸ್ಲಾಮಿ ಗ್ರಂಥಗಳನ್ನು ಅವಲೋಕಿಸೋಣ.

ಹ. ಅಬೂ ಹುರೈರಃ(ರ) ವರದಿ ಮಾಡಿರುವರು. ನಾವು ಒಮ್ಮೆ ಪ್ರವಾದಿ(ಸ)ರನ್ನು 'ಓ ಅಲ್ಲಾಹನ ಸಂದೇಶವಾಹಕರೇ, ನೀವು ಪ್ರವಾದಿಯಾಗಿ ಎಂದು ನಿಯುಕ್ತಿಗೊಂಡಿರುವಿರಿ? ಎಂದು ಕೇಳಿದೆವು. ಹ. ಮುಹಮ್ಮದ್(ಸ) ಉತ್ತರಿಸಿದರು 'ಹ. ಆದಮ್(ಅ) ಆತ್ಮ ಮತ್ತು ದೇಹದ ನಡುವೆ ಇದ್ದಾಗ ನಾನು ಪ್ರವಾದಿಯಾಗಿದ್ದೆ. (ತಿರ್ಮಿದಿ, ಮಿಷ್ಕಾತ್). ಅಂದರೆ ಪ್ರಥಮ ಮಾನವ ಆದಮ್(ಅ) ರೂಪುಗೊಳ್ಳುತ್ತಿರುವಾಗಲೇ ಪ್ರವಾದಿ(ಸ) ರೂಪುಗೊಳ್ಳುತ್ತಿರುವಾಗಲೇ ಪ್ರವಾದಿ(ಸ) ಅಸ್ತಿತ್ವದಲ್ಲಿದ್ದರು.

ಪ್ರವಾದಿ(ಸ) ನುಡಿದರು: ಅಲ್ಲಾಹನು ಮೊಟ್ಟ ಮೊದಲಿಗೆ ನನ್ನ ಪ್ರಕಾಶವನ್ನು ಸೃಷ್ಟಿಸಿದನು. (ದುರ್ಬಲ ಹದೀಸ್)

ಕುರ್‌ಆನಿನಲ್ಲಿ ಅಲ್ಲಾಹ್ ಹೇಳಿರುವನು:

'ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಕಳುಹಿಸಿರುತ್ತೇವೆ' (ಪವಿತ್ರ ಕುರ್‌ಆನ್ 21:107)

ಅಂದರೆ ಹ. ಮುಹಮ್ಮದ್(ಸ) ಸಂಪೂರ್ಣ ಜಗತ್ತಿಗೆ ಅನುಗ್ರಹವಾಗಿ ಕಳುಹಿಸಲ್ಪಟ್ಟಿದ್ದಾರೆ. ಈ ರೀತಿ ಅವರು ಇಡೀ ಮಾನವ ಕುಲಕ್ಕೆ ಉಪಕಾರಿಯಾಗಿರುವರು.

ಪ್ರವಾದಿ(ಸ) ನುಡಿದಿರುವರು: 'ವಿಚಾರಣೆಯ ದಿನದಂದು, ಶಿಕ್ಷೆಯ ಕಾರಣ ಜನ ಭಯಭೀತರಾಗುವರು. ಅಂದು ಯಾರಿಗೂ ಅಲ್ಲಾಹನ ಎದುರು ಮಾತನಾಡುವ ಧೈರ್ಯ ಇರುವುದಿಲ್ಲ. ಆಗ ಎಲ್ಲಾ ಜನರೂ ನನ್ನ ಕಡೆಗೆ ರಕ್ಷಣೆಗಾಗಿ ಧಾವಿಸುವರು. ಆಗ ನಾನು ಅಲ್ಲಾಹನ ಮುಂದು ಸಾಷ್ಟಂಗವೆರಗುವೆನು. ಅಲ್ಲಾಹನು ತಲೆ ಎತ್ತಲು ಹೇಳುವವರೆಗೆ ನಾನು ತಲೆಯನ್ನು ಎತ್ತುವುದಿಲ್ಲ. ಅಲ್ಲಾಹ್ ನನಗೆ ತಲೆ ಎತ್ತಲು ಹೇಳಿದಾಗ, ನಾನು

ಅಲ್ಲಾಹನಲ್ಲಿ ಜನರನ್ನೂ ಕ್ಷಮಿಸುವಂತೆ ಬೇಡಿಕೊಳ್ಳುವೆನು. ಅಲ್ಲಾಹ್ ಉತ್ತರಿಸುವನು: 'ನನ್ನ ಆರಾಧನೆಯಲ್ಲಿ ಇತರರನ್ನು ಶಾಮೀಲುಗೊಳಿಸಿರುವವರನ್ನು ನಾನು ಕ್ಷಮಿಸುವೆನು'. (ಬುಖಾರಿ, ಮುಸ್ಲಿಮ್, ಮಶ್‌ರುಫ್ಲಲ್ ಹದೀಸ್ ಭಾಗ–1 ಪುಟ 245)

* ವೇದಗಳು ಮತ್ತು ಹ. ಮುಹಮ್ಮದ್(ಸ).

* ಅಗ್ನಿಯನ್ನು ಮೊದಲು ಮಿಂಚಿನ ರೂಪದಲ್ಲಿ ಸೃಷ್ಟಿಸಲಾಗಿತ್ತು. ಹ. ಮುಹಮ್ಮದ್(ಸ)ರನ್ನು ಪ್ರಥಮ ಬಾರಿ ಪ್ರಕಾಶ ರೂಪದಲ್ಲಿ ಸೃಷ್ಟಿಸಲಾಗಿತ್ತು.

* ಅಗ್ನಿಯನ್ನು ಎರಡನೆಯ ಹಂತದಲ್ಲಿ ಮಾನವ ರೂಪದಲ್ಲಿ ಸೃಷ್ಟಿಸಲಾಗಿತ್ತು. ಆಗ ಅವರ ಹೆಸರು ಜತ್ವೇದ್ ಆಗಿತ್ತು. ಎರಡನೆಯ ಹಂತದಲ್ಲಿ ಹ. ಆದಮ್(ಅ)ರನ್ನು ಸೃಷ್ಟಿಸುವ ಮೊದಲೇ ಹ. ಮುಹಮ್ಮದ್(ಸ)ರನ್ನು ಸೃಷ್ಟಿಸಲಾಗಿತ್ತು. ಆಗ ಅವರ ಹೆಸರು ಅಹ್ಮದ್ ಆಗಿತ್ತು.

*ಮೂರನೆಯ ಹಂತದಲ್ಲಿ ಅಗ್ನಿಯ ಜನ್ಮ ನೀರಿನಲ್ಲಿ ಆಗಿತ್ತು. ಆಗ ಅವರ ಹೆಸರು ಅಸುರ ಅಥವಾ ನರಶನ್ಸ ಆಗಿತ್ತು. ಅಲ್ಲಾಹ್ ಸಕಲ ಜೀವಿಗಳನ್ನು ನೀರಿನಿಂದ ಸೃಷ್ಟಿಸಿದನು. ಇದರಂತೆ ಹ. ಮುಹಮ್ಮದ್(ಸ)ರವರು ಸಹ ಸೃಷ್ಟಿಸಲ್ಪಟ್ಟರು. ಅವರನ್ನು ಮುಹಮ್ಮದ್(ಸ) ಎಂದು ಹೆಸರಿಸಲಾಯಿತು.

* ನಾಲ್ಕನೇಯ ಹಂತದಲ್ಲಿ ಅಗ್ನಿಯ ಹೆಸರು ಮತರೇಶ್ವ ಎಂದಾಗಿರುವುದು. ಎಲ್ಲಾ ಜನರು ಮುಕ್ತಿ ಪಡೆಯಲು ಅವರು ಸಹಾಯ ಮಾಡುವರು. ಹ. ಮುಹಮ್ಮದ್(ಸ) ವಿಚಾರಣೆಯ ದಿನದಂದು ಜನರನ್ನು ಕ್ಷಮಿಸುವಂತೆ ಅಲ್ಲಾಹನನ್ನು ಬೇಡಿಕೊಳ್ಳುವರು.

ಈ ಎರಡರಲ್ಲಿ ಹೋಲಿಕೆ ಇದೆಯೇ?

ಡಾ॥ ವೇದ ಪ್ರಕಾಶ ಸಂಸ್ಕೃತ ವಿಶ್ವ ವಿದ್ಯಾಲಯ ಪ್ರಯೋಗದಲ್ಲಿ ಪ್ರೊಫೆಸರ್ ಆಗಿರುವರು. ಅವರು ವೇದಗಳ ಅಧ್ಯಯನ ಮಾಡಿರುವರು. ಡಾ॥ ವೇದ ಪ್ರಕಾಶರವರು ವೇದಗಳಲ್ಲಿ ಉಲ್ಲೇಖಿಸಲಾಗಿರುವ ನರಶನ್ಸ, ಕಲ್ಕಿ ಅವತಾರ ಮತ್ತು ಮಹಾಮೇಶ ಋಷಿ, ಹ. ಮುಹಮ್ಮದ್(ಸ)ರೇ ಆಗಿರುವರು ಎಂದು ನುಡಿದಿರುವರು. ಹೆಚ್ಚಿನ ವಿವರಣೆಗಳಿಗೆ ಅವರ ಪುಸ್ತಕ 'ನರಶನ್ಸ ಔರ್ ಅಂತಿಮ್ ಋಷಿ' ಮತ್ತು ನನ್ನ ಪುಸ್ತಕ 'ಪವಿತ್ರ ವೇದ್ ಔರ್ ಇಸ್ಲಾಮ್ ಧರ್ಮ'ವನ್ನು ಓದಬಹುದು.

ವೇದಗಳಲ್ಲಿ 'ಅಗ್ನಿ'ಎಂದು ಉಲ್ಲೇಖಿಸಲ್ಪಟ್ಟರುವವರು ಹ. ಮುಹಮ್ಮದ್(ಸ)ರವರೇ ಆಗಿರುವರು. ವಾಸ್ತವಿಕವಾಗಿ ಅಗ್ನಿಯು ಸೃಷ್ಟಿಕರ್ತನ ಹೆಸರಾಗಿರುವುದು. (ಆತನ ಗುಣಗಳಿಗೆ ಅನುಗುಣವಾಗಿ). ಆದರೆ ಪ್ರವಾದಿ ಮುಹಮ್ಮದ್(ಸ)ರನ್ನೂ ಹಾಗೂ ಹ. ಇಬ್ರಾಹೀಮ್(ಅ)ರನ್ನು ಬ್ರಹ್ಮ ಎಂದು ಕರೆದಿರುವಂತೆ.

* ಋಗ್ವೇದದಲ್ಲಿ ತಿಳಿದಿರುವಂತೆ ಕೊನೆಯ ಪಂಜನ್ನು(ಕುರ್‌ಆನ್) ಮೊದಲನೆಯ ಪಂಜಿನೊಂದಿಗೆ(ವೇದಗಳು) ಓದಿದಾಗ ಈ ರಹಸ್ಯವು ಬಯಲಾಗಿದೆ.

* ಅಗ್ನಿಯನ್ನು ಗುರುತಿಸಿ ಆತನಲ್ಲಿ ವಿಶ್ವಾಸವಿಡುವ ಮೂಲಕ ಮಾತ್ರ ನಾವು ಮುಕ್ತಿಯನ್ನು ಹೊಂದಬಹುದು ಮತ್ತು ಜಗತ್ತಿನ ನಾಯಕರಾಗಬಹುದೆಂದು ಋಗ್ವೇದ ತಿಳಿಸುತ್ತದೆ. ಆದುದರಿಂದ ಬನ್ನಿ ಈ ವೇದಿಕೆಯಲ್ಲಿ ನಾವು ಪ್ರಥಮ ಹೆಜ್ಜೆಯನ್ನು ಇಡುವ. ಹ. ಮುಹಮ್ಮದ್(ಸ)ರನ್ನು ಕೊನೆಯ ಪ್ರವಾದಿಯಾಗಿರುವರೆಂದು ಅಂಗೀಕರಿಸೋಣ

ಮತ್ತು ಅವರ ಬೋಧನೆಗಳನ್ನು ಅನುಸರಿಸೋಣ. ನಾವು ಇಹಲೋಕದಲ್ಲೂ ಯಶಸ್ವಿಯಾಗುವೆವು ಮತ್ತು ಪರಲೋಕದಲ್ಲಿ ನಮಗೆ ಮುಕ್ತಿ ದೊರೆಯುವುದು.

ಹ. ಮುಹಮ್ಮದ್(ಸ)ರ ಬೋಧನೆಗಳನ್ನು ಅನುಸರಿಸುವ ವಿಧಾನ:

ಸೃಷ್ಟಿಕರ್ತನು ಏಕೈಕನಾಗಿರುವನೆಂದು ಧೃಡ ವಿಶ್ವಾಸ ಹೊಂದಬೇಕು. ಆತನ ಆರಾಧನೆಯಲ್ಲಿ ಇತರೆ ಯಾರನ್ನು ಶಾಮಿಲುಗೊಳಿಸಬಾರದು.

ಇದಾದ ನಂತರ, ಒಳಿತಿನ ಕಾರ್ಯಗಳನ್ನು ಮಾಡಬೇಕು ಮತ್ತು ಕೆಡುಕಿನ ಕಾರ್ಯಗಳನ್ನು ತ್ಯಜಿಸಬೇಕು. ಸಂಬಂಧಿಕರೊಂದಿಗೆ, ನೆರೆಹೊರೆಯುವರೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹಾರಿಸಬೇಕು. ಬಡವರಿಗೆ, ದಲಿತರಿಗೆ ಸಹಾಯ ಮಾಡಬೇಕು.

ಪವಿತ್ರ ಕುರ್ಆನ್ ಮತ್ತು ಇತರ ಇಸ್ಲಾಮಿ ಗ್ರಂಥಗಳು ಅಧ್ಯಯನ ಮಾಡಬೇಕು. ಇಸ್ಲಾಮಿ ಬೋಧನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

(ಅಗ್ನಿಯ ಬಗ್ಗೆ ಹಾಗೂ ವಿಶ್ವವು ಹೇಗೆ ಸೃಷ್ಟಿಸಲ್ಪಟ್ಟಿತು? ಎಂಬುದರ ಬಗ್ಗೆ ತಿಳಿಯಲು ನನ್ನ ಪುಸ್ತಕ 'ಘುಠ ಿ ೦ೞಟು? ಠಡಿಠಖಜಣ ಠಡಿ ಠಿಚಿಡಿಚಿಟಘುತಿಚಿಡಿ' ಅನ್ನು ಓದಿರಿ ಅಥವಾ ವೆಬೆಸೈಟ್ ತಿತಿತಿ. ಜಿಡಿಜಜ ಜಜಣಛಿಚಿಣುಠಟಿ. ಛಿಠಟ.ುಟಿ ನೋಡಿರಿ).

************

# ಹ. ಮುಹಮ್ಮದ್(ಸ)ರ ಜೀವನದ ಒಂದು ಪಕ್ಷಿ ನೋಟ

| | |
|---|---|
| ಹ. ಮುಹಮ್ಮದ್(ಸ)ರ ತಂದೆಯ ನಿಧನ | ಕ್ರಿ. ಶ. 569. ಪ್ರವಾದಿ(ಸ)ರ ಜನನದ 7 ತಿಂಗಳು ಮೊದಲು. |
| ಜನನ | 21/ 22 ಎಪ್ರಿಲ್ ಕ್ರಿ. ಶ. 570 |
| ಹಲೀಮಾ ಅವರ ಪೋಷಣೆಗಾಗಿ ಗ್ರಾಮಕ್ಕೆ ಒಯ್ದದ್ದು | ಕ್ರಿ. ಶ. 570, 6 ತಿಂಗಳ ಶಿಶುವಾಗಿದ್ದಾಗ. |
| ಅವರನ್ನೂ ಅವರ ತಾಯಿಗೆ ಮರಳಿಸಿದ್ದು | ಕ್ರಿ. ಶ. 575, 5 ವರ್ಷ ವಯಸ್ಸಿನಲ್ಲಿ. |
| ತಾಯಿ ಆಮಿನಾರ ನಿಧನ | ಕ್ರಿ. ಶ. 576, 6 ವರ್ಷ ವಯಸ್ಸಿನಲ್ಲಿ. |
| ಅಜ್ಜ ಅಬ್ದುಲ್ ಮುತ್ತಲಿಬ್‌ರ ನಿಧನ | ಕ್ರಿ. ಶ. 578, 8 ವರ್ಷ ವಯಸ್ಸಿನಲ್ಲಿ. |
| ಹ. ಖದೀಜಾ(ರ)ರೊಂದಿಗೆ ವಿವಾಹ | ಕ್ರಿ. ಶ. 595, 25 ವರ್ಷ ವಯಸ್ಸಿನಲ್ಲಿ. |
| ಹಿರಾ ಗುಹೆಯಲ್ಲಿ ಹ. ಮುಹಮ್ಮದ್(ಸ) ಧ್ಯಾನಾಸಕ್ತರಾಗಿದ್ದು | ಕ್ರಿ. ಶ. 607, 37 ವರ್ಷ ವಯಸ್ಸಿನಲ್ಲಿ. |
| ಪ್ರವಾದಿತ್ವದ ಆರಂಭ | ಕ್ರಿ. ಶ. 610, 40 ವರ್ಷ ವಯಸ್ಸಿನಲ್ಲಿ. |
| ಸಂಬಂಧಿಕರು ಮತ್ತು ಸ್ನೇಹಿತರಲ್ಲಿ ಧರ್ಮ ಪ್ರಚಾರ | ಕ್ರಿ. ಶ. 610/613, 41 ವರ್ಷ ವಯಸ್ಸಿನಲ್ಲಿ. |
| ಸಾರ್ವಜನಿಕ ಧರ್ಮ ಪ್ರಚಾರ | ಕ್ರಿ. ಶ. 614, 44 ವರ್ಷ ವಯಸ್ಸಿನಲ್ಲಿ. |
| ಇಥಿಯೋಪಿಯಾಕ್ಕೆ ಮುಸ್ಲಿಮರ ವಲಸೆ | ಕ್ರಿ. ಶ. 615, 45 ವರ್ಷ ವಯಸ್ಸಿನಲ್ಲಿ. |
| ಬನೂ ಹಾಶಿಮ್ ಗೋತ್ರದ ಬಹಿಷ್ಕಾರ | ಕ್ರಿ. ಶ. 616 ರಿಂದ61947 ವರ್ಷ ವಯಸ್ಸಿನಲ್ಲಿ. |
| ಹ. ಖದೀಜಾ(ರ) ಮತ್ತು ಚಿಕ್ಕಪ್ಪ ಅಬೂ ತ್ವಾಲಿಬ್‌ರ ನಿಧನ | ಕ್ರಿ. ಶ. 619, 50 ವರ್ಷ ವಯಸ್ಸಿನಲ್ಲಿ. |
| ಸಂದೇಶ ಪ್ರಚಾರಕ್ಕಾಗಿ ತಾಯಿಫ್ ಪ್ರಯಾಣ | ಕ್ರಿ. ಶ. 619, 50 ವರ್ಷ ವಯಸ್ಸಿನಲ್ಲಿ. |
| ಮಿಅ್‌ರಾಜ್ ಘಟನೆ 5 ಹೊತ್ತಿನ ನಮಾಝ್ ಕಡ್ಡಾಯಗೊಳ್ಳುವಿಕೆ | ಕ್ರಿ. ಶ. 620, 51 ವರ್ಷ ವಯಸ್ಸಿನಲ್ಲಿ. |
| ಹ. ಆಯಿಶಾ(ರ)ರೊಂದಿಗೆ ವಿವಾಹ | ಕ್ರಿ. ಶ. 621, 52 ವರ್ಷ ವಯಸ್ಸಿನಲ್ಲಿ. |
| ಮದೀನಾದ 75 ಜನರ ಇಸ್ಲಾಮ್ ಸ್ವೀಕಾರ | ಕ್ರಿ. ಶ. 622, 53 ವಯಸ್ಸಿನಲ್ಲಿ. |
| ಮದೀನಾ ಹಿಜ್ರತ್ | ಕ್ರಿ. ಶ. 622, 53 ವರ್ಷ ವಯಸ್ಸಿನಲ್ಲಿ. |
| ಮಸ್ಜಿದ್ ನಬವಿ ನಿರ್ಮಾಣದ ಆರಂಬ | ಕ್ರಿ. ಶ. 622, 53 ವರ್ಷ ವಯಸ್ಸಿನಲ್ಲಿ. |
| ಕಿಬ್ಲಾದ ಬದಲಾವಣೆ ಜರೂಸಲೇಮ್‌ನಿಂದ ಕಅಬಃದ ಕಡೆ | ಕ್ರಿ. ಶ. 624, 55 ವರ್ಷ ವಯಸ್ಸಿನಲ್ಲಿ. |
| ಪ್ರಥಮ ಯುದ್ಧ, ಬದ್ರ್ | ಕ್ರಿ. ಶ. 624, 55 ವರ್ಷ ವಯಸ್ಸಿನಲ್ಲಿ. |
| ಎರಡನೆಯ ಯುದ್ಧ, ಉಹುದ್ | ಕ್ರಿ. ಶ. 625, 56 ವರ್ಷ ವಯಸ್ಸಿನಲ್ಲಿ. |
| ಮೂರನೆ ಯುದ್ಧ | ಕ್ರಿ. ಶ. 627, 58 ವರ್ಷ ವಯಸ್ಸಿನಲ್ಲಿ. |
| ಹುದೈಬಿಯಾ ಒಪ್ಪಂದ | ಕ್ರಿ. ಶ. 628, 59 ವರ್ಷ ವಯಸ್ಸಿನಲ್ಲಿ. |

# ಹ. ಮುಹಮ್ಮದ್(ಸ)ರ ಜೀವನದ ಒಂದು ಪಕ್ಷಿ ನೋಟ

| | |
|---|---|
| ಯಹೂದಿಗಳೊಂದಿಗೆ ಖೈಬರ್‌ನಲ್ಲಿ ಯುದ್ಧ | ಕ್ರಿ. ಶ. 629, 60 ವರ್ಷ ವಯಸ್ಸಿನಲ್ಲಿ. |
| ಬೈಝಂಟೀನಿಯರೊಂದಿಗೆ ಮುತಃದಲ್ಲಿ ಯುದ್ಧ | ಕ್ರಿ. ಶ. 629, 60 ವರ್ಷ ವಯಸ್ಸಿನಲ್ಲಿ. |
| ಮಕ್ಕಃ ವಿಜಯ | ಕ್ರಿ. ಶ. 630, 61 ವರ್ಷ ವಯಸ್ಸಿನಲ್ಲಿ. |
| ಹುನೈನ್ ಯುದ್ಧ | ಕ್ರಿ. ಶ. 630, 61 ವರ್ಷ ವಯಸ್ಸಿನಲ್ಲಿ. |
| ತಬೂಕ್ ಪ್ರಯಾಣ | ಕ್ರಿ. ಶ. 631, 62 ವರ್ಷ ವಯಸ್ಸಿನಲ್ಲಿ. |
| ಹಜ್ಜ್, ವಿದಾಯ ಭಾಷಣ | ಕ್ರಿ. ಶ. 632, 63 ವರ್ಷ ವಯಸ್ಸಿನಲ್ಲಿ. |
| ಅಸ್ವಸ್ಥತೆ ಮತ್ತು ನಿಧನ | ಕ್ರಿ. ಶ. 632, 63 ವರ್ಷ ವಯಸ್ಸಿನಲ್ಲಿ. |


## MR. Q.S. KHAN IS ALSO AUTHOR OF FOLLOWING BOOKS.

**Management Topics:-**

- Law of success for both the Worlds. (Translated in Hindi & Marathi)
- How to Prosper Islamic Way? (Translated in Hindi & Urdu)

**Religious Topics:-**

- Teaching of Vedas and Quran (Translated in Hindi, Marathi & Gujarat)
- Hajj Journey Problems and their easy Solutions. (Translated in Urdu, Hindi, Gujarati, Bengali)
- Kya her Mah Chand dekhna Zaroori hai? (Translated in English, Arabic)

**Engineering Topics:-**

- Design and Manufacturing of Hydraulic Presses

All above mentioned books and many books could be studied and freely downloaded from:

**www.freeeducation.co.in**
**www.tanveerpublication.com**